ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 11, ಸಂಚಿಕೆ : 1 ಜುಲೈ – ಸಪ್ಟೆಂಬರ್ 2022
Volume : 11, Issue : 1 July - September 2022

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 11, Issue 1, July - September 2022

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಛಾಯಚಿತ್ರಗ್ರಹಣ : **Atheetha Brahma**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಭಾರತೀಯತೆಯನ್ನು ಜಾಗೃತಗೊಳಿಸುವ 'ನವೋತ್ಥಾನದ ಅದ್ವರ್ಯುಗಳು'**

❖ ಅಜಕ್ಕಳ ಗಿರೀಶ ಭಟ್ / 5

2. **ಪತ್ರಾಗಾರಗಳು ಮತ್ತು ಚರಿತ್ರೆಯ ನಿರೂಪಣೆ**

❖ ನವೀನ್ / 12

3. **ಗೋಪಾಲಕೃಷ್ಣ ಅಡಿಗರ "ಶ್ರೀರಾಮನವಮಿಯ ದಿವಸ" ನಾನು ಕಾಣುವ ಹಾಗೆ**

❖ ರಘು ಸೊಫೀನಾ / 20

3. **ಕನ್ನಡ ಸಂಶೋಧಕರಿಗೆ ಸವಾಲೊಡ್ಡುವ ಬಸವರಾಜಕಾರಣ**

❖ ಡಾ. ಅಜಕ್ಕಳ ಗಿರೀಶ ಭಟ್ / 28

4. **ಕನ್ನಡ ಕಾವ್ಯ ಪರಂಪರೆ : ವಸ್ತು ಮತ್ತು ಆಶಯ**

❖ ಡಾ. ಲಕ್ಷ್ಮೀಕಾಂತ ಪಂಚಾಳ / 42

5. **ಕನ್ನಡ ರಂಗಭೂಮಿ – ಐತಿಹಾಸಿಕ ನೆಲೆಗಳು**

❖ ಡಾ. ಎಚ್.ಎಮ್. ಚನ್ನಪ್ಪಗೋಳ / 50

6. **ಕರ್ನಾಟಕ ಕಾದಂಬರಿಯಲ್ಲಿ ಮನುಷ್ಯಜನ್ಮ ಮತ್ತು ಪ್ರಾಣಿಜನ್ಮಗಳ ನಡುವಿನ ತುಲನಾತ್ಮಕ ವಿವೇಚನೆ**

❖ ರವಿಶಂಕರ ಜಿ.ಕೆ. / 59

ಸಂಪಾದಕೀಯ

ಈ ಸಂಚಿಕೆಯೂ ಹಿಂದಿನ ಸಂಚಿಕೆಗಳಂತೆ ವೈವಿಧ್ಯಮಯ ಲೇಖನಗಳನ್ನು ಒಳಗೊಂಡಿದೆ. ಅಡಿಗರ ಕವನದ ಕುರಿತು ರಘು ಸೊಫಿನಾ ಅವರ ದೀರ್ಘ ಲೇಖನ ಇದರಲ್ಲಿಯೂ ಮುಂದುವರಿದಿದೆ. ಪತ್ರಾಗಾರಗಳ ಕುರಿತ ಡಾ. ನವೀನ್ ಅವರ ಲೇಖನವಿದೆ. ಕನ್ನಡ ಕಾವ್ಯ ಪರಂಪರೆ ಮತ್ತು ರಂಗಭೂಮಿ ಪರಂಪರೆಯ ಬಗ್ಗೆ ವಿಶ್ಲೇಷಣೆಗಳಿವೆ. ಕನ್ನಡದ ಸಂಶೋಧನಕ್ಷೇತ್ರವು ಹಿಡಿದಿರುವ ದಾರಿಯನ್ನು ಕಟುವಾಗಿಯೇ ಪ್ರಶ್ನಿಸುವ ಕೃತಿ ರವಿ ಹಂಜ್ ಅವರ 'ಬಸವರಾಜಕಾರಣ'. ಕನ್ನಡದಲ್ಲಿ ಚರ್ಚೆಯಾಗಬೇಕಿದ್ದ ಈ ಕೃತಿಯ ವಿಮರ್ಶೆಯೂ ಈ ಸಂಚಿಕೆಯಲ್ಲಿದೆ. ಓದುಗರು ಇಲ್ಲಿರುವ ಲೇಖನಗಳನ್ನು ಓದಿ ಪ್ರತಿಕ್ರಿಯೆ ನೀಡುವಂತೆ ಕೋರಿಕೆ.

– ಸಂ.

ಭಾರತೀಯತೆಯನ್ನು ಜಾಗೃತಗೊಳಿಸುವ 'ನವೋತ್ಥಾನದ ಅಧ್ವರ್ಯುಗಳು'

ಅಜಕ್ಕಳ ಗಿರೀಶ ಭಟ್
ಪ್ರಾಧ್ಯಾಪಕ
ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ – 574 237, ದ.ಕ.

ಈ ದೇಶಕ್ಕೆ ಒಂದು ಭವ್ಯ ಪರಂಪರೆಯಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಬಹಳ ಸಲ ಹೀಗೆ ಭವ್ಯ ಪರಂಪರೆ, ಸನಾತನ ಧರ್ಮ ಎಂದೆಲ್ಲ ಮಾತನಾಡಿದಾಗ 'ಅವರವರ ದೇಶದ ಬಗ್ಗೆ, ಪರಂಪರೆಯ ಬಗ್ಗೆ ಅವರವರಿಗೆ ಅಭಿಮಾನ ಇರುವುದು ಮತ್ತು ಇರಬೇಕಾದುದು ಸಹಜ; ಅದನ್ನು ಹೊಗಳಿಕೊಳ್ಳುವುದು ಕೂಡ ಸಹಜ' ಎಂದಷ್ಟೇ ಅನೇಕ ಮಂದಿ ಅಂದುಕೊಳ್ಳುತ್ತಾರೆ. ಆದರೆ ಪ್ರಪಂಚದ ಇತರ ದೇಶಗಳ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಮತ್ತು ಹೊರದೇಶಗಳಲ್ಲಿ ಹುಟ್ಟಿದ ರಿಲಿಜನ್ ಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದರೆ ಈ ದೇಶದಲ್ಲಿ ವಿಕಾಸಗೊಳ್ಳುತ್ತಾ ಬಂದ ಪರಂಪರೆಯ ಮಹತ್ತ್ವ ಅರ್ಥವಾದೀತು. ಭಾರತೀಯತೆಯ ಬಗೆಗೆ ಇರುವುದು ಕೇವಲ ಒಣಹೆಮ್ಮೆಯಲ್ಲ; ಅದು ತಥ್ಯಾಧಾರಿತವಾದುದು ಎಂದು ಗೊತ್ತಾದೀತು. ಸನಾತನ ಧರ್ಮದಲ್ಲಿ, ವೇದಕಾಲದಲ್ಲಿದ್ದ ಸಮನ್ವಯದ, ಸಾಮರಸ್ಯದ ಸಾಮಾಜಿಕ ಬದುಕಿಗೆ ಹಾನಿಯುಂಟುಮಾಡುವಂಥ ಅಸ್ಪೃಶ್ಯತೆ, ಜಾತಿಭೇದದಂಥ ಆಚರಣೆಗಳು ಮುಂದೆ ಕಾಲಾಂತರದಲ್ಲಿ ಅನ್ಯಾನ್ಯ ಕಾರಣಗಳಿಂದ ತಲೆಯೆತ್ತಿದಾಗ ಕಾಲಕಾಲಕ್ಕೆ ಆಧ್ಯಾತ್ಮಿಕ ಹಾಗೂ ಸಾಮಾಜಿಕ ನಾಯಕರು ಎಚ್ಚರವನ್ನು ನೀಡುತ್ತಾ ಬಂದುದೂ ಇದೆ.

ಭಾರತದ ನಿಜ ಅಸ್ಮಿತೆಯನ್ನು ಘಾತಿಸುವ ಪರಕೀಯ ಆಕ್ರಮಣಗಳು ಅನೇಕ ಶತಮಾನಗಳಿಂದ ಆಗಿವೆಯಾದರೂ ಈ ದೇಶದ ಸ್ವತ್ವವನ್ನೇ ವಿಸ್ಮೃತಿಗೊಳಪಡಿಸುವ ರೀತಿಯ ಪರಿಣಾಮವುಂಟಾದುದು ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯಲ್ಲಿ. ಶತಮಾನಗಳ ಹಿಂದೆಯೇ ನಲಂದದಂಥ ಶಿಕ್ಷಣಕ್ಷೇಂದ್ರಗಳನ್ನು ಧ್ವಂಸ ಮಾಡಿದ್ದಿದೆ. ಔರಂಗಜೇಬನಂಥ ಆಡಳಿತಗಾರರು ಬಗೆಬಗೆಯ ಹಾನಿಯನ್ನು ಉಂಟುಮಾಡಿ ಈ ದೇಶದ ಸಾಂಸ್ಕೃತಿಕ ಸಮೃದ್ಧಿಯನ್ನು ನಾಶ ಮಾಡಿದ್ದೂ ಇದೆ. ಆದರೂ ಶಿಕ್ಷಣದ ಸ್ವರೂಪದಲ್ಲಿ ಮೂಲಭೂತ ಬದಲಾವಣೆಯಾಗದಿದ್ದುದರಿಂದ ಹೆಚ್ಚಿನ ಸಾಂಸ್ಕೃತಿಕ ವಿಸ್ಮೃತಿಗೆ ದೇಶ ಒಳಗಾಗಿರಲಿಲ್ಲ. ಆದರೆ ಬ್ರಿಟಿಷರ ಆಡಳಿತ ವ್ಯವಸ್ಥೆಯ ಪರಿಣಾಮವಾಗಿ ಈ ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡುದಷ್ಟೇ ಅಲ್ಲ; ತನ್ನ ಚಿಂತನಾಕ್ರಮವನ್ನೇ ಪರಕೀಯವಾಗಿಸಿಕೊಂಡಿತು. ಕುಗ್ಗಿ ಹೋಗಿದ್ದ ಭಾರತೀಯತೆಯು ನವೋತ್ಥಾನಕ್ಕಾಗಿ ಕಾಯುತ್ತಿತ್ತು. ಜಗತ್ತು ಭಾರತವನ್ನು ಹೇಗೆ ನೋಡಬೇಕು; ಭಾರತದತ್ತ ಯಾಕಾಗಿ ನೋಡಬೇಕು; ಹೊರಜಗತ್ತಿಗೆ ಕೊಡುವಂಥದ್ದು ಭಾರತದಲ್ಲಿ ಏನಿದೆ ಎನ್ನುವುದನ್ನೆಲ್ಲ ತೋರಿಸಿಕೊಡಬೇಕಾದವರ ನಿರೀಕ್ಷೆಯಲ್ಲಿ ದೇಶವಿತ್ತು.

ಹೀಗೆ ಪಶ್ಚಿಮದ ಆಳ್ವಿಕೆಯ ನಡುವಿನಲ್ಲಿಯೇ ದೇಶದ ಜನತೆಯನ್ನು ಜಾಗೃತಗೊಳಿಸಿ ಭಾರತೀಯತೆಯ ನವೋತ್ಥಾನಕ್ಕೆ ಕಾರಣರಾದ ಎಂಟು ಮಹನೀಯರ ಕೊಡುಗೆಯನ್ನು 'ನವೋತ್ಥಾನದ ಅದ್ವರ್ಯುಗಳು' ಎಂಬ ಪುಸ್ತಕದಲ್ಲಿ ಆದರಣೀಯರಾದ ನಾಡೋಜ ಎಸ್.ಆರ್. ರಾಮಸ್ವಾಮಿಯವರು ದಾಖಲಿಸಿದ್ದಾರೆ. ಈ ಒಬ್ಬೊಬ್ಬ ಸಾಧಕರ ಬಗ್ಗೆಯೂ ನೂರಾರು ಅಥವಾ ಸಾವಿರಾರು ಪಟಗಳಲ್ಲಿ ಬರೆಯಬಹುದಾದಷ್ಟಿದೆ. ಈ ಎಲ್ಲ ಸಾಧಕರ ಕುರಿತಾಗಿ ಹಲವು ಪುಸ್ತಕಗಳೂ ಬಂದಿವೆ. ಆದರೆ ಸಂಕ್ಷೇಪವಾಗಿ ಸಾರವನ್ನೆಲ್ಲ ಹೇಳುವ ಕಲೆ ವಿರಳ. ಅಂತಹ ವಿರಳರಲ್ಲಿ ಎಸ್.ಆರ್. ರಾಮಸ್ವಾಮಿಯವರು ಅಗ್ರಪಂಕ್ತಿಯಲ್ಲಿದ್ದಾರೆ. ಅವರು ಹಲವು ಭಾಷೆಗಳ ಮೇಲೆ ಹಿಡಿತವಿರುವವರು. ಕಾವ್ಯ–ಸಾಹಿತ್ಯ, ಶಾಸ್ತ್ರ, ಇತಿಹಾಸಾದಿ ವಿಭಾಗಗಳಲ್ಲಿ ವಿಸ್ತಾರವಾದ ಓದು ಇರುವವರು. ಹಲವಾರು ದಶಕಗಳಿಂದ ಪತ್ರಿಕೆಗಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಮುಂತಾದ ವಿವಿಧ ವಿಷಯಗಳ ಬಗ್ಗೆ ಬರೆಯುತ್ತಿರುವ, ಅನುವಾದಗಳನ್ನು ಮಾಡುತ್ತಿರುವ ನಾಡೋಜ ರಾಮಸ್ವಾಮಿಯವರದು ಪಳಗಿದ ಕೈ ಎಂದು ಹೇಳುವುದು ಕ್ಲೀಷೆಯೇ ಸರಿ.

ರಾಮಸ್ವಾಮಿಯವರು ಬರೆದ ಲೇಖನಗಳನ್ನು ಮತ್ತು ಇತರ ಹತ್ತಾರು ಕೃತಿಗಳನ್ನು ನೋಡಿದರೂ ಅಲ್ಲೆಲ್ಲ ಸಾಮಾನ್ಯವಾದ ಒಂದು ಅಂಶವೆಂದರೆ ರಾಷ್ಟ್ರದ ಕುರಿತಾದ ಕಾಳಜಿ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಾಮರಸ್ಯ ಮತ್ತು ಸಾಂಸ್ಕೃತಿಕ ಸಮೃದ್ಧಿ ಅಥವಾ ರಾಷ್ಟ್ರಹಿತ ಯಾವುದರಲ್ಲಿದೆ ಎನ್ನುವುದನ್ನು ರಾಷ್ಟ್ರಕರಿಗೆ ತೋರಿಸುವ ಕೆಲಸವನ್ನು ರಾಮಸ್ವಾಮಿಯವರು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ನಾಡು, ನುಡಿ, ಕವಿ–ಸಾಹಿತಿಗಳ ಬಗೆಗಿನ ಅವರ ಎಲ್ಲ ಬರವಣಿಗೆಗಳಲ್ಲೂ ಇರುವುದು ಭಾರತೀಯತೆಯ ಕಡೆಗಿನ ತುಡಿತ. ಸ್ವಾತಂತ್ರ್ಯಾಂದೋಲನದಲ್ಲಿ ರಾಜಕೀಯ ನೇತೃತ್ವವನ್ನು ವಹಿಸಿದವರ ಬಗ್ಗೆ ಅಥವಾ ಸಶಸ್ತ್ರ ಕ್ರಾಂತಿಕಾರಿ ಹೋರಾಟ ಮಾಡಿದವರ ಬಗ್ಗೆ ರಾಮಸ್ವಾಮಿಯರಿಗೆ ಅಪಾರ ಆದರ, ಅಭಿಮಾನ, ಗೌರವ ಎಲ್ಲ ಇದೆ. ಅಂಥವರ ಬಗ್ಗೆ ಅವರು ಬರೆದೂ ಇದ್ದಾರೆ. ಆದರೆ ಸ್ವತ್ವದ ಜಾಗೃತಿಯಿಲ್ಲದಿದ್ದರೆ ಸ್ವಾತಂತ್ರ್ಯದ ಹಂಬಲವೆಲ್ಲಿಯದು? ನಾವು ಪರಕೀಯರ ಆಳ್ವಿಕೆಯಲ್ಲಿದ್ದೇವೆ; ನಮಗೆ ಸ್ವಾತಂತ್ರ್ಯದ ಅಗತ್ಯ ಇದೆ ಎನ್ನುವ ಸ್ಪಷ್ಟ ಭಾವನೆ ರೂಪುಗೊಳ್ಳಬೇಕಾದರೂ ಸ್ವತ್ವದ ಬಗೆಗಿನ ಒಂದು ಮಟ್ಟಿನ ಜಾಗೃತಿ ಅಗತ್ಯವಿದೆ. ಅಂತಹ ಜಾಗೃತಿಯನ್ನು ಮೂಡಿಸಿದವರು ರಾಜಕೀಯ ಆಂದೋಲನಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೇರಣೆಯಾದರು. ಹೀಗಾಗಿ ಈ ಕೃತಿಯಲ್ಲಿ ರಾಮಸ್ವಾಮಿಯವರು ಪರಿಚಯಿಸುವ ಅದ್ವರ್ಯುಗಳು ಹೆಚ್ಚು ಮುಖ್ಯವಾದ ಮತ್ತು ಮೂಲಭೂತವಾದ ಇನ್ನೊಂದು ಬಗೆಯ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಎನ್ನಬೇಕು. ಹತ್ತೊಂಬತ್ತನೇ ಶತಮಾನ ಆರಂಭದ ವರ್ಷಗಳಲ್ಲಿ ಸಕ್ರಿಯರಾಗಿದ್ದ ರಾಜಾರಾಮ ಮೋಹನ ರಾಯರಿಂದ ತೊಡಗಿ ಇಪ್ಪತ್ತನೇ ಶತಮಾನದ ಪೂರ್ವಾರ್ಧದವರೆಗಿನ ಅವಧಿಯಲ್ಲಿ ಭಾರತದ ಸಾಂಸ್ಕೃತಿಕ ಪರಿಸ್ಥಿತಿಯನ್ನು ಸಕಾರಾತ್ಮಕವಾಗಿ ಪ್ರಭಾವಿಸಿದವರ ವಿವರ ಈ ಕೃತಿಯಲ್ಲಿದೆ.

ಹೇಳಬೇಕಾದುದನ್ನು ಕಡಿಮೆ ಪದಗಳಲ್ಲಿ ಹೇಳುವ ಕಲೆ ರಾಮಸ್ವಾಮಿಯವರದು ಎಂದೆನಲ್ಲವೆ? ಭಾರತದ ಮೇಲೆ ಹೊರಗಿನವರ ನಿರಂತರ ಆಕ್ರಮಣವಾಗಲು ಏನು ಕಾರಣ; ಆದರೂ ಭಾರತದ ಚೈತನ್ಯ ಉಳಿದುಕೊಂಡಿರುವುದು ಹೇಗೆ ಎನ್ನುವುದನ್ನೆಲ್ಲ ಕೆಲವೇ ಪದಗಳ ಮೂಲಕ ಪುಸ್ತಕದ 'ಭೂಮಿಕೆ'ಯಲ್ಲಿ ಅವರು

ಸೂಚಿಸುತ್ತಾರೆ – "ಭಾರತದ ಸಂಸ್ಕೃತಿಯು ಬಾಹುಬಲದ ಮೇಲೆ ಅವಲಂಬಿತವಾಗದೆ ಜ್ಞಾನಪ್ರಕಾಶವನ್ನೂ ಆಧ್ಯಾತ್ಮಿಕ ಔಜ್ಜ್ವಲ್ಯವನ್ನೂ ಆಧರಿಸಿರುವುದು ಈ ಚಿರಂತನತೆಗೆ ಮುಖ್ಯ ಕಾರಣ. ಈ ಅರ್ಥದಲ್ಲಿ ಬಾರತದ್ದೇ ನಿಜವಾದ 'ನಾಲೆಡ್ಜ್ ಸೊಸೈಟಿ'"(ಪು.1). ಈ ಇಡೀ ಕೃತಿಯು ಭಾರತದ ಜ್ಞಾನಪ್ರಕಾಶವನ್ನು ಮತ್ತು ಆಧ್ಯಾತ್ಮಿಕ ಔಜ್ಜ್ವಲ್ಯವನ್ನು ಜಗತ್ತಿಗೆ ತೋರಿಸಿಕೊಟ್ಟವರನ್ನು ಪರಿಚಯಿಸುತ್ತದೆ. ರಾಮಸ್ವಾಮಿಯವರು ಈ ಕೃತಿಯ ಮೂಲಕ ಮಾಡಿರುವುದು ಜ್ಞಾನಪ್ರಕಾಶವನ್ನು ಬೀರುವ ಹಣತೆಗೆ ಎಣ್ಣೆ ಹೊಯ್ಯುವ ಮತ್ತು ಮತ್ತಷ್ಟು ಹಣತೆಗಳನ್ನು ಹಚ್ಚುವ ಕೆಲಸ. ಇದು ನಿರಂತರವಾಗಿ ಆಗಬೇಕಾದ ಕೆಲಸ. ಯಾಕೆಂದರೆ ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದರೂ ನಾವು ಬೌದ್ಧಿಕವಾಗಿ ಸ್ವತಂತ್ರರಾಗಿದ್ದೇವೆಯೇ ಎನ್ನುವ ಪ್ರಶ್ನೆಯನ್ನು ಕೇಳಿಕೊಂಡಾಗ ಇಲ್ಲ ಎಂದೇ ಅನಿಸುತ್ತದೆ. ವಿವೇಕಾನಂದರಂತಹ ಪ್ರಖರ ಬೆಳಕನ್ನೇ 'ಹಿಂದೂ ಸನ್ಯಾಸಿ' ಎಂಬ ಕಾರಣಕ್ಕಾಗಿ ಸೆಕ್ಯುಲರಿಸಮ್ಮಿನ ನೆಪದಲ್ಲಿ ಕತ್ತಲಲ್ಲಿ ಇಡುವ ಯತ್ನ ಇಂದಿಗೂ ನಡೆದೇ ಇದೆ! ನಮ್ಮ ಬೌದ್ಧಿಕ ಸ್ವಾತಂತ್ರ್ಯವನ್ನು ಅಥವಾ ಚಿಂತನೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಮತ್ತೆ ಪಡೆದುಕೊಳ್ಳಲು ಇಂಥ ಪುಸ್ತಕಗಳು ಪ್ರೇರಣೆಯಾಗಬಲ್ಲವು.

ವಾಸ್ತವವಾಗಿ ರಾಮಸ್ವಾಮಿಯವರು ಕೃತಿಯ 'ಭೂಮಿಕೆ'ಯಲ್ಲಿ ಈ ಕಾಲದಲ್ಲಿ ಈ ಪುಸ್ತಕದ ಪ್ರಸ್ತುತತೆ ಏನು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ರಾಮಸ್ವಾಮಿಯವರು ಹೇಳುವಂತೆ, "ನಾಗರಿಕತೆಯೂ ಸಭ್ಯತೆಯೂ ಬರ್ಬರತೆಯನ್ನು ಸಮರ್ಥವಾಗಿ ಎದುರಿಸಲಾರದು ಎಂಬುದು ಇತಿಹಾಸದುದ್ದಕ್ಕೂ ಹಲವಾರು ಬಾರಿ ಸಾಕ್ಷ್ಯಗೊಂಡಿದೆ"(ಪು. 2). ಹೀಗಾಗಿ ಸಾಂಸ್ಕೃತಿಕ, ಆಧ್ಯಾತ್ಮಿಕ ನವೋತ್ಥಾನದ ಜೊತೆಗೆ ರಾಜಕೀಯ ಸ್ವಾತಂತ್ರ್ಯವೂ ಅಗತ್ಯ. ರಾಜಕೀಯ ಕ್ಷಾತ್ರವಿಲ್ಲದೆ ಹೋದಾಗ ಜ್ಞಾನಪ್ರಕಾಶಕ್ಕೆ ಕತ್ತಲ ಮುಸುಕನ್ನು ಹಾಕಲು ಯತ್ನಿಸುವವರನ್ನು ಎದುರಿಸಬಲ್ಲ ಬೌದ್ಧಿಕಕ್ಷಾತ್ರಶಕ್ತಿಯೂ ಸೋಲಬೇಕಾಗುತ್ತದೆ ಎನ್ನುವುದೂ ವಿದಿತವೇ ಆಗಿದೆ. ಮತವಿಸ್ತರಣೆಯೇ ಮುಖ್ಯವೆಂದು ಭಾವಿಸುವ ರಿಲಿಜನ್‌ಗಳಿಗಿಂತ ಪಾಗನ್ ಎಂದು ಕರೆಯಲಾಗುವ ಸಂಸ್ಕೃತಿಗಳೇ ಲೋಕಕ್ಕೆ ಹಿತಕಾರಿಯೆಂಬುದು ಸ್ವಯಂವೇದ್ಯ. ಇಂದು ಪ್ರಗತಿಪರರೆಂದು ತಮ್ಮನ್ನು ತಾವೇ ಕರೆದುಕೊಳ್ಳುವವರು ಮತ್ತೆ ಹೊಸತಾಗಿ ಪ್ರಚುರಿಸುತ್ತಿರುವ 'ಬಹುತ್ವ'ವು ಪಾಗನ್ ಸಂಸ್ಕೃತಿಗಳ ಸಹಜ ಗುಣವೇ ಆಗಿದೆ. ಇಂತಹ ಪಾಗನ್ ಗುಣಗಳನ್ನು ಉಳಿಸಿಕೊಳ್ಳಲು ಕಾರಣರಾದವರು ರಾಜಾರಾಮ ಮೋಹನ ರಾಯ್, ಸ್ವಾಮಿ ವಿವೇಕಾನಂದರಂತಹ ದಾರ್ಶನಿಕರು. ಭಾರತೀಯರ ಮಾನಸಿಕತೆಯನ್ನು ಮೆಕಾಲೆಯ ನೀತಿಯಂತೆ ಉದ್ದೇಶಪೂರ್ವಕವಾಗಿ ಹಾಗೂ ಕೆಲವೊಮ್ಮೆ ಅಪ್ರಜ್ಞಾಪೂರ್ವಕವಾಗಿ ಆಂಗ್ಲೀಕರಿಸುವ ಯತ್ನವು ಸಾಗಿದ್ದ ಅವಧಿಯಲ್ಲಿ ವಿಶೇಷ ಪ್ರತಿಭೆ, ಅಂತಶ್ಶಕ್ತಿ, ಕಾಣ್ಕೆ ಇದ್ದವರು ಮಾತ್ರವೇ ಪ್ರವಾಹದ ವಿರುದ್ಧ ಈಜಬಲ್ಲವರಾಗಿದ್ದರು. 'ನವೋತ್ಥಾನದ ಅದ್ವರ್ಯುಗಳು' ಕೃತಿಯ ಮೂಲಕ ರಾಮಸ್ವಾಮಿಯವರು ಇಂತಹ ಧೀಶಕ್ತಿ ಇದ್ದವರ ಸಾಧನೆಯನ್ನು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಲೇಖಕರು ಹೇಳುವಂತೆ ಇವರೆಲ್ಲ ಪ್ರತಿಕೂಲ ಪರಿಸ್ಥಿತಿಯಲ್ಲಿಯೇ ವಿಶೇಷ ಸಾಧನೆ ಮಾಡಿದವರು.

ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತ ಮಿಷನರಿಗಳ ಪ್ರಭಾವವೂ ದಟ್ಟವಾಗಿತ್ತು. ಎಲ್ಲ ಸಮಾಜಗಳಲ್ಲೂ ಸಮುದಾಯಗಳಲ್ಲೂ ಅರೆಜಿಜ್ಞಾಸುಗಳು ಇರುತ್ತಾರೆ. ಅರೆವೈಚಾರಿಕತೆಗೆ ಅವರು ಬೇಗ ಬಲಿಬೀಳುತ್ತಾರೆ. ಉದಾಹರಣೆಗೆ 'ನಿಮ್ಮ ದೇವರು

ಮದುವೆಯಾಗಿದ್ದಾನೆ! ನಿಮ್ಮ ದೇವರ ಹೆಂಡತಿಯನ್ನು ಕದ್ದೊಯ್ದರು ಎನ್ನುತ್ತಾರೆ! ಇದೇನು ಸರ್ವಶಕ್ತನಿಗೂ ಹೀಗಾಗುವುದೇ?' ಎಂದೆಲ್ಲ ಅರೆವೈಚಾರಿಕರು (ಮಿಷನರಿ ಮತಾಂತರಕೋರರು) ಪ್ರಶ್ನಿಸಿದಾಗ 'ಹೌದಲ್ಲ!' ಅನಿಸಿಬಿಡುತ್ತದೆ ಅರೆಜಿಜ್ಞಾಸುಗಳಿಗೆ. ಈ ಬಗೆಯ ಅರೆಜಿಜ್ಞಾಸುಗಳು ಈಗಲೂ ಇದ್ದಾರೆ. ಅಂಥವರು ತೆರೆದ ಮನಸ್ಸಿನಿಂದ ವಿವೇಕಾನಂದ, ಅರವಿಂದ ಮೊದಲಾದ ದಾರ್ಶನಿಕರನ್ನು ಓದಬೇಕು. ಅಂಥ ಓದಿಗೆ ಈ ಪುಸ್ತಕ ಆರಂಭದ ಮೆಟ್ಟಲಾದೀತು.

ಆಧುನಿಕೀಕರಣವೆಂಬುದು ಸಹಜ ಪ್ರಕ್ರಿಯೆ ಎಂದು ವಾದಿಸುವವರು ಬಹಳ ಮಂದಿಯಿದ್ದಾರೆ. ಆದರೆ ರಾಮಸ್ವಾಮಿಯವರು ಈ ಕುರಿತು ಹೇಳುವ ಮಾತು ಗಮನಾರ್ಹವಾಗಿದೆ. "ತಮ್ಮ ಸಾಂಪ್ರದಾಯಿಕ ಪದ್ಧತಿಗಳನ್ನು ಉಳಿಸಿಕೊಂಡೂ ಆಧುನಿಕ ಪಾಶ್ಚಾತ್ಯ ಪ್ರಗತಿಯ ಹಲವು ಅಂಶಗಳನ್ನು ಅಳವಡಿಸಿಕೊಳ್ಳುವುದು ಭಾರತದಂತಹ ಪ್ರಾಚೀನ ರಾಷ್ಟ್ರಕ್ಕೆ ಉಪಯುಕ್ತವಾಗಬಹುದಿತ್ತು. ಜಪಾನ್ ದೇಶ ನುಸರಿಸಿದುದು ಇದೇ ಮಾರ್ಗವನ್ನು"(ಪು.7). ನಮ್ಮ ದೇಶದ ಸಂಸ್ಕೃತಿ– ಸಂಪ್ರದಾಯಗಳನ್ನು ವಿಮರ್ಶಾತ್ಮಕವಾಗಿ ನೋಡಿ ಪರಿಷ್ಕಾರಗಳನ್ನು ಹೇಳಿ ಸಮನ್ವಯಕ್ಕೆ ದಾರಿ ತೋರಿಸಬಹುದಾಗಿದ್ದವರು ರಾಜರಾಮ ಮೋಹನರಾಯ, ವಿವೇಕಾನಂದರಂಥ ಈ ಅಧ್ವರ್ಯುಗಳೇ. ಈ ದಾರ್ಶನಿಕರ ಚಿಂತನೆಗಳನ್ನು ಇಪ್ಪತ್ತನೇ ಶತಮಾನದ ರಾಜಕೀಯ ನಾಯಕರು ಸಾಕಷ್ಟು ಅಳವಡಿಸಿಕೊಳ್ಳಲಿಲ್ಲ ಎನ್ನುವುದು ವಿಷಾದ ಸಂಗತಿ. ರಾಮಸ್ವಾಮಿಯವರು ಕೃತಿಯ 'ಭೂಮಿಕೆ'ಯಲ್ಲಿ ಆಡುವ ಮಾತುಗಳಲ್ಲಿ ಇರುವ ಸೂಚನೆಯೂ ಇದುವೇ. ಈ ಕಾರಣಕ್ಕಾಗಿಯೇ ಬಹುಶಃ ನೆಹರೂ ಬಗ್ಗೆ ಬಹುಜನರಿಗೆ ಗೊತ್ತಿಲ್ಲದ ಒಂದು ಮಾಹಿತಿಯನ್ನು ರಾಮಸ್ವಾಮಿಯವರು ನೀಡುತ್ತಾರೆ. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಬಹುಮಂದಿ ಭಾರತೀಯರು ತುಂಬಿಕೊಂಡಿರುವುದರಿಂದ ತಾನು ಆಕ್ಸ್‌ಫರ್ಡಿಗೆ ಸ್ಥಾನಾಂತರಗೊಳ್ಳಲು ಬಯಸಿರುವುದಾಗಿ ಜವಾಹರಲಾಲರು ತಂದೆ ಮೋತಿಲಾಲ್ ನೆಹರುರವರಿಗೆ ಪತ್ರ ಬರೆದಿದ್ದರು.(ಪು.10). ಇದಕ್ಕೆ ಪೂರಕವಾಗಿ ಸೀತಾರಾಮ ಗೋಯಲ್ ಅವರ ವಿಶ್ಲೇಷಣೆಯನ್ನೂ ರಾಮಸ್ವಾಮಿಯವರು ಉದ್ಧರಿಸುತ್ತಾರೆ. "ಜವಾಹರಲಾಲ್ ನೆಹರೂ ಅವರು ಇಸ್ಲಾಂ, ಕ್ರೈಸ್ತಮತ, ಬಿಳಿಯರ ಜನಾಂಗೀಯ ಪ್ರತಿಷ್ಠೆ, ಕಮ್ಯೂನಿಸಂ– ಈ ಎಲ್ಲ ಸಾಮ್ರಾಜ್ಯಾನುವರ್ತಿ ಪ್ರವೃತ್ತಿಗಳ ಮಿಶ್ರಣದ ಮೂರ್ತರೂಪವರಾಗಿದ್ದರು"(ಪು.10). ನೆಹರೂ ಅವರ ಈ ದೃಷ್ಟಿಕೋನವು ಎಷ್ಟೊಂದು ದೂರಗಾಮೀ ದುಷ್ಪರಿಣಾಮ ಉಂಟುಮಾಡಿತು ಎನ್ನುವುದನ್ನು ಹೇಳುವುದು ಕಷ್ಟ.

ಆಂಗ್ಲ ಮಾನಸಿಕತೆ ಮುಂದುವರಿದಿರುವುದು ಮತ್ತು ನಮ್ಮ ದೇಶದ ಮುಂಚೂಣಿ ಚಿಂತಕರು ಎನಿಸಿಕೊಂಡವರು ಬೌದ್ಧಿಕ ದಾಸ್ಯಕ್ಕೆ ಒಳಗಾಗಿರುವುದನ್ನು ರಾಮಸ್ವಾಮಿಯವರು ಹೀಗೆ ಗುರುತಿಸುತ್ತಾರೆ. – ಒಳಹೊಕ್ಕು ನೋಡಿದಾಗ ಈಚಿನ ದಶಕಗಳಲ್ಲಿ 'ಸೆಕ್ಯುಲರಿಸಂ' ಎಂಬ ಹೆಸರಿನಲ್ಲಿ ಚಲಾವಣೆಗೊಂಡಿರುವ ಧೋರಣೆಯು ಬ್ರಿಟಿಷ್ ಸಾಮ್ರಾಜಶಾಹಿ ಧೋರಣೆಯ ಮುಂದುವರಿಕೆಯಲ್ಲದೆ ಬೇರೆಯಲ್ಲ. ಎಲ್ಲ ಲಬ್ಧ ಮರ್ಗಗಳ ಮೂಲಕವೂ ದೇಶೀಯ ಸಮಾಜದ ಸಂಘಟಿತತೆಯನ್ನು ದುರ್ಬಲಗೊಳಿಸುವುದು ಸಾಮ್ರಾಜ್ಯಪ್ರಭುತ್ವಕ್ಕೆ ಅನುಕೂಲಕರವಾಗಿದ್ದಿತು. ಅದರಂತೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅಧಿಕಾರಗ್ರಹಣಕ್ಕೆ ಸಾಧನವಾಗಿ ಸಮಾಜದಲ್ಲಿ ಭಿನ್ನತೆಗಳನ್ನು

ಪೋಷಿಸಲಾಗಿದೆ. ಯಾವುದೇ ಮಂಡನೆಗೆ – ಅದೆಷ್ಟೇ ಸತ್ಯದೂರವಾಗಿದ್ದರೂ– ಪ್ರಭುತ್ವದ ಕೃಪಾಪೋಷಣೆ ದೊರೆತಲ್ಲಿ ಅದಕ್ಕೆ ಒಂದು ಬಗೆಯ ಅಧಿಕೃತತೆ ಲಭಿಸಿಬಿಡುತ್ತದೆ. ಅದರ ನಿರಾದಾರತೆಯನ್ನು ಪ್ರಶ್ನಿಸುವವರು ಸರ್ಕಾರಗಳ ಮತ್ತು ಅವುಗಳ ವಂಧಿಮಾಗಧರ ಅವಕೃಪೆಗೀಡಾಗಿ ಅವರ ಪ್ರಭಾವದ ಕಕ್ಷೆಯಿಂದ ಹೊರಗೇ ಶ್ರಮಿಸಬೇಕಾಗುತ್ತದೆ". ರಾಮಸ್ವಾಮಿಯವರು ಹೇಳುವ ಇನ್ನೂ ಮುಖ್ಯವಾದ ಮಾತೆಂದರೆ, "ಅಸಮತೋಲಿತ ಚಿಂತನೆಗೆ ಅನುಗುಣವಾಗಿಯೆ ಸರ್ಕಾರಗಳ ಧೋರಣೆಗಳು ರೂಪುಗೊಂಡಿರುವುದು ಈಗಿನ ಆಭಾಸ"(ಪು. 11). ನಮ್ಮ ಮೊದಲ ಪ್ರಧಾನಿ ನೆಹರೂ ಅವರನ್ನು ಭಾರತೀಯ ಮಾದರಿಯ ಸೆಕ್ಯುಲರಿಸಂನ ಹರಿಕಾರರೆಂದು ಕರೆಯುವವರಿದ್ದಾರೆ. ಆದರೆ ಮತಧರ್ಮ ಅಥವಾ ರಿಲಿಜನ್ನುಗಳ ಬಗ್ಗೆ ತೌಲನಿಕವಾಗಿ ಅವರು ಏನನ್ನೂ ಅಧ್ಯಯನ ಮಾಡಿದಂತೆ ತೋರುವುದಿಲ್ಲ. ಎಲ್ಲ ಧರ್ಮಗಳೂ ಒಳ್ಳೆಯದನ್ನೇ ಹೇಳುತ್ತವೆ ಎನ್ನುವ ಒಂದು ದುಂಡನೆಯ ಹೇಳಿಕೆಯಿದೆಯಲ್ಲವೆ? ಅಂಥ ತಿಪ್ಪೆ ಸಾರಿಸುವಂಥ ಧೋರಣೆಯೇ ನೆಹರೂ ಅವರಲ್ಲಿ ಇದ್ದುದು. ಇಸ್ಲಾಮನ್ನು ಅಧ್ಯಯನ ಮಾಡಿದ ಡಾ. ಅಂಬೇಡ್ಕರ್ ಅವರ ದಾರ್ಶನಿಕ ಮಾತುಗಳನ್ನೂ ನೆಹರೂ ಕೇಳಿಸಿಕೊಂಡಂತೆ ಕಾಣದು. ಹೀಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪರಸ್ಪರ ಪೋಷಿಸಿಕೊಂಡ ಪ್ರಭುತ್ವ ಮತ್ತು ತಥಾಕಥಿತ ಚಿಂತಕರ ಅಪಚಿಂತನೆಗಳು – ಇವೆರಡರ ಕಾರಣದಿಂದ ನಮ್ಮ ಸಮಾಜದಲ್ಲಿರುವ ಸಮಸ್ಯೆಗಳೇನು ಎನ್ನುವುದೂ ಈಗಿನ ಸಮಾಜವಿಜ್ಞಾನಿಗಳಿಗೆ ಸರಿಯಾಗಿ ಅರ್ಥವಾದಂತೆ ತೋರುವುದಿಲ್ಲ. ಸಮಸ್ಯೆಯೇ ಅರ್ಥವಾಗದೆ ಪರಿಹಾರ ಹೇಗೆ ಸಾಧ್ಯವಾದೀತು?

ಸಾಮಾಜಿಕ ಜೀವನವನ್ನು ಅಸ್ಥಿರಗೊಳಿಸುವ ಇಂಥ ಗೊಂದಲಗಳಿಂದ ಹೊರಬರಲು ಸಹಾಯ ಮಾಡಬಹುದಾದುದು ಇತಿಹಾಸಪ್ರಜ್ಞೆ ಎಂದು ರಾಮಸ್ವಾಮಿಯವರು ಹೇಳುತ್ತಾರೆ. ವಿಕೃತಿಗಳಿಂದ ಮುಕ್ತಗೊಂಡ ಇತಿಹಾಸ ಮಾತ್ರ ಈ ನಿಟ್ಟಿನಲ್ಲಿ ನಮಗೆ ಸಹಾಯ ಮಾಡಬಲ್ಲುದು. ಈ ನಿಟ್ಟಿನಲ್ಲಿ ಸುಮಾರು ಒಂದೂವರೆ ಶತಮಾನದಷ್ಟು ಅವಧಿಯ ನವೋತ್ಥಾನ ಪರ್ವವನ್ನು ಪರಿಚಯಿಸುವುದು ರಾಮಸ್ವಾಮಿಯವರ ಕೃತಿಯ ಉದ್ದೇಶ.

ದೇಶದ ಉಳಿಯುವಿಕೆಗೂ ಏಳಿಗೆಗೂ ಬ್ರಾಹ್ಮ ಮತ್ತು ಕ್ಷಾತ್ರ ಎರಡೂ ಅಗತ್ಯ ಎನ್ನುವುದನ್ನು ಇತಿಹಾಸವು ತೋರಿಸಿಕೊಟ್ಟಿದೆ. ರಾಮಸ್ವಾಮಿಯವರು ಸರಿಯಾಗಿಯೇ ಗುರುತಿಸಿರುವಂತೆ, "ಬ್ರಾಹ್ಮ ಮತ್ತು ಕ್ಷಾತ್ರಗಳ ಸಾಹಚರ್ಯವೇ ಪರಮ ಆದರ್ಶ ಮತ್ತು ಯಾವುದೇ ರಾಷ್ಟ್ರದ ಏಳ್ಗೆಗೆ ನಿರ್ಣಾಯಕ ಎಂಬುದು ಹಿಂದೂ ಪಾರಂಪರಿಕ ವಾಙ್ಮಯದಲ್ಲಿ ಸುಸ್ಪಷ್ಟವೇ ಆಗಿದ್ದರೂ 19–20ನೇ ಶತಮಾನದ ಸಂಧಿಕಾಲಕ್ಕೆ ಇದರ ಅನ್ವೇಯತೆಯನ್ನು ಪರಿಸ್ಫುಟಗೊಳಿಸಿದವರು ಸ್ವಾಮಿ ದಯಾನಂದ ಸರಸ್ವತಿಗಳು, ಸ್ವಾಮಿ ವಿವೇಕಾನಂದರು ಮತ್ತು ನಿರ್ಣಾಯಕ ಸಮಯದಲ್ಲಿ ಶ್ರೀ ಅರವಿಂದರು"(ಪು. 165).

ಈ ಪುಸ್ತಕದಲ್ಲಿ ಪರಿಚಯಿಸಲಾದ ದಾರ್ಶನಿಕರು ಸುದಾರಣಾ ಮನೋಭಾವದವರು. ಮತೀಯ ಸಂಕುಚಿತತೆಗೆ ಒಳಗಾದವರು ಒಬ್ಬರೂ ಇಲ್ಲ. ಎಲ್ಲರೂ ಆರ್ಷವಾಙ್ಮಯದ ಮಹತ್ತ್ವವನ್ನು ಮನಗಂಡವರು. ಅದರ ವಿಶ್ವಮಾನವತೆಯನ್ನೂ ಸಮಾನತೆಯ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲು ಯತ್ನ ಮಾಡಿದವರು. ತಮ್ಮ ಕಾಲದ ಆಚರಣೆ–ಸಂಪ್ರದಾಯಗಳಲ್ಲಿದ್ದ ನ್ಯೂನತೆಗಳನ್ನು ವಿಮರ್ಶೆಗೊಡ್ಡಿದವರಾದ್ದರಿಂದ ಭಾರತದ ಗೊಡ್ಡುಸಂಪ್ರದಾಯವಾದಿಗಳನ್ನೂ ಎದುರುಹಾಕಿಕೊಳ್ಳಬೇಕಾದ ಅನಿವಾರ್ಯತೆ ಈ

ಅದ್ವರ್ಯುಗಳಿಗೆ ಇತ್ತು. ಸ್ವತ್ವವನ್ನು ನೆನಪಿಸಿಕೊಡುವುದು ಅಥವಾ ಬಾರತೀಯತೆಯನ್ನು ನೆನಪಿಸುವುದು ಅಥವಾ ವಿಸ್ಮೃತಿಯನ್ನು ತೊಡೆದುಹಾಕುವುದು ಎಂದರೆ ಹೊಸ ನುಡಿಗಟ್ಟನ್ನು ಕಟ್ಟಿಕೊಡುವುದೂ ಹೌದು. ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುವುದಾದರೆ, ಯಾವದೋ ಒಂದು ವಿಚಾರ ಸರಿಯಲ್ಲ ಎಂದು ನಮಗೆ ಗೊತ್ತಾಗುತ್ತದೆ; ಆದರೆ ಯಾಕೆ ಸರಿಯಲ್ಲ ಎನ್ನುವುದನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ತರ್ಕಬದ್ಧವಾಗಿ ಹೇಳಬೇಕಾದರೆ ಅದಕ್ಕೆ ತಕ್ಕುದಾದ ವಾದಕ್ರಮ, ನುಡಿಗಟ್ಟುಗಳು ಸಿದ್ಧಿಸಿರಬೇಕು. ವಿವೇಕಾನಂದರು ಈ ಬಗೆಯಲ್ಲಿ ಹೊಸ ನುಡಿಗಟ್ಟನ್ನು ನೀಡಿದರು ಎಂದು ರಾಮಸ್ವಾಮಿಯವರು ಹೇಳುತ್ತಾರೆ (ಪು.126). ಉದಾಹರಣೆಗೆ ಟಾಲರೆನ್ಸ್ – ಸಹಿಷ್ಣುತೆ ಎನ್ನುವುದೊಂದು ಆದರ್ಶ ಎಂದು ಪಶ್ಚಿಮದವರು ಹೇಳುತ್ತಿದ್ದಾರೆ. ಬಾರತೀಯ ಬುದ್ಧಿಜೀವಿಗಳೂ ಅದನ್ನೇ ಉರುಹೊಡೆಯುತ್ತಾರೆ. ಇತರರ ಅಸ್ತಿತ್ವವನ್ನು ಕಷ್ಟದಿಂದ ಸಹಿಸುವುದು ಎನ್ನುವ ಪರಿಕಲ್ಪನೆಯೇ ಧನಾತ್ಮಕವಾದುದಲ್ಲ ಎಂದು ವಿವೇಕಾನಂದರು ಅಂದೇ ಸೂಚಿಸಿದ್ದರು. ಇದು ಇತರ ನಂಬಿಕೆಗಳನ್ನು ಸಹಿಸಲು ಕಷ್ಟಪಡುವ ಇಸ್ಲಾಂ, ಕ್ರೈಸ್ತ ಮತಗಳಿಗೆ ಆದರ್ಶ ಅಷ್ಟೇ. ಇತರ ನಂಬಿಕೆಗಳ ಬಗ್ಗೆ ಆಕ್ಷೇಪವೇ ಇಲ್ಲದೆ ಇರುವಲ್ಲಿ ಸಹಿಷ್ಣುತೆ ಎನ್ನುವ ಪರಿಕಲ್ಪನೆಯೇ ಋಣಾತ್ಮಕವಾದುದು.

ಈಗಾಗಲೇ ಸೂಚಿಸಿದಂತೆ, ಈ ಪುಸ್ತಕದಲ್ಲಿ ರಾಜಾ ರಾಮಮೋಹನ ರಾಯ್, ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಶ್ರೀ ಅರವಿಂದ, ಪಂಡಿತ್ ಮದನಮೋಹನ ಮಾಲವೀಯ ಮತ್ತು ರವೀಂದ್ರನಾಥ ಠಾಕೂರ್ ಹೀಗೆ ಒಟ್ಟು ಎಂಟು ಮಹನೀಯರ ಕುರಿತು ಬರೆದ ಲೇಖನಗಳಿವೆ. ರಾಜಾ ರಾಮಮೋಹನ ರಾಯ್ ಆಧುನಿಕ ಬಾರತದ ಪಿತಾಮಹರಾದ ಬಗೆಯನ್ನು ಹೇಳುವುದರ ಜೊತೆಗೆ ಕ್ರೈಸ್ತ ಮಿಷನರಿಗಳ ಮೇಲೂ ಅವರು ಹೇಗೆ ತಮ್ಮ ಪ್ರಖರ ವಿದ್ವತ್ತಿನಿಂದ ಪ್ರಭಾವ ಬೀರಿದರು ಎಂದು ವಿವರಿಸಲಾಗಿದೆ. ಶ್ರೀ ರಾಮಕೃಷ್ಣ ಪರಮಹಂಸರ ಅಧ್ಯಾತ್ಮ ಸಾಧನೆಯೂ ಹೃದಯಪರಿವರ್ತನೆಯ ಮಾಧ್ಯಮವಾಗಿತ್ತು ಎನ್ನುವುದನ್ನು ಲೇಖಕರು ವಿವರಿಸಿದ್ದಾರೆ. ದಯಾನಂದ ಸರಸ್ವತಿಯವರು ಧರ್ಮಗಳ ತೌಲನಿಕ ಅಧ್ಯಯನವನ್ನು ಕೈಗೊಂಡು ಭಾರತೀಯ ಸನಾತನ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದುದನ್ನು ಲೇಖಕರು ವಿಶೇಷವಾಗಿ ಉಲ್ಲೇಖಿಸುತ್ತಾರೆ. ಸ್ವಾಮಿ ರಾಮತೀರ್ಥರ ರಾಷ್ಟ್ರಭಾವವನ್ನು ಮತ್ತು ವೇದಾಂತದ ಸ್ವರೂಪವನ್ನು ಸರಳವಾಗಿ ಚಿತ್ರಿಸಿದ್ದಾರೆ. ಶ್ರೀ ಅರವಿಂದರ ವಿಚಾರಧಾರೆಯು ವಿಕಸಿಸಿದ ರೀತಿಯನ್ನು ಸೊಗಸಾಗಿ ಬಣ್ಣಿಸಲಾಗಿದೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸ್ಥಾಪಕರಾದ ಮದನ ಮೋಹನ ಮಾಲವೀಯರ ರಾಜಕೀಯ, ಸಾಮಾಜಿಕ ದೃಷ್ಟಿ ಧೋರಣೆಗಳನ್ನೂ ಅವರ ಸಾಹಸಗಳನ್ನೂ ಸರಳವಾಗಿ ಪರಿಚಯಿಸಿದ್ದಾರೆ.

ರಾಮಸ್ವಾಮಿಯವರು ವ್ಯಕ್ತಿಚಿತ್ರಗಳನ್ನು ಕಟ್ಟಿಕೊಡುವುದರಲ್ಲಿ ಸಿದ್ಧಹಸ್ತರು. ಎಷ್ಟಾದರೂ ಅದ್ಭುತವಾಗಿ ವ್ಯಕ್ತಿಚಿತ್ರಗಳನ್ನು ಬರೆದ ಡಿ.ವಿ.ಜಿ.ಯವರ ಜೊತೆಗಿದ್ದು ಪಳಗಿದವರು ನಾಡೋಜ ರಾಮಸ್ವಾಮಿಯವರು. 'ನವೋತ್ಥಾನದ ಅದ್ವರ್ಯುಗಳು' ಕೃತಿಯಲ್ಲಿ ಕೇವಲ ಮಹಾನ್ ವ್ಯಕ್ತಿಗಳ ಜೀವನ–ಸಾಧನೆಯ ವಿವರ ಅಷ್ಟೇ ಅಲ್ಲದೆ, ಅವರ ವಿಚಾರಗಳು ದೇಶದ ಒಟ್ಟಾರೆ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಪ್ರಸ್ತುತವಾಗಿದ್ದವು ಎನ್ನುವ ಬಗೆಗಿನ ಅನೇಕ ಒಳನೋಟಗಳು ದೊರೆಯುತ್ತವೆ. ಅಂದರೆ,

ಆಯಾ ಕಾಲಪರಿಸ್ಥಿತಿಯ ವಿಮರ್ಶೆಯೂ ಒಟ್ಟೊಟ್ಟಿಗೇ ನಡೆಯುತ್ತದೆ. ಸ್ವಾತಂತ್ರ್ಯ ಹೋರಾಟವೆಂದರೆ ಕೇವಲ ಮಹಾತ್ಮಾ ಗಾಂಧೀಜಿ ಮತ್ತು ನೆಹರೂ ರಂಗಕ್ಕಿಳಿದ ನಂತರದ ಮೂರುದಶಕಗಳ ವಿದ್ಯಮಾನವಷ್ಟೇ ಅಲ್ಲ ಅನ್ನುವುದನ್ನೂ ಈ ಕೃತಿಯು ಮತ್ತೆ ಮತ್ತೆ ನೆನಪಿಸುತ್ತದೆ.

ರಾಮಸ್ವಾಮಿಯವರು ಗುಣಗ್ರಾಹಿ ಲೇಖಕರು. ಅವರ ವ್ಯಾಪಕ ಅಧ್ಯಯನವೂ ಅದಕ್ಕೆ ಸಹಾಯಕವಾಗಿದೆ. ಉದಾಹರಣೆಗೆ ರಾಜಾ ರಾಮಮೋಹನ ರಾಯರು ಆಧುನಿಕ ಬಂಗಾಳಿ ಗದ್ಯಭಾಷೆಯ ಜನಕ ಎಂದು ಅವರು ಗುರುತಿಸುತ್ತಾರೆ(ಪು. 41). ಅದೇ ರೀತಿ, ಹಿಂದೀ ಭಾಷೆಯ ಪ್ರಾಚುರ್ಯದ ಪ್ರವರ್ತಕರಾಗಿ ದಯಾನಂದರಿಗೆ ಪ್ರಮುಖ ಸ್ಥಾನವಿದೆ ಎನ್ನುತ್ತಾರೆ(ಪು. 93). ವಿಶಿಷ್ಟ ಒಳನೋಟಗಳನ್ನು ನೀಡುವ ರಾಮಸ್ವಾಮಿಯವರು ಏನನ್ನೇ ಬರೆದರೂ ಅದಕ್ಕೊಂದು ಆಳ – ವಿಸ್ತಾರ ಇದ್ದೇ ಇರುತ್ತದೆ. ಉದಾಹರಣೆಗೆ ಈ ಸಾಲು ಗಮನಿಸಿ. "ಬೌತವಿಜ್ಞಾನದ ಪ್ರಮುಖ ವಿಧಾನವೆಂದರೆ ವರ್ಗೀಕರಣ. ಅಧ್ಯಾತ್ಮದ ಪ್ರಮುಖ ವಿಧಾನವೆಂದರೆ ಸಮಾನಾಂಶಗ್ರಹಣ ಮತ್ತು ಸಮನ್ವಯ"(ಪು. 74). ಇನ್ನು ಸಂಸ್ಕೃತ ಪದಗಳನ್ನು ಹದವಾಗಿ ಬೆರೆಸಿ ಬರೆಯುವ ಅವರ ಶೈಲಿಯೂ ಗಂಭೀರ ಓದಿಗೆ ಹೇಳಿ ಮಾಡಿಸಿದಂತಿದೆ.

ನಮ್ಮ ದೇಶದ ಇಂದಿನ ವಿದ್ವತ್ ವಲಯದಲ್ಲಿ ನಿದ್ದೆ ಮಾಡುತ್ತಿರುವವರು ಮತ್ತು ನಿದ್ದೆ ಬಂದಂತೆ ನಟಿಸುತ್ತಿರುವವರು– ಎರಡೂ ವಿಬಾಗದವರು ಇದ್ದಾರೆ. ಎರಡನೆಯ ವರ್ಗದವರನ್ನು ಏನೂ ಮಡಲಾಗದು. ಆದರೆ, ಓದು ಪರಿಸರದ ಕಾರಣದಿಂದ ಇರುವ ಬೌದ್ಧಿಕ ದಾಸ್ಯ ಮತ್ತು ಜಾಡ್ಯವನ್ನು ತೊಲಗಿಸಲು ಇಂತಹ ಕೃತಿಗಳು ಇನ್ನಷ್ಟು ಬರಲಿ ಎಂದು ಹಾರೈಸೋಣ.

❖❖❖

ಕಾಮನ ಬಿಲ್ಲಿಗೆ ಬಣ್ಣಗಳೇಳು
ಹೇಳಿದರಾರಿದನು?
ಕಾಣದ ಬಣ್ಣಗಳನ್ನೆಷ್ಟಿವೆಯೋ
ತಿಳಿಸುವರಾರೀ ಹದನು?

ಪತ್ರಾಗಾರಗಳು ಮತ್ತು ಚರಿತ್ರೆಯ ನಿರೂಪಣೆ

ನವೀನ್
ಸಹಪ್ರಾಧ್ಯಾಪಕರು
ಪಿ.ದ.ಪೈ, ಪಿ.ಸ.ಪೈ. ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು–575001

ಪತ್ರಾಗಾರ ಎನ್ನುವುದು ಐತಿಹಾಸಿಕ ದಾಖಲೆಗಳ ಸಂಗ್ರಹ ಅಥವಾ ಅವು ಇರುವ ಭೌತಿಕ ಸ್ಥಳವಾಗಿದೆ. ಪತ್ರಾಗಾರಗಳು ಜನರು, ಸಂಸ್ಥೆಗಳು, ಸಾಮಾಜಿಕ ಮತ್ತು ಆರ್ಥಿಕ, ನೈಸರ್ಗಿಕ ವಿದ್ಯಮಾನಗಳು ಮತ್ತು ರಾಷ್ಟ್ರದ ಇತಿಹಾಸದ ಎಲ್ಲಾ ಅಂಶಗಳ ಬಗ್ಗೆ ಬರೆಯಲು ಅತ್ಯಮೂಲ್ಯವಾದ ಪ್ರಾಥಮಿಕ ಮೂಲವಸ್ತುಗಳನ್ನು ಒಳಗೊಂಡಿರುವ ಕೇಂದ್ರವಾಗಿ ವ್ಯಕ್ತಿಯ ಅಥವಾ ಸಂಸ್ಥೆಯ ಜೀವಿತಾವಧಿಯಲ್ಲಿ ಸಂಗ್ರಹವಾಗಿರುವ ಪ್ರಾಥಮಿಕ ಮೂಲ ದಾಖಲೆಗಳನ್ನು ಒಳಗೊಂಡಿರುತ್ತವೆ. ಪತ್ರಾಗಾರಗಳು ಐತಿಹಾಸಿಕ ತಿಳುವಳಿಕೆಯ ಒಂದು ಅಡಿಪಾಯವಾಗಿ ಉಳಿದಿವೆಯಲ್ಲದೇ ಪೂರ್ವಜರ ಅನುಭವ, ಗ್ರಹಿಕೆ, ನಿರೂಪಣೆ, ಕಥೆ ಮುಂತಾದವುಗಳನ್ನು ಮೌಲ್ಯೀಕರಿಸುತ್ತವೆ.

ಪತ್ರಾಗಾರಗಳು ಶಾಶ್ವತವಾಗಿ ಆಯ್ಕೆ ಮಾಡಲಾದ ಇಲ್ಲವೇ ಅವುಗಳ ನಿರಂತರ ಸಾಂಸ್ಕೃತಿಕ, ಐತಿಹಾಸಿಕ ಅಥವಾ ಸಾಕ್ಷಿ ಮೌಲ್ಯದ ಆಧಾರದ ಮೇಲೆ ದೀರ್ಘಕಾಲೀನ ಸಂರಕ್ಷಣೆಯಾಗಿರುವ ದಾಖಲೆಗಳನ್ನು ಒಳಗೊಂಡಿರುತ್ತವೆ. ಪತ್ರಾಗಾರಗಲ್ಲಿರುವ ದಾಖಲೆಗಳು ಸಾಮಾನ್ಯವಾಗಿ ಅಪ್ರಕಟಿತವಾಗಿರುತ್ತವೆ ಮತ್ತು ಪುಸ್ತಕಗಳು ಅಥವಾ ನಿಯತಕಾಲಿಕೆಗಳಿಗಿಂತ ಭಿನ್ನವಾಗಿ ಯಾವಾಗಲೂ ಅನನ್ಯವಾಗಿರುತ್ತವೆ. ಇದರರ್ಥ ಪತ್ರಾಗಾರಗಳು ಅವುಗಳ ಕಾರ್ಯ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಗ್ರಂಥಾಲಯಗಳಿಗಿಂತ ಸಾಕಷ್ಟು ವಿಭಿನ್ನವಾಗಿವೆ ಎನ್ನಲಡ್ಡಿಯಿಲ್ಲ. ಪತ್ರಾಗಾರಗಳು ಅನಾದಿ ಕಾಲದಿಂದ ಇಂದಿನವರೆಗೆ ಮನುಕುಲದ ಎಲ್ಲಾ ಚಟುವಟಿಕೆಗಳ ಮಾರುಕಟ್ಟೆ ಆಗಿರುವುದರಿಂದ, ಇದು ಜನರ ಪದ್ಧತಿಗಳು, ಸಂಪ್ರದಾಯಗಳು ಮತ್ತು ಬಳಕೆಯನ್ನು ಚಿತ್ರಿಸುತ್ತದೆ. ಇತಿಹಾಸದ ಅಧಿಕೃತ ದಾಖಲೆಗಳನ್ನು ಇಟ್ಟುಕೊಳ್ಳುವ ಅಭ್ಯಾಸ ಬಹಳ ಹಳೆಯದು. ಪುರಾತನ ಭಾರತೀಯರು, ಚೀನಿಯರು, ಗ್ರೀಕರು ಮತ್ತು ರೋಮನ್ನರು ಪತ್ರಾಗಾರಗಳನ್ನು ಉತ್ತಮವಾಗಿ ಅಭಿವೃದ್ಧಿಪಡಿಸಿದ್ದರಾದರೂ, ಆ ದಾಖಲೆಗಳು ಕಳೆದುಹೋಗಿವೆ ಇಲ್ಲವೇ ವ್ಯವಸ್ಥಿತವಾಗಿ ಸಂರಕ್ಷಿಸಲ್ಪಟ್ಟಿಲ್ಲ. ಪುರಾತತ್ತ್ವಜ್ಞರು ಭಾರತವನ್ನು ಒಳಗೊಂಡಂತೆ ವಿಶ್ವದ ಎಲ್ಲೆಡೆ ನೂರಾರು ಇಲ್ಲವೇ ಸಾವಿರಾರು ಮಣ್ಣಿನ ಮುದ್ರೆಗಳ ಭಂಡಾರಗಳನ್ನು ಕಂಡುಹಿಡಿದಿದ್ದಾರೆ. ಪ್ರಾಚೀನ ವರ್ಣಮಾಲೆಗಳು, ಭಾಷೆಗಳು, ಸಾಹಿತ್ಯ ಮತ್ತು ರಾಜಕೀಯದ ಬಗ್ಗೆ ಕಲಿಯಲು ಈ ಆವಿಷ್ಕಾರಗಳು ಮೂಲಭೂತವಾಗಿವೆ. ಪತ್ರಾಗಾರದಲ್ಲಿ ಕೆಲಸ ಮಾಡುವ ವ್ಯಕ್ತಿಯನ್ನು ಆರ್ಕೈವಿಸ್ಟ್ ಎಂದು ಕರೆಯಲಾಗುತ್ತದೆ. ಪತ್ರಾಗಾರಗಳಲ್ಲಿ ಮಾಹಿತಿ ಮತ್ತು ವಸ್ತುಗಳಿಗೆ ಪ್ರವೇಶವನ್ನು ಸಂಘಟಿಸುವ, ಸಂರಕ್ಷಿಸುವ ಮತ್ತು ಒದಗಿಸುವ ಅಧ್ಯಯನ ಮತ್ತು ಅಭ್ಯಾಸವನ್ನು ಆರ್ಕೈವಲ್ ಸೈನ್ಸ್ ಎಂದು ಕರೆಯಲಾಗುತ್ತದೆ.

ಮೌಖಿಕ ಸಂಪ್ರದಾಯಗಳಲ್ಲಿ ಪಕ್ವಗೊಂಡು ರೂಪುಗೊಂಡ ವೈದಿಕ ಜ್ಞಾನಧಾರೆಗಳು, ಮಹಾಕಾವ್ಯಗಳು, ಪುರಾಣಗಳು, ಮಾರ್ಗಪರಂಪರೆಯ ಸಾಹಿತ್ಯಗಳು, ಸ್ಥಳೀಯ ಮೌಖಿಕ ಸಂಪ್ರದಾಯಗಳಾದ ಪಾಡ್ದನ, ಸಂಧಿ, ಐತಿಹ್ಯಗಳು, ದಂತಕಥೆ ಮುಂತಾದವುಗಳು ಬರಹ ರೂಪದಲ್ಲಿ ಪ್ರಕಟಗೊಂಡು ಪತ್ರಾಗಾರಗಳ ಮೌಲ್ಯವನ್ನು ವರ್ಧಿಸಿವೆಯಲ್ಲದೇ, ಪ್ರಸ್ತುತ ಸರಕಾರಿ, ಖಾಸಗಿ ಮಠಮಾನ್ಯಗಳ ಪತ್ರಾಗಾರಗಳಲ್ಲಿ ಇರುವ ಸಂಗ್ರಹಗಳು, ಘಟನೆ ಆಧಾರಿತ ಪತ್ರಗಳು, ವರದಿಗಳು, ಕಡತಗಳು, ನಿತ್ಯ ವ್ಯವಹಾರದ ಅಂಕಿ–ಅಂಶಗಳನ್ನು ಒಳಗೊಂಡಿರುವ ಟಿಪ್ಪಣಿಗಳು, ಜ್ಞಾಪನ ಪತ್ರಗಳು, ಆದೇಶಗಳು, ಛಾಯಚಿತ್ರಗಳು, ದೃಶ್ಯಮಾಲಿಕೆಗಳು, ಡಿಜಿಟಲೀಕರಣಗೊಂಡ ಮಾಹಿತಿಗಳು ಇತಿಹಾಸ ನಿರೂಪಣೆಯಲ್ಲಿ ಮುಖ್ಯವಾಗಿರುವುದರಿಂದ ಇತಿಹಾಸದ ಧಾರೆ ಇಲ್ಲವೇ ಕೊಂಡಿಗಳನ್ನು ಆಧಾರಗಳ ಮಾಧ್ಯಮದೊಂದಿಗೆ ಕಲ್ಪಿಸಿ, ನಿರೂಪಿಸಿ, ರಚಿಸಿ ಆ ಮೂಲಕ ಚರಿತ್ರೆಯನ್ನು ಕಟ್ಟಬಹುದೆಂಬ ಪ್ರಾಜ್ಞರ ಅಭಿಪ್ರಾಯವು ಮುಖ್ಯವಾಗುತ್ತದೆ. ಇದರಿಂದ ಮಾನ್ಯವಾಗುವುದೇನೆಂದರೆ ಇತಿಹಾಸ ಕೇವಲ ಬರವಣಿಗೆಯಲ್ಲಿ ಇರುವಂತಹದ್ದು ಅಲ್ಲ. ಇತಿಹಾಸವನ್ನು ಲಭ್ಯವಿರುವ ಬೇರೆ ಬೇರೆ ಆಯಾಮಗಳಿಂದ ನಿರೂಪಿಸಿಕೊಳ್ಳಬಹುದು. ಅಂತಹ ಆಯಾಮಗಳಲ್ಲಿ ಮೌಖಿಕ ಸಂಪ್ರದಾಯಗಳು ಬಹಳ ಮುಖ್ಯವಾದುದು. ಮೌಖಿಕ ಸಂಪ್ರದಾಯಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿದ್ದಲ್ಲಿ ಅದರಲ್ಲಿ ಲಭ್ಯವಾಗುವ ಚಿತ್ರಣಗಳು ಇತಿಹಾಸವನ್ನು ನೂರಕ್ಕೆ ನೂರು ಸರಿ ಎನ್ನುವ ರೀತಿಯಲ್ಲಿ ನಿರೂಪಿಸಿಕೊಳ್ಳಬಹುದು ಇಲ್ಲವೇ ಕಟ್ಟಿಕೊಳ್ಳಬಹುದು. ರಾಜರುಗಳ ಚರಿತ್ರೆಯನ್ನು ವೈಭವೀಕರಿಸಿಕೊಂಡು ಬರೆಯುವುದಕ್ಕಿಂತ ಮೌಖಿಕ ಸಂಪ್ರದಾಯಗಳ ಆಧಾರದಲ್ಲಿ ಇತಿಹಾಸದಲ್ಲಿ ದಾಖಲಾಗದ ಹಲವು ಮಹತ್ವದ ವಿಚಾರಗಳನ್ನು ತಿಳಿದುಕೊಳ್ಳುವಲ್ಲಿ ಅತೀ ಮುಖ್ಯವೆನಿಸುವುದು. ಇತಿಹಾಸಕಾರರು ಎಂದೆನಿಸಿಕೊಂಡ ಬಹಳ ವಿದ್ವಾಂಸರು ಮೌಖಿಕ ಚರಿತ್ರೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡದ ಕಾರಣ ನೈಜ್ಯ ಘಟನೆಗಳನ್ನು ತಿಳಿಯುವಲ್ಲಿ ನಾವು ವಿಫಲರಾಗಿದ್ದೇವೆ. ಅದಾಗ್ಯೂ ವರ್ತಮಾನದಲ್ಲಿ ಮೌಖಿಕ ಸಂಪ್ರದಾಯವು ಇತಿಹಾಸವನ್ನು ನಿರೂಪಿಸುಲ್ಲಿ ಹೆಚ್ಚು ಮಹತ್ವ ಪಡೆಯುತ್ತಿರುವುದು ಆರೋಗ್ಯಕರ ಬೆಳವಣಿಗೆ. ಯಾವಾಗ ಬರವಣಿಗೆಯ ವ್ಯವಹಾರವು ಪ್ರಾರಂಭವಾಯಿತೋ, ಬರಹ ದೈನಂದಿನ ಕಾರ್ಯಗಳಿಂದ ತೊಡಗಿ ಗ್ರಂಥ ಬರೆಯುವವರೆಗೆ ಮುಂದುವರಿದಿರುವುದು ಬರವಣಿಗೆಯ ಚರಿತ್ರೆಯ ವಿಕಸನದ ಘಟ್ಟಗಳಾಗಿ ಗುರುತಿಸಿಕೊಂಡಿದೆ. ನಮ್ಮ ದೇಶದಲ್ಲಿ ಬರವಣಿಗೆ ಬಲ್ಲವರು ಕಡಿಮೆ ಸಂಖ್ಯೆಯಲ್ಲಿದ್ದರು. ಆದರೆ ಬರವಣಿಗೆ ಇಲ್ಲ ಅಥವಾ ಬರವಣಿಗೆ ಕಡಿಮೆ ಇತ್ತು ಎಂಬ ಕಾರಣದಿಂದ ಇತಿಹಾಸ ಇರಲಿಲ್ಲ ಎಂಬುವುದು ತಪ್ಪು. ವೈಯುಕ್ತಿಕವಾಗಿ ಬರಹ ಬಲ್ಲವರು ಸಣ್ಣ ಪ್ರಮಾಣದಲ್ಲಿ ಬರೆಯುವ ಪ್ರಯತ್ನಗಳನ್ನು ಮಾಡಿರುವುದನ್ನು ದಾಖಲಿಸಬಹುದು. ಪಾಶ್ಚಾತ್ಯರು ಭಾರತಕ್ಕೆ ಬಂದಾಗಿನ ಸಂದರ್ಭದಲ್ಲಿ ಇದೇ ತಪ್ಪು ಕಲ್ಪನೆಯನ್ನು ಇಟ್ಟುಕೊಂಡು ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇರಲಿಲ್ಲ ಎಂಬ ದೃಷ್ಟಿಕೋನವನ್ನು ವ್ಯಾಖ್ಯಾನಿಸುವುದರೊಂದಿಗೆ, ಗ್ರೀಕ್ ವಿದ್ವಾಂಸರುಗಳಾದ ಹೆರೋಡೋಟಸ್, ತುಸೀಟೈಟ್ಸ್‌ನಂತಹ ಚರಿತ್ರಾಕಾರರು ಈ ದೇಶದಲ್ಲಿ ಹುಟ್ಟೇ ಇರಲಿಲ್ಲ ಎಂದೇ ಹುಯಿಲೆಬ್ಬಿಸುದುದು ಇದೆ. ತೀರಾ ಇತ್ತೀಚಿನವರೆಗೂ ಈ ಕೀಳರಿಮೆಯಿತ್ತಲ್ಲದೇ, ವರ್ತಮಾನದಲ್ಲೂ ಇನ್ನೂ ಕೆಲವು ಬುದ್ಧಿಜೀವಿಗಳು ಈ

ಮಾನಸಿಕತೆಯಿಂದ ಹೊರಬರಲಾರದೇ ಪರದಾಡುತ್ತಿದ್ದಾರೆ.

ಮಾನವನ ಜೀವನದಲ್ಲಿ ಲಿಪಿಯ ಬಳಕೆ ಯಾವಾಗ ಆರಂಭವಾಯಿತು ಎಂಬುವುದು ಅಸ್ಪಷ್ಟ. ಆದಿಮಾನವನ ಕಾಲದ ಗುಹೆಗಳಲ್ಲಿ ನಿರ್ಮಿತಗೊಂಡ ಚಿತ್ರದ ಗುರುತುಗಳನ್ನು ಅವಲೋಕಿಸಿದಾಗ ಇವು ಚರಿತ್ರಾ ಪೂರ್ವದವು ಇಲ್ಲವೇ ಲಿಪಿ ಪೂರ್ವದ ಕಾಲದವುಗಳೆಂದು ವಿದ್ವಾಂಸರು ನಿರ್ಣಯಿಸಿದ್ದಿದೆ. ಲಿಪಿಗಳೆಂದೆನಿಸಿಕೊಂಡವುಗಳನ್ನು ಓದಲು ಅಸಾಧ್ಯವಾದಾಗ ಕೇವಲ ಗುರುತುಗಳಾಗಿ ಮಾನ್ಯತೆಯನ್ನು ಪಡೆಯುತ್ತವೆ. ಓದಲು ಸಾಧ್ಯವಿದೆ ಎಂದಾದಲ್ಲಿ ಅದು ಅಕ್ಷರವಾಗಿ ಮಾರ್ಪಾಡು ಆಗುತ್ತದೆ. ಉದಾಹರಣೆಗೆ ಸಿಂಧೂನದಿ ಕಣಿವೆ ಪ್ರದೇಶದಲ್ಲಿ ಸಿಗುವ ಜೇಡಿಯ ಮಣ್ಣಿನ ಮುದ್ರೆಗಳು, ಅವುಗಳಲ್ಲಿ ಅಚ್ಚಾಗಿರುವ ಗುರುತುಗಳನ್ನು ಉಚ್ಚಾರ ಮಾಡುವಲ್ಲಿ ಸಾಧ್ಯವಿಲ್ಲದ ಕಾರಣ ಅವುಗಳು ಇಂದೂ ಕೂಡಾ ಗುರುತುಗಳಾಗಿಯೇ ಇದ್ದಾವೆ. ಬಹಳಷ್ಟು ವಿದ್ವಾಂಸರು ಸಿಂಧೂ ಲಿಪಿಯನ್ನು ಓದುವ ಪ್ರಯತ್ನ ಮಾಡಿದಾದರೂ ಇಂದು ಅವುಗಳಿಗೆ ತಾರ್ಕಿಕ ಅಂತ್ಯ ಸಿಗದೇ ಕೇವಲ ಗುರುತುಗಳಾಗಿ ಉಳಿದಿವೆ. ಅಧ್ಯಯನ ಮಾಡುವ ನಿರಂತರ ಪ್ರಯತ್ನಗಳು ಹಲವಾರು ವಿದ್ವಾಂಸರುಗಳಿಂದ ನಿರಂತರ ನಡೆಯುತ್ತಿರುವುದು ಚರಿತ್ರೆಯ ಕಾರ್ಯಕಾರಣಗಳಲ್ಲಿ ಬಹುಮುಖ್ಯವೆನಿಸಿಕೊಳ್ಳಬಹುದು. ಲಿಪಿಯ ಸಂಶೋಧನೆಗಳ ಆಯಾಮಗಳನ್ನು ಪರಿಶೀಲಿಸಿದಾಗ ಪ್ರಸ್ತುತ ಮೌರ್ಯ ರಾಜವಂಶದ ಚರಿತ್ರೆಗೆ ಬಹಳಷ್ಟು ಮಾನ್ಯತೆ ಲಭಿಸಿದೆ. ಈ ರಾಜ್ಯವಂಶದ ಕಾಲದ್ದು ಎನ್ನಲಾದ ಬಹಳಷ್ಟು ಶಾಸನಗಳು ಭಾರತವನ್ನು ಒಳಗೊಂಡಂತೆ ನೆರೆಹೊರೆಯ ರಾಷ್ಟ್ರಗಳಲ್ಲಿ ಲಭ್ಯವಿದ್ದು, ಒಂದು ಕಾಲದಲ್ಲಿ ಆ ಶಾಸನಗಳನ್ನು ಓದಲು ಸಾಧ್ಯವಿಲ್ಲ ಎಂಬ ಮನಸ್ಥಿತಿಯಿತ್ತು. ಯಾವಾಗ ಓದುವ ಪ್ರಯತ್ನ ನಡೆಸಲಾಯಿತೋ ಅದು ಬ್ರಾಹ್ಮಿ ಪೂರ್ವದ ಇಲ್ಲವೇ ಬ್ರಾಹ್ಮಿ ಲಿಪಿ ಎಂದು ಸಾಬೀತುಗೊಂಡು ಚರಿತ್ರೆಯ ಅಧ್ಯಯನಕ್ಕೆ ಹೊಸ ಆಯಾಮವೊಂದನ್ನು ಕಲ್ಪಿಸಿತು. ಕರ್ನಾಟಕದ ಕಲಬುರ್ಗಿಯ ಸನ್ನತಿಯಲ್ಲಿ ಈ ರಾಜ್ಯವಂಶವನ್ನಾಳಿದ ಅಶೋಕ ಸಾಮ್ರಾಟನ ಶಾಸನಗಳು ದೊರೆತಿರುವುದು. ನಮ್ಮ ರಾಜ್ಯದಲ್ಲೂ ಕೂಡಾ ಬ್ರಾಹ್ಮಿ ಲಿಪಿಯು ಇತಿಹಾಸವನ್ನು ನಿರೂಪಿಸುವಲ್ಲಿ ಮಹತ್ವದ ಬೆಳವಣಿಗೆ ಎಂದು ಅಭಿಪ್ರಾಯಪಡಬೇಕಾಗುತ್ತದೆ. ಈ ಲಿಪಿಯ ಬಗೆಗಿನ ಸಂಶೋಧನೆ ಅದರ ಓದುವಿಕೆ ಅಶೋಕನ ಮಾತ್ರವಲ್ಲ ಇತರ ರಾಜವಂಶಗಳ ಚರಿತ್ರೆಯ ನಿರೂಪಣೆಗೂ ಮಹತ್ವವಾದ ಆಯಾಮಗಳು ಸೃಷ್ಟಿಯಾಗಿವೆ. ಲಿಪಿಯ ಓದುವಿಕೆ ಬರಹಗಳ ವಿಕಾಸನಕ್ಕೆ ಅವಕಾಶ ಮಾಡಿಕೊಟ್ಟಿದೆಯಲ್ಲದೇ, ಬರಹಗಳಿಂದಾಗಿ ಗ್ರಂಥರಚನೆಯಂತಹ ಕಾರ್ಯಗಳಿಗೆ ಅವಕಾಶ ಮಾಡಿ, ಬರಹಗಾರರ, ಗ್ರಂಥಕರ್ತರ, ಇಲ್ಲವೇ ಮಹಾನ್ ವಿದ್ವಾಂಸರ ಪರಂಪರೆಯ ತಳಹದಿಯನ್ನು ಬಲಿಷ್ಠಗೊಳಿಸಿತು. ಉದಾಹರಣೆಗೆ ಬ್ರಾಹ್ಮಿಲಿಪಿ ಶಾರದಾ ದೇಶದ ಅಂದರೆ ಈಗಿನ ಜಮ್ಮು ಕಾಶ್ಮೀರದಲ್ಲಿ ಶಬ್ದಪರಂಪರೆಯ ಸಮೂಹವನ್ನು ಹುಟ್ಟುಹಾಕಿ, ಪಂಡಿತ ಸಮೂಹದ ಬೆಳವಣಿಗೆಗೆ ಕಾರಣವಾಯಿತು. ಕಾಶ್ಮೀರದಲ್ಲಿ ಬ್ರಾಹ್ಮಿ ಲಿಪಿ ಸಂಸ್ಕರಣಗೊಂಡು ಸಂಸ್ಕೃತವಾಗಿ ಇಲ್ಲವೇ ದೇವನಾಗರಿಯಾಗಿ ಪರಿಷ್ಕರಣೆಗೊಂಡು ಮಹತ್ವದ ಗ್ರಂಥಗಳ ನಿರ್ಮಾಣಕ್ಕೆ ಕಾರಣವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಘಟನೆಗಳು ಸರಣಿರೂಪದಲ್ಲಿ ಪ್ರಕಟವಾಗುತ್ತದೆ. ಹಾಗಂತ ಎಲ್ಲಾ ಘಟನೆಗಳು ಮುಖ್ಯವಾಗುವುದಿಲ್ಲ. ಘಟನೆಗಳನ್ನು ಆಧರಿಸಿ ಚರಿತ್ರೆಯನ್ನು ಬರೆಯಬಹುದು

ಎಂದಾದಲ್ಲಿ ಅದೂ ಚರಿತ್ರೆಯೂ ಆಗುವುದಿಲ್ಲ ಬದಲಾಗಿ ನಿರೂಪಣೆ ಆಗಲೂಬಹುದು. ಆಯ್ದ ಘಟನೆಗಳನ್ನು ಆಧರಿಸಿ, ವೈಜ್ಞಾನಿಕವಾಗಿ ಚಿಂತಿಸಿದ್ದಲ್ಲಿ ಇತಿಹಾಸವನ್ನು ನಿರೂಪಿಸಬಹುದು ಇಲ್ಲವೇ ಕಟ್ಟಬಹುದು. ಚರಿತ್ರೆ ಕಟ್ಟುವಲ್ಲಿ ಕಾಲ ಮತ್ತು ಚರಿತ್ರೆಕಾರನಲ್ಲಿ ಮೂಡಬಹುದಾದ ಪ್ರಶ್ನೆಗಳು ಮುಖ್ಯವಾಗುತ್ತದೆ. ಎಲ್ಲಿ, ಯಾವಾಗ, ಏನು, ಯಾಕೆ ಘಟಿಸಿತು ಎನ್ನುವಲ್ಲಿಂದ ವಿಚಾರಣೆಗಳು ನಡೆದಲ್ಲಿ ಇತಿಹಾಸದ ಸಮಂಜಸ ಚಿತ್ರಣವು ಲಭ್ಯವಾಗಬಹುದು. ಈ ಸಂದರ್ಭದಲ್ಲಿ ಇತಿಹಾಸವನ್ನು ಸಂಕಲಿಸುವವನು ಪ್ರಮುಖನಾಗುತ್ತಾನೆ. ಯಾವೊಂದು ಪೂರ್ವಾಗ್ರಹವಿಲ್ಲದೇ ಇತಿಹಾಸವನ್ನು ನಿರೂಪಿಸಿದ್ದಲ್ಲಿ, ಸತ್ಯದ ಕಡೆಗೆ ಹೆಚ್ಚು ಕೇಂದ್ರಿತಗೊಳ್ಳಬಹುದು.

ಚರಿತ್ರೆಯನ್ನು ಕಾರ್ಯ–ಕಾರಣಗಳ ಸರಣಿ ಎಂದು ದಾಖಲಿಸಬಹುದು. ಪ್ರಚಲಿತದಲ್ಲಿರುವ ಜನಪ್ರಿಯ ನುಡಿಯೊಂದನ್ನು ಆಧರಿಸಿ ಚರಿತ್ರೆ ಕಾರ್ಯಕಾರಣಗಳ ಸರಣಿ ಹೇಗೆ ಎಂಬುವುದನ್ನು ಹೀಗೆ ವಿವರಿಸಲಾಗಿದೆ. ಉದಾಹರಣೆಗೆ ಮಡಕೆಯ ಮಾಡಲು ಮಣ್ಣೆ ಮೋದಲು. ಮಣ್ಣು ಇದ್ದರೇ ಮಡಕೆ–ಮಣ್ಣು ಇಲ್ಲದಿದ್ದಲ್ಲಿ ಮಡಕೆಯನ್ನು ಮಾಡಲಾಗುವುದಿಲ್ಲ. ಆದುದರಿಂದ ಮಡಕೆಗೆ ಮಣ್ಣು ಕಾರಣ. ಮಣ್ಣು ಪರಿವರ್ತಿತಗೊಂಡು ಕಾರ್ಯವಾಗಿ ಪರಿವರ್ತಿತವಾಗುವಾಗ ಮಡಕೆಯಾಗುತ್ತದೆ. ಮಡಕೆ ಎನ್ನುವುದು ಕಾರ್ಯ, ಮಣ್ಣು ಎನ್ನುವುದು ಮಡಕೆ ನಿರ್ಮಾಣಕ್ಕೆ ಕಾರಣ. ಮುಂದುವರೆದು ಮಡಕೆ ಮಾಡಲು ಮಣ್ಣು ಮಾತ್ರವಲ್ಲ ಮಡಕೆ ಮಾಡುವ ವೃತ್ತಿಯ ಕುಂಬಾರ, ಕುಂಬಾರನ ಕೌಶಲ್ಯ, ಕುಂಬಾರನ ಚಕ್ರವೂ ಮಡಕೆ ಮಾಡುವಲ್ಲಿ ಮುಖ್ಯವಾಗುತ್ತದೆ. ಕಾರ್ಯಾಕಾರಣ ಅಂದರೆ ಮಣ್ಣಿನ ಮಡಕೆ ಆದ ಮೇಲೆ ಅದರ ಪರಿಣಾಮವನ್ನು ಕೂಡಾ ಅವಲೋಕಿಸಬೇಕಾಗುತ್ತದೆ. ಮಡಕೆಯ ಚರಿತ್ರೆಯನ್ನು ಗಮನಿಸಿದಲ್ಲಿ, ನಮ್ಮ ನಾಗರೀಕತೆ ಹೇಗೆ ಬೆಳೆದು ಬಂದಿರುವ ವಿವರಣೆಯನ್ನು ಸ್ಪಷ್ಟಪಡಿಸ ಬೇಕಾಗುತ್ತದೆ. ಮಡಕೆ ಜೀವನ ಉಪಯೋಗಗಳಿಗೆ ಹೇಗೆ ಸಹಕಾರಿಯಾಯಿತು, ಮನುಷ್ಯನ ಜೀವನದ ಘಟ್ಟಗಳು ಮಡಕೆ ಉಪಯೋಗಿಸಿದಂದಿನಿಂದ ಯಾವ ರೀತಿಯಲ್ಲಿ ಬದಲಾವಣೆಗೊಂಡಿತು. ಮಡಕೆ ಜನರ ಜೀವನದ ಸಾಂಸ್ಕೃತಿಕ ಆಯಾಮವಾಗಿ ಬೆಳೆದದ್ದನ್ನು ಅವಲೋಕಿಸಬೇಕಾಗುತ್ತದೆ. ಮಡಕೆ ಸಂಸ್ಕೃತಿಯ ಒಂದು ಘಟಕವಾಗಿ, ಚರಿತ್ರೆಯ ಬೆಳವಣಿಗೆಯಲ್ಲಿ ವಹಿಸಿದ ಪ್ರಧಾನ ಭೂಮಿಕೆಗಳನ್ನು ಪಿ.ಜಿ.ಡಬ್ಲ್ಯೂ ಎನ್.ಬಿ.ಡಬ್ಲ್ಯೂ ಎಂದು ಕರೆಸಿಕೊಳ್ಳಲ್ಪಡುವ ಮಾನವನ ಜೀವನದ ಸಂಸ್ಕೃತಿಯ ಘಟ್ಟಗಳು ಮುಖ್ಯವಾಗುತ್ತದೆ. ಇತಿಹಾಸದ ಕಾಲಗತಿಯಲ್ಲಿ ಹೊಸ ವಿಚಾರಗಳು ಸೇರ್ಪಡೆಗೊಂಡಾಗ ಚರಿತ್ರೆ ತನ್ನ ಕಾರ್ಯಕಾರಣದ ಗತಿಯನ್ನು ಬದಲಾಯಿಸಿದ್ದು ಇದೆ. ಮಡಕೆಯನ್ನು ಒಳಗೊಂಡಂತೆ ಮಾನವ ತನ್ನ ಜೀವಿತಾವಧಿಯಲ್ಲಿ ಬಳಸಿಕೊಂಡ ಕಲ್ಲಿನ ಆಯುಧಗಳು, ವಾಸಸ್ಥಾನಗಳು, ಕೊಡಲಿ, ಕತ್ತಿ, ಸೂಜಿ, ಬಟ್ಟೆಬರೆ ಮುಂತಾದ ಬೇರೆ ಬೇರೆ ಅವಿಷ್ಕಾರಗಳು ಚರಿತ್ರೆಯ ಮಗ್ಗುಲುಗಳನ್ನು ಬದಲಾಯಿಸಿವೆಯಲ್ಲದೇ, ನಾಗರೀಕತೆ ಹಂತ ಹಂತವಾಗಿ ಬೆಳೆದುಬಂದಿರುವ ಸ್ತರಗಳಲ್ಲಿ ಯಾರು ಅಳವಡಿಸಿ ಕೊಂಡರು, ಯಾವ ಕಾಲದಲ್ಲಿ ಪರಿವರ್ತನೆಗಳಾದವು ಮುಖ್ಯವಾಗುತ್ತದೆ ವಿನಹ ನಿಖರತೆ ಮುಖ್ಯವಾಗುವುದಿಲ್ಲ.

ಭಾರತದಲ್ಲಿ ಗ್ರಾಂಥಿಕ ರಚನೆ ವಿನ್ಯಾಸಗೊಂಡು ಬರವಣಿಗೆಯ ಸಂಸ್ಕೃತಿ ಹುಟ್ಟಿಕೊಂಡಂದಿನಿಂದ ಬರವಣಿಗೆಯ ಸಾಮಾಗ್ರಿಗಳನ್ನು ಗಮನಿಸಿದಲ್ಲಿ ಉತ್ತರ

ಭಾರತ, ನೇಪಾಳ ಮುಂತಾದೆಡೆ ಬೂರ್ಜ್ವ ಮರದ ತೊಗಟೆಗಳನ್ನು ಸಂಸ್ಕರಿಸಿ ಬರೆಯುವ ವಿಧಾನಗಳು ಪ್ರಾರಂಭಗೊಂಡವು. ಈ ರೀತಿಯ ಬೂರ್ಜ್ವ ಪತ್ರಗಳಲ್ಲಿ ದಾಖಲೀಕರಣಗೊಂಡ ಗ್ರಂಥಗಳು ಜಮ್ಮುವಿನಲ್ಲಿರುವ ತಿರುವನಂತಪುರ ಸಂಸ್ಕೃತ ಪತ್ರಾಗಾರದಲ್ಲಿ ಸಂಗ್ರಹಗೊಂಡಿರುವುದನ್ನು ಗಮನಿಸಬಹುದಾಗಿದೆ. ಮುಂದುವರೆದು ಈ ಬಗೆಯ ಬೂರ್ಜಾ ಪತ್ರಗಳ ಲೇಖನ ಗ್ರಂಥಗಳು ಉತ್ತರೇಯ ಬೌದ್ಧ ಮಠಗಳಲ್ಲೂ ಸುಮಾರು 2500 ವರ್ಷಗಳ ಹಿಂದಿನಿಂದಲೂ ಸಂಗ್ರಹಿಸಿ, ಸಂರಕ್ಷಿಸಿಕೊಂಡು ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ಕಾಯ್ದುಕೊಂಡು ಬಂದಿರುವುದು ವಿಶೇಷ.

ಪ್ರಾಚೀನ ಮಠಗಳಲ್ಲಿ ಒಂದಾದ ಶೃಂಗೇರಿ ಮಠದ ಪತ್ರಾಗಾರಗಳಲ್ಲಿ ಲಭ್ಯವಿರುವ ತಾಡವೋಲೆ, ಕಡತ ಮುಂತಾದ ಪಾರಂಪರಿಕ ದಾಖಲೆಗಳ ಸಂಗ್ರಹ, ಕೆಳದಿ ಸಂಸ್ಥಾನದ ಚಾರಿತ್ರಿಕ ದಾಖಲೆಗಳಾಗಿ ಲಿಪಿಗೊಂಡ ತಾಡ ಓಲೆಗಳು, ಕಡತ ಮುಂತಾದವುಗಳ ಸಂಗ್ರಹ, ಮೇಲುಕೋಟೆಯ ಮಠದಲ್ಲಿ ಲಭ್ಯವಿರುವ ಸಂಗ್ರಹಿತ ದಾಖಲೆಗಳು, ಮೈಸೂರು ಸಂಸ್ಥಾನದ ಪತ್ರಾಗಾರ, ಒರಿಯಂಟಲ್ ಪತ್ರಾಗಾರ, ಮೂಡಬಿದಿರೆಯ ಜೈನಮಠದ ಪತ್ರಾಗಾರ, ಹಂಗಾರಕಟ್ಟೆಯ ಬಾಳೆಕುದ್ರು ಮಠ, ಕೊಲ್ಲೂರು, ಸುಬ್ರಮಣ್ಯ, ಧರ್ಮಸ್ಥಳದ ಮಂಜುನಾಥ ಸಂಸ್ಕೃತಿ ಪ್ರತಿಷ್ಠಾನದಲ್ಲಿರುವ ಅಪೂರ್ವ ಸಂಗ್ರಹಗಳು ಇವಲ್ಲದೇ ಗ್ರಂಥ, ಕಡತಗಳ ರೂಪದಲ್ಲಿ ಮಠಮಾನ್ಯ, ದೇವಸ್ಥಾನ, ಅರಮನೆಗಳಲ್ಲಿ ಮುಖ್ಯವಾಗಿ ಮಧ್ವಾಚಾರ್ಯಾರ ಕಾಲದಿಂದಲೂ ಉಡುಪಿಯ ಅಷ್ಟಮಠಗಳಲ್ಲಿ ಲಭ್ಯವಿರುವ ಸಾವಿರಾರು ತಾಡವೋಲೆಗಳಲ್ಲಿ ಲಿಖಿತಗೊಂಡ ಗ್ರಾಂಥಿಕ ದಾಖಲೆಗಳು ಸಂರಕ್ಷಣೆಗೊಂಡಿರುವುದು ಭಾರತೀಯರ ಇತಿಹಾಸ ಪ್ರಜ್ಞೆಗೆ ಸಾಕ್ಷಿ. ಹೀಗೆ ದಕ್ಷಿಣಭಾರತದ ಪಾರಂಪರಿಕ ಪತ್ರಾಗಾರಗಳಲ್ಲಿ ಸಂಗ್ರಹಗೊಂಡಿರುವ 250–300 ವರ್ಷಗಳು ಬಾಳ್ವಿಕೆ ಬರುವ ತಾಡ ಓಲೆಗಳನ್ನು ಒಂದು ಸಾವಿರ ವರ್ಷಗಳಿಂದ ಜತನವಾಗಿ ಕಾಪಿಡುವ ವೈಜ್ಞಾನಿಕತೆ ಮತ್ತು ಸಂಸ್ಕೃತಿಯ ರಕ್ಷಣೆಗೆ ಬದ್ಧರಿದ್ದರು ಎಂಬುವುದು ಉತ್ತಮ ಉದಾಹರಣೆ. ಈ ಪತ್ರಾಗಾರಗಳಲ್ಲಿ ವೈದಿಕ ಜ್ಞಾನಪರಂಪರೆಗಳನ್ನು ಒಳಗೊಂಡಂತೆ ಮಹಾಕಾವ್ಯ, ಪುರಾಣ, ಮಾರ್ಗಪರಂಪರೆಯ ಸಾಹಿತ್ಯಗಳು, ರಾಜರುಗಳ ಆದೇಶ, ನಿರೂಪ, ದಾನಪತ್ರ ಮುಂತಾದ ದಾಖಲೆಗಳು ಸುರಕ್ಷಿತವಾಗಿ ಸಂರಕ್ಷಿಸಲ್ಪಟ್ಟುಕೊಂಡು ಬಂದಿರುವುದು ಮುಂದುವರೆದು ತುಳುನಾಡಿನ ಗ್ರಾಮಪದ್ಧತಿಯಲ್ಲಿ ಉಲ್ಲೇಖಿತಗೊಂಡಿರುವ ಹಲವಾರು ಬ್ರಾಹ್ಮಣ ಮನೆತನಗಳಲ್ಲಿ ಸುಮಾರು 800 ವರ್ಷಗಳಿಂದ ಜತನವಾಗಿ ಕಾಪಿಟ್ಟುಕೊಂಡು ಬಂದಿರುವ ತಾಡವೋಲೆಗಳು ಬಹಳಷ್ಟು ಲಭ್ಯವಿದ್ದು ಸಂಸ್ಕೃತಿಯ ಮಜಲುಗಳಲ್ಲಿ ಆದ ಸ್ಥಿತ್ಯಂತರಗಳನ್ನು ವಿವರಿಸುತ್ತವೆ. ಜೈನರ ಆರಮನೆ, ಬೀಡುಗಳಲ್ಲಿ, ಗ್ರಾಮದ ಬಳ್ಳಾಲರ ಗುತ್ತು ಮನೆಗಳಲ್ಲೂ ಈ ರೀತಿಯ ತಾಡವೋಲೆಗಳ ಸಂಗ್ರಹ ಬಹಳಷ್ಟು ಕಾಣಸಿಗುತ್ತವೆ. ಚರಿತ್ರೆಗಳನ್ನು ನಿರೂಪಿಸುವ ದಾಖಲೆಗಳನ್ನು ಸಂರಕ್ಷಿಸುವಲ್ಲಿ, ದಾಖಲು ಮಾಡಿ ಸಂಗ್ರಹ ಮಾಡುವಲ್ಲಿ ಪರಂಪರಾಗತ ಶಾನುಭೋಗರು, ಕರಣಿಕ ವರ್ಗಗಳು ಸಾಂಪ್ರದಾಯಿಕವಾಗಿ ತಮ್ಮ ಇತಿಹಾಸ ಪ್ರಜ್ಞೆಯನ್ನು ಉಳಿಸುವ ಕರ್ತವ್ಯಗಳನ್ನು ಮಾಡಿಕೊಂಡಿರುವುದು ಮಾತ್ರವಲ್ಲ ಪರಂಪರಾಗತ ಪತ್ರಾಗಾರಗಳನ್ನು ಸಂರಕ್ಷಿಸುವಲ್ಲಿ ಪ್ರಧಾನ ಭೂಮಿಕೆಯನ್ನು ವಹಿಸಿದ್ದಾರೆ. ಆರಮನೆಯ ಕಡತ, ದೇವಸ್ಥಾನದ ಕಡತ, ಊರಿನ ಶಾನುಭೋಗರ ಕಡತ, ಕೈಫಿಯತ್ತುಗಳಂತಹ ಚರಿತ್ರೆಯ ದಾಖಲೀಕರಣ. ಹೀಗೆ

ಶ್ರೇಣಿಕೃತ ದಾಖಲೆಗಳನ್ನು ಸಂಗ್ರಹಿಸುವ ಪತ್ರಾಗಾರಗಳು ದೇಶಾದ್ಯಂತ ಬಹಳಷ್ಟಿದ್ದವು. ಇವುಗಳಲ್ಲಿ ಭೂಮಿಯ ದಾನ, ಭೂಹಿಡುವಳಿಗಳ ಮಾಹಿತಿ, ದೇವಸ್ಥಾನ, ಮಠ ಮಾನ್ಯಗಳು, ಧಾರ್ಮಿಕ ಕಟ್ಟಡಗಳ ಮಾಹಿತಿ, ಪತ್ರವ್ಯವಹಾರ ಮುಂತಾದವುಗಳು ತಾಳೆಗರಿ ಇಲ್ಲವೇ ಕಡತಗಳ ರೂಪದಲ್ಲಿ ಲಭ್ಯವಿವೆ.

ತೌಳವ ದೇಶ ಎಂದು ಕರೆಯಲ್ಪಡುವ ಈ ಭಾಗದ ಸಂಪೂರ್ಣ ಮಾಹಿತಿ ಇದ್ದರೂ ಅದರಲ್ಲಿ ಲಿಖಿತಗೊಂಡಿರುವ ಲಿಪಿ ಅರ್ಥಗೊಳ್ಳದೇ ಅಮೂಲ್ಯ ಆಕರಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡಿದೆ ಮಾತ್ರವಲ್ಲ ಆಡಳಿತ ನಡೆಸುವ ಸರಕಾರಗಳು ದಿವ್ಯ ಮೌನದಿಂದ ಇವೆ. ದುರಾದೃಷ್ಟ ಈ ದಾಖಲೆಗಳ ಪ್ರಾಮುಖ್ಯತೆ ಗೊತ್ತಿಲ್ಲದ ಇಲ್ಲವೇ ಅಧುನಿಕ ಓದು ಕೇಂದ್ರಿತವಾದ ಶಿಕ್ಷಣದ ಪ್ರಲೋಭನೆಗೆ ಒಳಗಾಗಿ ಕಾಲಾಂತರದಲ್ಲಿ ದಾಖಲೆಗಳಲ್ಲಿ ನಿರೂಪಿತವಾದ ಲಿಪಿಯ ಮಹತ್ವವನ್ನು ಅರ್ಥೈಸುವಲ್ಲಿ ವಿಫಲವಾದ ಕಾರಣ ಅವೆಷ್ಟೂ ಮೌಲ್ಯಯುಕ್ತ ಪತ್ರಾಗಾರಗಳು ನಿರುಪಯುಕ್ತಗೊಂಡು ನಾಶಕ್ಕೆ ಕಾರಣವಾದದ್ದೂ ಇದೆ. ಸಾಂಪ್ರದಾಯಿಕ ಪತ್ರಾಗಾರಗಳ ಸಂರಕ್ಷಣೆ ಮಾಡುವಲ್ಲಿ ಆಸಡ್ಡೆಯನ್ನು ವಹಿಸಿದ ಕಾರಣ ಅವುಗಳು ಶಿಥಿಲಗೊಂಡಿರುವ ಸಾಧ್ಯತೆಗಳು ಇವೆ. ಪ್ರಸ್ತುತ ತಂತ್ರಜ್ಞಾನಗಳು ಬೆಳೆಯುತ್ತಿರುವ ಸಂದರ್ಭದಲ್ಲಿ ಮೈಸೂರಿನ ಒರಿಯಂಟಲ್ ಗ್ರಂಥಾಲಯದಲ್ಲಿರುವ ತಾಳೆಗರಿಗಳ ಮತ್ತು ಕಡತಗಳ ಮಾಹಿತಿ ಡಿಜಿಟಲೀಕರಣಗೊಳ್ಳುತ್ತಿರುವುದು, ಮಠ ಮಾನ್ಯಗಳ ದಾಖಲೆಗಳು ಡಿಜಿಟಲೀಕರಣಗೊಳ್ಳುತ್ತಿರುವುದು ಅಧುನಿಕ ಕಾಲಘಟ್ಟದಲ್ಲಿ ಪಾರಂಪರಿಕ ಪತ್ರಾಗಾರಗಳಲ್ಲಿರುವ ಜ್ಞಾನಭಂಡಾರ ಸಂಸ್ಕೃತಿಯ ಅಧ್ಯಯನದಲ್ಲಿ ಹೊಸ ಭಾಷ್ಯ ಬರೆಯಬಹುದು. ಈ ಭಾಗದ ಚರಿತ್ರೆಯನ್ನು ನಿರೂಪಿಸುವಲ್ಲಿ ಸಾಂಪ್ರದಾಯಿಕ ಪತ್ರಾಗಾರಗಳಲ್ಲಿನ ಮಹತ್ವದ ದಾಖಲೆಗಳು ಈ ಭಾಗದ ಚರಿತ್ರೆಯ ಆಕರವಾಗಿ ಮಾನ್ಯತೆ ಪಡೆಯಬಹುದು.

ಅಧುನಿಕ ಕಾಲಘಟ್ಟಕ್ಕೆ ಬಂದಾಗ ವಿದೇಶಗಳಲ್ಲಿ ಪತ್ರಾಗಾರದ ಕಲ್ಪನೆ ಪ್ರಾರಂಭಗೊಂಡಿರುವುದು 500 ವರ್ಷಗಳ ಹಿಂದೆ. ಭಾರತದಲ್ಲಿ ಅಧುನಿಕ ಪತ್ರಾಗಾರಗಳು ಕ್ರಿ.ಶ 1554ರಿಂದ ಪೋರ್ಚುಗೀಸರ ಆಡಳಿತದ ದಾಖಲೆಗಳನ್ನು ಸಂರಕ್ಷಿಸುವಲ್ಲಿ ಗೋವಾದಲ್ಲಿ ಪ್ರಾರಂಭಿಸಿದರೇ, 1700ರಲ್ಲಿ ಬ್ರಿಟಿಷರು ಮದ್ರಾಸ್, 1774ರಲ್ಲಿ ಬಂಗಾಳ ಮುಂದುವರೆದು 1860ರಲ್ಲಿ ಕಲ್ಕತಾದಲ್ಲಿ ಪತ್ರಾಗಾರಗಳ ಅಗತ್ಯತೆಯ ಕಲ್ಪನೆಗಳು ಹುಟ್ಟಿಕೊಂಡವು. ಕಲ್ಕತ್ತಾ, ಮುಂಬಯಿ, ಮದ್ರಾಸ್ಗಳಲ್ಲಿ ವಸಾಹತುಷಾಹಿ ತನ್ನ ಪ್ರಮುಖ ದಾಖಲೆ ಸಂಗ್ರಹ ಕೇಂದ್ರಗಳನ್ನು ಪ್ರಾರಂಭಿಸಿದರು. ಮುಂದುವರೆದು ದಾಖಲೆಗಳನ್ನು ಸಂರಕ್ಷಣೆ ಮಾಡುವಲ್ಲಿ ವಸಾಹತುಷಾಹಿಗಳು 1889, 1891ರಲ್ಲಿ ಇಂಪೀರಿಯಲ್ ರೆಕಾರ್ಡ್ಸ್ ಇಲಾಖೆಯನ್ನು ಅಸ್ತಿತ್ವಕ್ಕೆ ತಂದರು. 1911ರಲ್ಲಿ ಕಲ್ಕತ್ತಾದಿಂದ ದೆಹಲಿಗೆ ಕೇಂದ್ರ ಪತ್ರಾಗಾರ ಇಲಾಖೆ ವರ್ಗಾವಣೆಗೊಂಡು ಐಅರ್ಡಿ– ಇಂಪೀರಿಯಲ್ ರೆಕಾರ್ಡ್ಸ್ ಡಿಪಾರ್ಮೆಂಟ್ ಎಂದು ನಾಮಕರಣಗೊಂಡಿತು. ಸ್ವಾತಂತ್ರ್ಯ ನಂತರ ಎನ್.ಎ.ಐ ಇಲ್ಲವೇ ನ್ಯಾಷನಲ್ ಅರ್ಕೈವ್ಸ್ ಆಫ್ ಇಂಡಿಯಾ ಹೆಸರಿನಲ್ಲಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ.

ಇತಿಹಾಸಕಾರರು ಮತ್ತು ಇತರ ಬರಹಗಾರರು ತಮ್ಮ ಹಿಂದಿನವರ ಜೀವನ ಮತ್ತು ಚಟುವಟಿಕೆಗಳ ದಾಖಲೆಗಳಿಗಾಗಿ ಪತ್ರಾಗಾರದಲ್ಲಿ ಲಭ್ಯವಿರುವ

ದಾಖಲೆಗಳ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದಾರೆ. ಪ್ರಾಚೀನ ಆಡಳಿತದ ದಾಖಲೆಗಳನ್ನು ಸಾರ್ವಜನಿಕ ಆಸ್ತಿ ಎಂದು ಪರಿಗಣಿಸಿ ಅವುಗಳನ್ನು ಸಾಂಸ್ಕೃತಿಕ ಉದ್ದೇಶಗಳಿಗಾಗಿ ಪ್ರಾಥಮಿಕವಾಗಿ ಇರಿಸಲಾಯಿತು. ಪತ್ರಾಗಾರಗಳು ರಾಷ್ಟ್ರೀಯ ಇತಿಹಾಸದ ಮೂಲದ ಬಗ್ಗೆ ಜನರ ತಿಳುವಳಿಕೆಯನ್ನು ಬೆಳೆಸುವಲ್ಲಿ ಮತ್ತು ರಾಷ್ಟ್ರೀಯ ಗುರುತಿನ ಪ್ರಜ್ಞೆಯನ್ನು ರಚಿಸುವಲ್ಲಿ ಪ್ರಬಲ ಸಂಸ್ಥೆಯಾಗಿ ಮಾನವ ಚಟುವಟಿಕೆಗಳ ಪುರಾವೆಗಳನ್ನು ಒದಗಿಸುತ್ತವೆಯಲ್ಲದೇ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ನಮಗೆ ಹೆಚ್ಚು ತಿಳಿಸುವ ಮೂಲಕ ಗುರುತನ್ನು ಮತ್ತು ಸಂಸ್ಕೃತಿಗಳ ತಿಳುವಳಿಕೆಯನ್ನು ಹೆಚ್ಚಿಸುತ್ತವೆ. ಪತ್ರಾಗಾರವು ಪ್ರಜ್ಞಾಪೂರ್ವಕವಾಗಿ ಬರೆದ ಅಥವಾ ನಂತರದವರಿಗೆ ನಿರ್ದಿಷ್ಟ ಸಂದೇಶವನ್ನು ಸಂವಹನ ಮಾಡಲು ಅಂದರೆ ಅವುಗಳು ರಾಷ್ಟ್ರದ ಸ್ಮರಣೆಯಾಗಿ ಕಾರ್ಯನಿರ್ವಹಿಸುವುದಲ್ಲದೇ ಸಮಾಜವನ್ನು ಯೋಜಿಸಲು ಸಕ್ರಿಯಗೊಳಿಸುತ್ತದೆ.

ಅನುಭವದ ಅರಿವಿನ ಆಧಾರದ ಮೇಲೆ ಭವಿಷ್ಯಕ್ಕಾಗಿ ಬುದ್ಧಿವಂತಿಕೆಯಿಂದ ರೂಪುಗೊಳಿಸಿದ ಸರ್ಕಾರದ ಕಟ್ಟುಪಾಡುಗಳು. ಬದ್ಧತೆಯ ದಾಖಲೆಗಳು, ನಾಗರಿಕರ ಹಕ್ಕುಗಳು ಹಾಗೂ ಅರ್ಹತೆಗಳ ಪುರಾವೆಗಳನ್ನು ಸಂರಕ್ಷಿಸಬೇಕಾಗುತ್ತದೆ. ಉದಾಹರಣೆಗೆ ಕುಟುಂಬದ ಆಸ್ತಿಯಲ್ಲಿ ತಮ್ಮ ಹಕ್ಕುಗಳನ್ನು ಅಥವಾ ಸಾರ್ವಜನಿಕ ವಿಷಯಗಳಲ್ಲಿ ತಮ್ಮ ಹಕ್ಕುಗಳನ್ನು ರಕ್ಷಿಸಲು ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವ ಅಭ್ಯಾಸದಿಂದಾಗಿ ಪ್ರತಿಯೊಬ್ಬರ ಮನೆಗಳು ಖಾಸಗಿ ಪತ್ರಾಗಾರವಾಗಿ ರೂಪುಗೊಳ್ಳುವುದನ್ನು ಪರಿಗಣಿಸಬಹುದು. ಆಸ್ತಿ, ಗೃಹ ಮತ್ತು ವೈವಾಹಿಕ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳು ಮತ್ತು ಕುಟುಂಬದ ಸದಸ್ಯರ ಜನ್ಮ ಪ್ರಮಾಣಪತ್ರಗಳು, ಪಡಿತರ ಚೀಟಿಗಳು, ಮತದಾರರ ಪಟ್ಟಿಗಳು ಮತ್ತು ಅವರ ಶಿಕ್ಷಣ ಮತ್ತು ಉದ್ಯೋಗದ ಪ್ರಮಾಣ ಪತ್ರಗಳಂತಹ ದಾಖಲೆಗಳು, ಕುಟುಂಬದ ಸದಸ್ಯರ ಫೋಟೋಗಳು ಮತ್ತು ಆಲ್ಬಮ್‌ಗಳು, ಅವರ ಪೂರ್ವಜರು ಬಳಸಿದ ದೇಶೀಯ ಲೇಖನಗಳು, ಕುಟುಂಬದ ಸದಸ್ಯರ ಬರಹಗಳು ಮತ್ತು ಸಮಾಜದ ವಿವಿಧ ಸದಸ್ಯರ ನಡುವಿನ ಪತ್ರ–ವ್ಯವಹಾರಗಳು ಮುಂದುವರೆದು ಸಾರ್ವಜನಿಕ ದಾಖಲೆಗಳು ಅಂದರೆ ನಿರ್ದಿಷ್ಟ ವ್ಯಕ್ತಿಗಳೊಂದಿಗೆ ವಿವಿಧ ರೂಪಗಳಲ್ಲಿ ನಿಕಟ ಸಂಬಂಧವನ್ನು ಹೊಂದಿದ ದಾಖಲೆ ಮುಂತಾದವುಗಳು. ಹೀಗೆ ಸಾಮಾನ್ಯ ಜನರ ಜೀವಿತಾವಧಿಯಲ್ಲಿ ವೈಯುಕ್ತಿಕ ಪತ್ರಾಗಾರಗಳು ಹೇಗೆ ಪ್ರಾಮುಖ್ಯತೆಯನ್ನು ವಹಿಸುತ್ತವೆ ಎಂಬುವುದು ಜನರ ಖಾಸಗಿ ಮತ್ತು ಸಾರ್ವಜನಿಕ ಜೀವನದಲ್ಲಿ ತಮ್ಮ ಸಾಹಸ ಮತ್ತು ಸಾಧನೆಗಳನ್ನು ಪ್ರಕಟಿಸಲು ಹೆಚ್ಚಿನ ಸಾರ್ವಜನಿಕ ದಾಖಲೆಗಳನ್ನು ಬಹಳ ಎಚ್ಚರಿಕೆಯಿಂದ ಸಂರಕ್ಷಿಸುವುದು ಮುಖ್ಯವಾಗುತ್ತದೆ.

ತಮಿಳುನಾಡು ಮತ್ತು ರಾಷ್ಟ್ರೀಯ ಪತ್ರಾಗಾರಗಳಲ್ಲಿರುವ ಮಿಲಿಟರಿ ದಾಖಲೆಗಳು ಸ್ಥಳೀಯರು ಮತ್ತು ಇತರ ಯುರೋಪಿಯನ್ ಶಕ್ತಿಗಳೊಂದಿಗೆ ಮಿಲಿಟರಿ ಕಾರ್ಯಾಚರಣೆಗಳಲ್ಲಿ ನಡೆಸಿದ ಶಕ್ತಿಯ ಪ್ರದರ್ಶಿಸಲು ಮಿಲಿಟರಿ ಅಧಿಕಾರಿಗಳು ಅನೇಕ ದಾಖಲೆಗಳನ್ನು ರಚಿಸಿದ್ದಾರೆ. ದಾಖಲೆಗಳನ್ನು ಹಿಂದಿನ ಆಡಳಿತಗಳ ಜ್ಞಾನವೆಂದು ಪರಿಗಣಿಸಲಾಗುತ್ತದೆ .ಅವರು ಹಿಂದಿನ ಸರ್ಕಾರಗಳ ದಿನನಿತ್ಯದ ಆಡಳಿತಗಳು ಮತ್ತು ಅವರ ಅಟೆಂಡೆಂಟ್ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತಾರೆ ಹಿಂದಿನ ಸರ್ಕಾರದ ಸಂಬಂಧಿತ ದಾಖಲೆಗಳು ಹಿಂದಿನ ಆಡಳಿತದಲ್ಲಿ ಅವರ ಪ್ರಶ್ನಾರ್ಹ ನೀತಿ ಎಷ್ಟು ಯಶಸ್ವಿಯಾಗಿದೆ ಮತ್ತು ಪ್ರಸ್ತಾಪಿಸಲಾದ ಹೊಸ ನೀತಿಯಲ್ಲಿ

ಏನನ್ನು ಬದಲಾಯಿಸಬಹುದು ಮತ್ತು ಏನನ್ನು ಸೇರಿಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು. ಉದಾಹರಣೆಗೆ ಶಾಸನದಲ್ಲಿ, ಕಂದಾಯ, ಸಾರ್ವಜನಿಕ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ವ್ಯವಹಾರಗಳು, ಸಾಮಾಜಿಕ ವಿಷಯಗಳಂತಹ ಶಾಸನಾತ್ಮಕ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಸಂಬಂಧಿತ ದಾಖಲೆಗಳನ್ನು ಸರ್ಕಾರ ಉಲ್ಲೇಖಿಸಿ ಅಗತ್ಯ ಮಾಹಿತಿಯನ್ನು ಪತ್ರಾಗಾರಗಳು ಒದಗಿಸುತ್ತದೆ.

ಪತ್ರಾಗಾರದಲ್ಲಿರುವ ದಾಖಲೆಗಳು ಯುರೋಪಿಯನ್ನರು ನಿರ್ದಿಷ್ಟವಾಗಿ ಇಂಗ್ಲಿಷರು ಮೂರು ಶತಮಾನಗಳಿಗೂ ಹೆಚ್ಚು ಕಾಲ ದೇಶವನ್ನು ಹೇಗೆ ಆಳಿದರು ಎಂಬುದನ್ನು ಸಾಬೀತುಪಡಿಸುತ್ತದೆ. ಸಾರ್ವಜನಿಕ ಇಲಾಖೆ, ಕಂದಾಯ ಇಲಾಖೆ, ನ್ಯಾಯಾಂಗ ಇಲಾಖೆ, ಮಿಲಿಟರಿ ಇಲಾಖೆ, ಸಾಗರ ಇಲಾಖೆ, ರಾಜಕೀಯ ಇಲಾಖೆ ಮತ್ತು ರಹಸ್ಯ ಇಲಾಖೆಯಂತಹ ಆರಂಭಿಕ ದಾಖಲೆಗಳು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳ ಹಿಂದಿನ ಆಡಳಿತದ ವಿವರಗಳನ್ನು ನೀಡುವುದರಿಂದ ಇವುಗಳನ್ನು ಮಾರ್ಗದರ್ಶಿಯಾಗಿ ಪರಿಗಣಿಸಲಾಗುತ್ತದೆ. ಭಾರತದ ರಾಷ್ಟ್ರೀಯ ಪತ್ರಾಗಾರದಲ್ಲಿರುವ ಗೃಹ ಇಲಾಖೆಯ ಕಾಗದ ಪತ್ರಗಳು ದೇವದಾಸಿ ಪದ್ಧತಿಯ ಸಂಸ್ಥೆ ಮತ್ತು ಬಾಲ್ಯವಿವಾಹ, ಬಹುಪತ್ನಿತ್ವ ಮುಂತಾದ ವಿವಿಧ ವಿವಾಹ ಪದ್ಧತಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಹೆಣ್ಣು ಶಿಶುಹತ್ಯೆ, ಸತಿ ಮತ್ತು ಶಾಶ್ವತ ವಿಧವೆಯತ್ವವನ್ನು ಈಸ್ಟ್ ಇಂಡಿಯಾ ಕಂಪನಿ ಪತ್ರಿಕೆಗಳಲ್ಲಿ ಚಿತ್ರಿಸಲಾಗಿದೆ ಭಾರತ ಮತ್ತು ಇಂಗ್ಲೆಂಡ್ನಲ್ಲಿ ಅವರ ದಾಖಲೆಗಳ ಸಂರಕ್ಷಣೆಯು ಬ್ರಿಟಿಷ್ ಇತಿಹಾಸಕಾರರಿಗೆ ಪ್ರಯೋಜನವನ್ನು ನೀಡಿತು, ಅವರು ಹೀಗೆ ಸಂರಕ್ಷಿಸಲ್ಪಟ್ಟ ದಾಖಲೆಗಳೊಂದಿಗೆ ಭಾರತದ ಇತಿಹಾಸವನ್ನು ಬರೆಯಲು ಪ್ರಾರಂಭಿಸಿದರು ಮತ್ತು ಭಾರತೀಯ ಅಧ್ಯಯನದ ವಿಷಯಕ್ಕೆ ಹೊಸ ಜ್ಞಾನೋದಯವನ್ನು ನೀಡಿದರು.

❖❖❖

ಬಾನಲಿ ಬಾಗಿದ ಬಣ್ಣದ ಕಮಾನು
ಕಾಮನ ಬಿಲ್ಲೆಂದು
ಸುಂದರ ಹೆಸರನ್ನಿಟ್ಟವರಾರು
ಹೇಳುವೆಯಾ ನೀನಿಂದು?

ಗೋಪಾಲಕೃಷ್ಣ ಅಡಿಗರ "ಶ್ರೀರಾಮನವಮಿಯ ದಿವಸ" ನಾನು ಕಾಣುವ ಹಾಗೆ

ರಘು ಸೊಫೀನಾ

ಸಿ–203, ಸಿದ್ಧಿವಿನಾಯಕ, ವಿಮಲ್ ರೆಸಿಡೆನ್ಸಿಯ ಹಿಂದೆ, ಯಶವಂತ ಗೌರವ ಏರಿಯಾ, ನಿರೆಮೊನ ಗೋನ್, ನಲ್ಲಸೊಪರ(ವೆಸ್ಟ್), ಪಾಲ್ಘಾರ್ ಜಿಲ್ಲೆ, ಮಹಾರಾಷ್ಟ್ರ – 401203

(ಹಿಂದಿನ ಸಂಚಿಕೆಯಿಂದ...)

ರಾಕೆಟ್ಟು ಚಂದ್ರನನ್ನು ತಲುಪುವುದು ಅಥವಾ ಮನುಷ್ಯ ರಾಕೆಟ್ಟಿನಲ್ಲಿ ಹೋಗಿ ಚಂದ್ರನ ಮೇಲೆ ತಿರುಗಾಡುವುದು ಒಂದು ಬಹಳ ದೊಡ್ಡ ವೈಜ್ಞಾನಿಕ ಸಾಧನೆ ಎಂಬುದು ನಿಜ. ಆದರೆ, ಈ ಕವನದ ಈ ಸಂದರ್ಭದಲ್ಲಿ ಈ ವೈಜ್ಞಾನಿಕ ಸಾಧನೆಯನ್ನು ನಾವು ಪರಿಗಣಿಸುತ್ತಿಲ್ಲ, ನಾವು ಪರಿಗಣಿಸುತ್ತಿರುವುದು ಆಧ್ಯಾತ್ಮಿಕ ಸಾಧನೆಯನ್ನು; ಮತ್ತು ಇದುವರೆಗೆ ನಾವು ಕಂಡಿರುವಂತೆ, ಈ ಕವನದ ಕೇಂದ್ರವಸ್ತುವೇ ಧ್ಯಾನ ಅಥವಾ ತಪಸ್ಸು. ರಾಕೆಟ್ಟನ್ನು ಆಧುನಿಕ ವಿಕಾರ ಎಂದು ಕರೆಯುವ ಮೂಲಕ ಅಡಿಗರು ಬೌದ್ಧಿಕ ವೈಜ್ಞಾನಿಕ ಸಾಧನೆಗಿಂತ ಅಂತರಂಗದ ಆಧ್ಯಾತ್ಮಿಕ ಸಾಧನೆ ಹೆಚ್ಚು ಮಹತ್ವದ್ದು ಎಂದು ಹೇಳುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.[5]

ವೇದೋಪನಿಷದಗಳ ಭೂತಗನ್ನಡಿಯೊಳಗೆ
ಪಡಿಮೂಡಿದಾಕೃತಿಗೆ ತಾನೆ ಮುಗ್ಧ
ಮತ್ಸ್ಯಕೂರ್ಮವರಾಹ ಮೆಟ್ಟಿಲುಗಳೇರುತ್ತ
ಹುತ್ತಗಟ್ಟಿದ್ದ ಕೈ ಕಡೆದ ನೋಟ:

"ಮತ್ಸ್ಯಕೂರ್ಮವರಾಹ ಮೆಟ್ಟಿಲುಗಳೇರುತ್ತ ಹುತ್ತಗಟ್ಟಿದ್ದ ಕೈ" ಸಲ್ಲುವುದು ವಾಲ್ಮೀಕಿಗೆ, ರಾಮನಿಗಲ್ಲ. (ಸಂಸ್ಕೃತದಲ್ಲಿ ವಲ್ಮೀಕ ಅಂದರೆ ಹುತ್ತ ಎಂದರ್ಥ. ಹಲವಾರು ವರ್ಷಗಳ ಕಾಲ ನಿಶ್ಚಲನಾಗಿ ಕುಳಿತು ತಪಸ್ಸು ಮಾಡುತ್ತಿದ್ದಾಗ ಆತನ ಸುತ್ತ ಹುತ್ತ ಕಟ್ಟಿಕೊಂಡಿತ್ತು. ತಪಸ್ಸು ಮುಗಿದಾಗ ಆತ ಹುತ್ತದಿಂದ ಹೊರಬಂದ. ಆದ್ದರಿಂದ ಆತನಿಗೆ ವಾಲ್ಮೀಕಿ ಎಂಬ ಹೆಸರು ಬಂದಿತು.) ತಪಸ್ಸು ಅಥವಾ ಧ್ಯಾನದ ಮೂಲಕ ಮತ್ಸ್ಯಕೂರ್ಮವರಾಹ ಮೆಟ್ಟಿಲುಗಳನ್ನು ಏರಿದವನು ವಾಲ್ಮೀಕಿ. ಆ ವಾಲ್ಮೀಕಿ ಕಡೆದ, ಅಂದರೆ ಕೆತ್ತಿದ ಅಥವಾ ಶಿಲ್ಪಿಸಿದ, ನೋಟ. ಇಲ್ಲಿ ಆ ನೋಟ ಯಾವುದು ಎಂಬುದರ ಪ್ರಸ್ತಾಪವಿಲ್ಲ, ಅದು ಮುಂದಿನ ಪದ್ಯಗಳಲ್ಲಿ ಬರುತ್ತದೆ. ಇಲ್ಲಿ ಆ ನೋಟಕ್ಕೆ ಪ್ರೇರಣೆಯಾದ ಅಥವಾ ಆ ನೋಟವನ್ನು ರೂಪಿಸಿದ ಎರಡು ಮುಖ್ಯ ಸಂಗತಿಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ಒಂದು: ವೇದೋಪನಿಷತ್ತುಗಳ ಅಧ್ಯಯನ; ಇನ್ನೊಂದು: ಹುತ್ತಗಟ್ಟಿದ್ದು ಅಥವಾ ತಪಸ್ಸು ಮಾಡಿದ್ದು.

ಇಲ್ಲಿನ ಭೂತಗನ್ನಡಿಗೆ ಎರಡು ಅರ್ಥಗಳಿವೆ:

ವೇದೋಪನಿಷತ್ತುಗಳ ರಚನೆಯಲ್ಲಿ ಪಾಲ್ಗೊಂಡ ಋಷಿಗಳು ಒಬ್ಬಿಬ್ಬರಲ್ಲ. ನೂರಾರು ವರ್ಷಗಳ ಅವಧಿಯಲ್ಲಿ ಹಲವಾರು ಪೀಳಿಗೆಗಳ ಅನೇಕಾನೇಕ ಋಷಿಗಳು

ನಡೆಸಿದ ತಪಸ್ಸು ಮತ್ತು ಚಿಂತನೆಯ ಒಟ್ಟು ಫಲ ಅವು. ಅಂದರೆ, ಅವು ಭೂತಕಾಲದ ಅಥವಾ ಗತಕಾಲದ, ಅಂದರೆ ವಾಲ್ಮೀಕಿಗಿಂತ ಮುಂಚಿನ ಕಾಲದ, ಋಷಿಮುನಿಗಳು ಗುರುತಿಸಿಕೊಟ್ಟ ಶ್ರೇಷ್ಠ ಮೌಲ್ಯಗಳನ್ನು ಬಿಂಬಿಸುವ ಕನ್ನಡಿ ಇದ್ದ ಹಾಗೆ. ಆ ಅರ್ಥದಲ್ಲಿ ಅವು ಭೂತಗನ್ನಡಿ.

ವಸ್ತುಗಳನ್ನು ಅವು ಇರುವುದಕ್ಕಿಂತ ದೊಡ್ಡದಾಗಿ ತೋರಿಸುವ ಅಥವಾ ಸೂಕ್ಷ್ಮವಿವರಗಳೂ ದೊಡ್ಡದಾಗಿ ಎದ್ದು ಕಾಣುವಂತೆ ಮಾಡುವ ಸಾಧನ ಭೂತಗನ್ನಡಿ. ವೇದೋಪನಿಷತ್ತುಗಳು ಆದರ್ಶಪುರುಷನ ಲಕ್ಷಣಗಳನ್ನು ವಿವರವಾಗಿ ಎಳೆಎಳೆಯಾಗಿ ಬಿಡಿಸಿ ಅವು ಕಣ್ಣಿಗೆ ಕಟ್ಟಿ ಬರುವಂತೆ ಬಣ್ಣಿಸುತ್ತವೆ.

ನಮಗೆ ಈ ಎರಡು ಅರ್ಥಗಳೂ ಅಗತ್ಯ. ಗತಕಾಲದ ಋಷಿಮುನಿಗಳು ಗುರುತಿಸಿಕೊಟ್ಟ ಎಲ್ಲಾ ಶ್ರೇಷ್ಠ ಮೌಲ್ಯಗಳ ಒಟ್ಟು ಮೊತ್ತವಾಗಿ ವೇದೋಪನಿಷತ್ತುಗಳ ಭೂತಗನ್ನಡಿಯಲ್ಲಿ ಎದ್ದು ಕಾಣುವಂತೆ ರೂಪಗೊಂಡ ಅಥವಾ 'ಪಡಿಮೂಡಿದ' ಆದರ್ಶಪುರುಷನಚಿತ್ರ ಕಂಡು ವಾಲ್ಮೀಕಿ ಮಂತ್ರಮುಗ್ಧನಾಗುತ್ತಾನೆ ಅಥವಾ ಅದಕ್ಕೆ ಮಾರುಹೋಗುತ್ತಾನೆ. ಇಲ್ಲಿನ 'ಮುಗ್ಧ' ಎಂಬುದು 'ಮಂತ್ರಮುಗ್ಧ' ಎಂಬುದರ ಸಂಕ್ಷಿಪ್ತ ರೂಪ ಅಥವಾ 'ಮಂತ್ರ' ಎಂಬುದು ಇಲ್ಲಿ ಅಧ್ಯಾಹಾರವಾಗಿದೆ ಎಂದು ನಾನು ಭಾವಿಸುತ್ತೇನೆ. ಮಂತ್ರಮುಗ್ಧ ಎಂದರೆ 'ಮಾರುಹೋದವನು' ಅಥವಾ 'ಮೋಡಿ ಹಾಕಲ್ಪಟ್ಟವನು'(the hypnotized) ಎಂದರ್ಥ. ವೇದೋಪನಿಷತ್ತುಗಳು ಬಣ್ಣಿಸುವ ಶ್ರೇಷ್ಠ ಮಾನವೀಯ ಮೌಲ್ಯಗಳ ಅಚ್ಚಿನಲ್ಲಿ ವಾಲ್ಮೀಕಿ ರಾಮನನ್ನು ಸೃಷ್ಟಿಸಿದ ಅಥವಾ ರಾಮನಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳು ಮೂಲತಃ ವೇದೋಪನಿಷತ್ತುಗಳು ರೂಪಿಸಿದ ಮೌಲ್ಯಗಳು ಎನ್ನುವುದು ಈ ಸಾಲುಗಳ ಇಂಗಿತಾರ್ಥ.

ಯು.ಆರ್. ಅನಂತಮೂರ್ತಿಯವರು ಶ್ರೀರಾಮನವಮಿಯ ದಿವಸ ಕುರಿತ ತಮ್ಮ ಲೇಖನ 'ಪದ್ಯ ಬಗೆವ ಬಗೆ'ಯಲ್ಲಿ(ನೋಡಿ: ಅವರ ಲೇಖನ ಸಂಗ್ರಹ– ಪೂರ್ವಾಪರ) "ಈ ಭೂತಕನ್ನಡಿಯೊಳಗೆ ಕಂಡದ್ದಕ್ಕೆ ಕವಿ ತಾವೇ ಮುಗ್ಧರಾಗಿದ್ದಾರೆ– 'ಕವಿ ತನ್ನ ಕೃತಿಗೆ ತಾನೆ ಮಣಿವನ್' ಎಂಬಂತೆ" ಎಂದು ಹೇಳಿದ್ದಾರೆ. ಆದರೆ, ತಮ್ಮ ಕೃತಿಗೆ ತಾವೇ ಮಣಿವ ಕವಿಗಳನ್ನು ಅಡಿಗರು ಸಂಪೂರ್ಣ ತಿರಸ್ಕಾರದಿಂದ ಕಾಣುತ್ತಾರೆ. ತಮ್ಮ ಸಮಗ್ರ ಕಾವ್ಯದ ದೀರ್ಘ ಮುನ್ನುಡಿಯ ಆರಂಭದಲ್ಲೇ ಅವರು ಹೀಗೆ ಹೇಳಿದ್ದಾರೆ: "ಮಮಕಾರ ತುಂಬ ಬಲಿಷ್ಠವಾದುದು. ಅದರಿಂದ ಸಂಪೂರ್ಣ ಹೊರತಾಗುವುದು ಸುಲಭಸಾಧ್ಯವಲ್ಲ. ಅದರಿಂದಲೇ ನಾವು ಅನೇಕ ಕವಿಗಳು, ಹಿಂದಿನವರೂ ಇಂದಿನವರೂ, ತಮ್ಮ ಕಾವ್ಯಕ್ಕೆ ತಾವೇ ಮಣಿಯುವುದನ್ನು, ಅದನ್ನು ತಾವೇ ಹೊತ್ತು ಕುಣಿಯುವುದನ್ನು ಕಾಣುತ್ತೇವೆ. ಆದರೆ ಈ ಅಹಂಕಾರ ಪ್ರದರ್ಶನ ಸುಸಂಸ್ಕೃತಿಯ ಲಕ್ಷಣವಲ್ಲ." ಅಡಿಗರ ಈ ಹೇಳಿಕೆಯ ಬೆಳಕಲ್ಲಿ 'ಮುಗ್ಧ' ಶಬ್ದ ಕುರಿತ ಅನಂತಮೂರ್ತಿಯವರ ಅರ್ಥವ್ಯಾಖ್ಯಾನ ನನಗೆ ಸರಿಯೆನಿಸುವುದಿಲ್ಲ.

ಇಲ್ಲಿನ ಕೈ–ಯನ್ನು 'ಹುತ್ತಗಟ್ಟಿದ್ದ ಕೈ' ಮತ್ತು 'ಅಂತಹ ಕೈ ಕಡೆದ ನೋಟ' ಎಂದು ಬಿಡಿಸಬೇಕು. ಇಲ್ಲಿ ಮತ್ಸ್ಯ ಕೂರ್ಮ ವರಾಹ ಮೆಟ್ಟಿಲುಗಳನ್ನೇರಿದ್ದು ರಾಮನಲ್ಲ, ವಾಲ್ಮೀಕಿ. ಯಾಕೆಂದರೆ, ಹುತ್ತಗಟ್ಟಿದ್ದ ಕೈ ವಾಲ್ಮೀಕಿಯದು. ಆತ ತಪಸ್ಸಿನ ಮೂಲಕ ಮತ್ಸ್ಯ ಕೂರ್ಮ ವರಾಹ ಮೆಟ್ಟಿಲುಗಳನ್ನೇರುವ ಸಾಧನೆಯಲ್ಲಿ ತೊಡಗಿಕೊಂಡಿದ್ದಾಗ, ಆತನ ಸುತ್ತ ಹುತ್ತ ಕಟ್ಟಿಕೊಳ್ಳುತ್ತದೆ. ಅವತಾರಗಳ ಚಿತ್ರವನ್ನು

ಇಲ್ಲಿ ವಿಕಾಸದ ರೂಪಕವಾಗಿ ಬಳಸಲಾಗಿದೆ. ಯಾಕೆಂದರೆ, ರಾಮ ಅವತಾರ ಪುರುಷ ಮತ್ತು ವಿಷ್ಣುವಿನ ಹತ್ತು ಅವತಾರಗಳಲ್ಲಿ ಏಳನೆಯವನು ಎಂಬುದನ್ನು ನಮಗೆ ನೆನಪು ಮಾಡಿಕೊಡುವುದು ಇದರ ಉದ್ದೇಶ; ಜೊತೆಗೆ, ಪುರುಷೋತ್ತಮ ಎಂದು ಕರೆಯಲ್ಪಡುವ ಇಂತಹ ಅವತಾರ ಪುರುಷನನ್ನು ಒಬ್ಬ ಕವಿ ಸೃಷ್ಟಿಸಬೇಕಾದರೆ, ಆ ಕವಿ ಸ್ವತಃ ಆ ಅವತಾರ ಪುರುಷನ ಸಮಾನ ಮಟ್ಟದ ಅಥವಾ ಅವನಿಗಿಂತ ಹೆಚ್ಚಿನ ಮಟ್ಟದ ವಿಕಾಸವನ್ನು ಪಡೆದಿರಬೇಕು, ವಾಲ್ಮೀಕಿ ಉಗ್ರ ತಪಸ್ಸಿನ ಮೂಲಕ ಅಂತಹ ವಿಕಾಸವನ್ನು ಪಡೆದುಕೊಂಡ ಎಂದು ಹೇಳುವುದು ಕೂಡ ಇದರ ಉದ್ದೇಶ.

ಈ ಕವನದ ಸಂದರ್ಭದಲ್ಲಿ ಮತ್ಸ್ಯ ಕೂರ್ಮ ವರಾಹ ಮೆಟ್ಟಿಲುಗಳನ್ನೇರುವುದು ಮತ್ತು ಮೂಲಾಧಾರದಲ್ಲಿ ಕುಳಿತಿರುವ ಕಿಡಿ ಷಟ್ಚಕ್ರಗಳನ್ನು ಹಾಯ್ದು ಸಹಸ್ರಾರವನ್ನು ತಲುಪುವುದು, ಇವೆರಡನ್ನೂ ಅಂತರಂಗದ ವಿಕಾಸವನ್ನು ಹೇಳುವ ಸಮಾನ ರೂಪಕಗಳಾಗಿ ಬಳಸಲಾಗಿದೆ. ('ಗುಮ್ಮಟ ಗಿರಿಯ ನೆತ್ತಿಯಲ್ಲಿ ಕಲ್ಲರಳಿದ್ದು' ಕೂಡ ಇಂತಹದೇ ವಿಕಾಸದ ಇನ್ನೊಂದು ಚಿತ್ರ). ಕುಂಡಲಿನಿಯ ಧ್ಯಾನ ಮತ್ತು ತಪಸ್ಸು, ಎರಡೂ ಒಂದೇ; ಅವುಗಳಲ್ಲಿ ವ್ಯತ್ಯಾಸವಿಲ್ಲ. ಲೆಕ್ಕದ ಪ್ರಕಾರ, ಅಡಿಗರು ವಾಲ್ಮೀಕಿಯ ಸಾಧನೆಯನ್ನು ಹೇಳಲು ಇಲ್ಲಿ ಕುಂಡಲಿನಿಯ ಭಾಷೆಯನ್ನೇ ಬಳಸಬೇಕಾಗಿತ್ತು, ವಾಲ್ಮೀಕಿಯ ಸಂಬಂಧದಲ್ಲಿ ಅಡಿಗರು ಮುಂದೆ ಬಳಸಿರುವ ಭಾಷೆ ಕೂಡ ಕುಂಡಲಿನಿಯದೇ. ಹಾಗಿದ್ದೂ, ಒಂದರ ಮೂಲಕ ಇನ್ನೊಂದನ್ನು ಧ್ವನಿಸುವ ತಂತ್ರ ಬಳಸಿ, ರಾಮ ಅವತಾರ ಪುರುಷ ಎಂಬ ಕಲ್ಪನೆಯನ್ನು ಮೂಡಿಸುವ ಏಕಮಾತ್ರ ಉದ್ದೇಶದಿಂದ ಅವರು ಇಲ್ಲಿ ಅವತಾರಗಳ ಚಿತ್ರವನ್ನು ಎಳೆದು ತಂದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಯಾಕೆಂದರೆ ಇದು ಆಕರ್ಷಕ ಚಿತ್ರವೇನೋ ನಿಜ, ಆದರೆ ಇಲ್ಲಿ ಇದು ಸಮರ್ಪಕವಾದ ಚಿತ್ರವೇ ಅಲ್ಲ ಎಂಬುದು ನನ್ನ ಅಭಿಮತ. ಯಾಕೆಂದರೆ, ಮತ್ಸ್ಯಕೂರ್ಮವರಾಹ... ಊರ್ಧ್ವಮುಖಿ ವಿಕಾಸದ ಹಂತಗಳು ಎನ್ನುವಂತೆ ಅಡಿಗರು ಅವನ್ನು ಬಳಸಿದ್ದಾರೆ. ವಿಷ್ಣುವಿನ ಅವತಾರಗಳನ್ನು ನಾವು ಜೀವವಿಕಾಸದ ಅರ್ಥದಲ್ಲಾಗಲಿ, ಆತ್ಮವಿಕಾಸದ ಅರ್ಥದಲ್ಲಾಗಲಿ, ಡಾರ್ವಿನ್ನನ ವಿಕಾಸವಾದದ ಹಂತಗಳಂತೆ ಊರ್ಧ್ವಮುಖಿ ವಿಕಾಸದ ಹಂತಗಳು ಎಂದು ಭಾವಿಸಲು ಸಾಧ್ಯವಿಲ್ಲ. ಯಾಕೆಂದರೆ ಧರ್ಮಕ್ಕೆ ಚ್ಯುತಿ ಬಂದಾಗಲೆಲ್ಲಾ ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣೆಯ ಮೂಲಕ ಧರ್ಮವನ್ನು ರಕ್ಷಿಸುವ ಸಲುವಾಗಿ, ವಿಷ್ಣುವು ಬೇರೆಬೇರೆ ರೂಪಗಳಲ್ಲಿ ಧರೆಗೆ ಇಳಿದು ಬರುತ್ತಾನೆ ("ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥"– ಗೀತೆ, 4ರಲ್ಲಿ 7) ಎಂಬುದು ಅವತಾರಗಳ ಮೂಲ ಪರಿಕಲ್ಪನೆ. ಅವತಾರಗಳನ್ನು ಊರ್ಧ್ವಮುಖಿ ವಿಕಾಸದ ಹಂತಗಳು ಎಂದೇ ಭಾವಿಸುವುದಾದರೆ, ಕೃಷ್ಣ (8ನೆಯ ಅವತಾರ) ರಾಮನಿಗಿಂತ (7ನೆಯ ಅವತಾರ) ಹೆಚ್ಚು ವಿಕಾಸಗೊಂಡವನು, ಬುದ್ಧ (9ನೆಯ ಅವತಾರ) ಕೃಷ್ಣನಿಗಿಂತ ಹೆಚ್ಚು ವಿಕಾಸಗೊಂಡವನು ಎಂದು ನಾವು ಹೇಳಬೇಕಾಗುತ್ತದೆ. ಇದು ತಪ್ಪು ವಾದವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ತಾವು ವೈಜ್ಞಾನಿಕವಾಗಿ ಯೋಚಿಸುವವರು ಎಂಬ ಭ್ರಮೆಯಲ್ಲಿರುವ ಕೆಲವರು ಅಮೀಬದಿಂದ ಆರಂಭವಾಗಿ ಮನುಷ್ಯನಲ್ಲಿ ಕೊನೆಗೊಳ್ಳುವ ಡಾರ್ವಿನ್ನನ ವಿಕಾಸವಾದದ ಹಂತಗಳನ್ನು ವಿಷ್ಣುವಿನ ಅವತಾರಗಳಿಗೆ ಹೋಲಿಸುತ್ತಾರೆ, ಅಷ್ಟೆ. ಇಂತಹ ಎಡವಟ್ಟುಗಳ ಜಾಣ ಮಾತುಗಳಿಗೆ

ಮರುಳಾಗಿ ಅಡಿಗರು ಈ ಅವತಾರಗಳನ್ನು 'ಮೆಟ್ಟಿಲುಗಳು' ಎಂದು ಕರೆದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಆದರೆ, ಮನುಷ್ಯನಲ್ಲಿ ಪ್ರಾಣಿಯ ಅಂಶವಿರುತ್ತದೆ; ಆತ ಸ್ವಪ್ರಯತ್ನದಿಂದ, ಸಾಧನೆಯ ಮೂಲಕ, ತನ್ನಲ್ಲಿರುವ ಆ ಪ್ರಾಣಿ ಅಂಶವನ್ನು ಕಳೆದುಕೊಳ್ಳಬೇಕು ಎನ್ನುವಷ್ಟರ ಮಟ್ಟಿಗೆ ಮಾತ್ರ ಇದು ಸರಿ (ಈ ವಿಚಾರ ಅಡಿಗರ 'ವರ್ಧಮಾನ' ಕವನದಲ್ಲಿ ವ್ಯಕ್ತಗೊಂಡಿದೆ. ನೋಡಿ: "...ದೂರದ ಕಡಲ ತೆರೆ ಸೊಕ್ಕಿ ... ಅಂಶಾವತಾರ ಹೋರೆ.") ಆದ್ದರಿಂದಲೇ ಇರಬೇಕು, ಅಡಿಗರು ಇಲ್ಲಿ ವಿಷ್ಣುವಿನ ಪ್ರಾಣಿ ಅವತಾರಗಳನ್ನು ಮಾತ್ರ ಹೆಸರಿಸಿದ್ದಾರೆ, ಉಳಿದವನ್ನು ಹೆಸರಿಸಿಲ್ಲ.

ಕೌಸಲ್ಯೆ ದಶರಥರ ಪುತ್ರಕಾಮೇಷ್ಟಿ ಗೆರೆ
ಹಠಾತ್ತಾಗಿ ತಾಗಿರೆ ತ್ರಿಕಾಲ ಚಕ್ರ,
ಆಸ್ಫೋಟಿಸಿತ್ತು ಸಿಡಿತಲೆ; ಗರಿಷ್ಠ ತೇಜದ ಮೊನೆ
ಕೆಳಪಟ್ಟು ಮಣ್ಣುಟ್ಟು ನಿಂತ ಘಟನೆ:

ಕೌಸಲ್ಯೆ ಮತ್ತು ದಶರಥ ಪುತ್ರಕಾಮೇಷ್ಟಿ ಯಾಗ ಮಾಡುತ್ತಾರೆ. ತಮಗೆ ಮಕ್ಕಳು ಬೇಕು ಎಂಬ ಅವರ ಮನುಷ್ಯಸಹಜ ಬಯಕೆಗೆ ಹಠಾತ್ತಾಗಿ ತ್ರಿಕಾಲಕ್ಕೂ ಸಲ್ಲುವ ಏನೋ ಒಂದು ಅಂಶ ಬಂದು ಸೇರಿಕೊಳ್ಳುತ್ತದೆ. ಇದನ್ನು ಹೇಳಲು ಅಡಿಗರು ಜ್ಯಾಮಿತಿಯ ಚಿತ್ರವನ್ನು ಬಳಸುತ್ತಾರೆ. ಇಲ್ಲಿ ಸಂತಾನದ ಬಯಕೆ ಒಂದು ಸರಳರೇಖೆಯಾದರೆ, ತ್ರಿಕಾಲ ಚಕ್ರ ಒಂದು ವೃತ್ತ. ಸರಳರೇಖೆ ವೃತ್ತಕ್ಕೆ ಟ್ಯಾಂಜೆಂಟ್ ಆಗಿ ಸಾಗುತ್ತದೆ. ಸರಳರೇಖೆ ಕಾಲಬದ್ಧ, ಸಮಕಾಲೀನವಾದದ್ದು; ಆದರೆ, ಚಕ್ರ ಕಾಲಾತೀತವಾದದ್ದು, ವರ್ತಮಾನ, ಭೂತ, ಭವಿಷ್ಯತ್ ಮೂರಕ್ಕೂ ಸಲ್ಲುವಂತಹದು! ಅಂದರೆ, ಕಾಲಬದ್ಧಕ್ಕೆ ಕಾಲಾತೀತದ ಲೇಪವಾಗುತ್ತದೆ ಅಥವಾ ಸದ್ಯಕ್ಕೆ ಶಾಶ್ವತದ ಲೇಪವಾಗುತ್ತದೆ. ವೃತ್ತ ಸರಳರೇಖೆಯನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಲು ನಮ್ಮ ದಿನನಿತ್ಯದ ಜೀವನದ ಒಂದು ಉದಾಹರಣೆಯನ್ನು ಕೊಡುತ್ತೇನೆ:

ಚಾಕುವನ್ನು ಹರಿತ ಮಾಡುವ ಯಂತ್ರವನ್ನು ನಾವೆಲ್ಲರೂ ನೋಡಿರುತ್ತೇವೆ. ಇದರಲ್ಲಿ ಒಂದು ಲೋಹದ ಚಕ್ರವಿರುತ್ತದೆ. ಸಾಮಾನ್ಯವಾಗಿ ಈ ಚಕ್ರವನ್ನು ಸೈಕಲ್ಲಿನ ಒಂದು ಬದಿಗೋ ಅಥವಾ ಎತ್ತರದ ಸ್ಟೂಲಿನ ಒಂದು ಬದಿಗೋ ಲಂಬವಾಗಿ (vertically) ಜೋಡಿಸಿರುತ್ತಾರೆ. ಸೈಕಲ್ಲಿನಲ್ಲಾದರೆ, ಅದನ್ನು ಸ್ಟ್ಯಾಂಡ್ ಹಾಕಿ ನಿಲ್ಲಿಸಿದಾಗ ಅದರ ಚೈನನ್ನು ಪೆಡಲ್‌ಗೆ ತಳುಕು ಹಾಕುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಸ್ಟೂಲಿನಲ್ಲಾದರೆ, ಚಕ್ರಕ್ಕೇ ಒಂದು ಪೆಡಲ್ ಜೋಡಿಸಿರುತ್ತಾರೆ. ಈ ಎರಡರಲ್ಲಿಯೂ, ಪೆಡಲನ್ನು ತುಳಿದಾಗ ಚಕ್ರ ಸುತ್ತತೊಡಗುತ್ತದೆ. ಈ ಸುತ್ತುತ್ತಿರುವ ಚಕ್ರದ ಮೇಲ್ಭಾಗಕ್ಕೆ ಚಾಕುವಿನ ಅಲಗನ್ನು ಒತ್ತಿ ಹಿಡಿದರೆ, ಲೋಹದ ಈ ಚಕ್ರ ಅದನ್ನು ಮಸೆದು ಹರಿತಗೊಳಿಸುತ್ತದೆ. ಸುತ್ತುತ್ತಿರುವ ಚಕ್ರ ಚಾಕುವನ್ನು ಪ್ರಭಾವಿಸುವ ಹಾಗೆ ತ್ರಿಕಾಲ ಚಕ್ರ ಸಂತಾನದ ಬಯಕೆಯನ್ನು ಪ್ರಭಾವಿಸುತ್ತದೆ.

ಇಲ್ಲಿ ಅಡಿಗರ ಎರಡು ಆಳವಾದ ನಂಬಿಕೆಗಳು ಕೆಲಸ ಮಾಡುತ್ತಿವೆ: (ಅ) ಒಂದು ಕೃತಿ ಸಫಲವಾಗಬೇಕಾದರೆ ಅದು ತ್ರಿಕಾಲಕ್ಕೂ ಸಲ್ಲುವಂತಿರಬೇಕು ಮತ್ತು (ಆ) ಒಂದು ಸಫಲ ಕೃತಿಯ ರಚನೆಯ ಕಾಲದಲ್ಲಿ ಹಠಾತ್ತಾಗಿ ಎಲ್ಲಿಂದಲೋ ಅಜ್ಞಾತ ಅಂಶವೊಂದು ಬಂದು ಆ ಕೃತಿಯಲ್ಲಿ ಸೇರಿಕೊಂಡಿರುತ್ತದೆ. ಅಡಿಗರ ಶಬ್ದಗಳಲ್ಲೇ ಅದನ್ನು ಕೇಳೋಣ:

● ಅಡಿಗರ ಒಂದು ಸಂದರ್ಶನದಲ್ಲಿ, ಯು.ಆರ್. ಅನಂತಮೂರ್ತಿಯವರ ಪ್ರಶ್ನೆ : "...ನಿಮ್ಮ ಕಾವ್ಯದಲ್ಲಿ ಒಂದು ಅಜ್ಞಾತವಾದದ್ದೂ ಬಂದು ಸೇರಿಕೊಳ್ಳುತ್ತದೆ. ಇದರಿಂದ ನಮಗೆ ಆಶ್ಚರ್ಯವಾಗುತ್ತದೆ."

ಅಡಿಗರ ಉತ್ತರ: "ನನಗೇ ಆಶ್ಚರ್ಯವಾಗುತ್ತಪ್ಪಾ ಅದು! ಎಷ್ಟೋ ಸಲ ಇದ್ದಕ್ಕಿದ್ದ ಹಾಗೆ ಒಂದೆರಡು ಸಾಲುಗಳು ಬಂದಾಗ, ಎಲ್ಲಿಂದ ಬಂದವು ಇವು ಅಂತ ಗೊತ್ತಾಗೋದಿಲ್ಲ. ಈ ಅಜ್ಞಾತ ಅನ್ನೋದು ಇದೆಯಲ್ಲ, ಅದು ಎಲ್ಲಿ ಬರುವುದಿಲ್ಲವೋ ಅಲ್ಲಿ ಕವನ ಅಷ್ಟು ಸಫಲವೂ ಆಗೋದಿಲ್ಲ." (ನೋಡಿ: "ಗೋಪಾಲಕೃಷ್ಣ ಅಡಿಗ – ಸಂದರ್ಶನ," ಯು.ಆರ್. ಅನಂತಮೂರ್ತಿಯವರ 'ಬೆತ್ತಲೆಪೂಜೆ ಯಾಕೆ ಕೂಡದು'ಎಂಬ ಲೇಖನ ಸಂಗ್ರಹ)

"ಒಂದು ಕಲೆ ಅಥವಾ ಕವನ ಸಫಲವಾಗುವುದು ಅದರಲ್ಲಿ ಕಲೆಗಾರ ಕಾಲವನ್ನು ತಡೆಹಿಡಿದು ನಿಲ್ಲಿಸಿದಾಗ. ಹೀಗೆ ನಿಲ್ಲಿಸುವುದು ಸಾಧ್ಯವಾಗುವುದು ಭೂತ ಭವಿಷ್ಯತ್ತು ವರ್ತಮಾನಗಳನ್ನು ಒಂದೇ ಬಿಂದುವಿನಲ್ಲಿ ತಂದು ಕೇಂದ್ರೀಕರಿಸಿದಾಗ. ಇಂಥ ಕವನಗಳು ತೀರ ಅಪೂರ್ವವಾದಂಥವುಗಳು... ಇಂದಿನ ಒಂದು ಕವನ ಒಂದು ಶತಮಾನದ ಮೇಲೆಯೂ ಸಂತೋಷಕೊಟ್ಟು ಜುಮ್ಮುದಟ್ಟಿಸುವುದು ಸಾಧ್ಯವಾದರೆ, ಒಂದು ಶತಮಾನದ ಹಿಂದೆ ಇದ್ದ ಕಾವ್ಯಪ್ರಿಯನೊಬ್ಬ (ಈಗ) ಎದ್ದು ಬಂದು ಇದನ್ನು ಓದಿ ಮೆಚ್ಚುವುದು ಸಾಧ್ಯವಾದರೆ, ಆಗ ಮಾತ್ರ ಕೃತಿ ಕೃತಾರ್ಥ." (ನೋಡಿ: "ಸಮಗ್ರಕಾವ್ಯ"ಕ್ಕೆ ಅಡಿಗರ ಸ್ವಂತದ ಮುನ್ನುಡಿ.)

"...ಸಾರ್ವಕಾಲಿಕವಾದದ್ದರ ಮತ್ತು ಆದ್ಯತನವಾದುದರ ಒಂದು ಹಠಾತ್ ಸಂಯೋಗ ಸಾಮರಸ್ಯಗಳಿಂದ ಮಾತ್ರ ಉತ್ತಮ ಕಾವ್ಯ ಹುಟ್ಟುತ್ತದೆ ಎನ್ನಬಹುದು." (ನೋಡಿ: "ಬತ್ತಲಾರದ ಗಂಗೆ" ಸಂಕಲನಕ್ಕೆ ಅಡಿಗರ ಸ್ವಂತದ ಮುನ್ನುಡಿ.)

ಮೇಲೆ ಉದ್ಧರಿಸಿದ ಹೇಳಿಕೆಗಳು ಕೆಲವು ಉದಾಹರಣೆಗಳು ಮಾತ್ರ. ಇಂತಹ ಹೇಳಿಕೆಗಳು ಕಾವ್ಯಸೃಷ್ಟಿ ಕುರಿತ ಅಡಿಗರ ಬರಹಗಳಲ್ಲಿ (ವಿಶೇಷವಾಗಿ ಅವರ ಮುನ್ನುಡಿಗಳಲ್ಲಿ) ಮತ್ತೆಮತ್ತೆ ಬರುತ್ತವೆ.

ಈ ಎಲ್ಲ ಹೇಳಿಕೆಗಳಲ್ಲೂ ಅಡಿಗರು 'ಹಠಾತ್ತಾಗಿ', 'ಇದ್ದಕ್ಕಿದ್ದ ಹಾಗೆ' ಅಥವಾ 'ಅಜ್ಞಾತ' ಎಂಬ ಶಬ್ದಗಳನ್ನು ಬಳಸುವುದನ್ನು ಮತ್ತು 'ಭೂತ ಭವಿಷ್ಯತ್ತು ವರ್ತಮಾನಗಳನ್ನು ಒಂದೇ ಬಿಂದುವಿನಲ್ಲಿ ತಂದು ಕೇಂದ್ರೀಕರಿಸುವ ಬಗ್ಗೆ' (ಅಂದರೆ, ತ್ರಿಕಾಲ ಚಕ್ರದ ಬಗ್ಗೆ) ಮಾತಾಡುವುದನ್ನು ನಾವು ವಿಶೇಷವಾಗಿ ಗಮನಿಸಬೇಕು.

ಈ ಹೇಳಿಕೆಗಳ ಬೆಳಕಲ್ಲಿ "ಹಠಾತ್ತಾಗಿ ತಾಗಿರೆ ತ್ರಿಕಾಲ ಚಕ್ರ" ಎಂಬ ಸಾಲನ್ನು ಪುನಃ ನೋಡೋಣ:

ರಾಮ ಅವತಾರಪುರುಷ. ಆದ್ದರಿಂದ, ಅದು ಪೂರ್ವನಿರ್ಧಾರಿತವೋ ಅನ್ನುವಂತೆ, ಆತ ಹುಟ್ಟುವ ಮೊದಲೇ (ಅಂದರೆ, ಯಾಗದ ಹೊತ್ತಿನಲ್ಲೇ) ಆತನಲ್ಲಿ ತ್ರಿಕಾಲಕ್ಕೂ ಸಲ್ಲುವ ಯಾವುದೋ ಶ್ರೇಷ್ಠತೆಯ ಅಂಶ ಬಂದು ಸೇರಿಕೊಂಡಿರುತ್ತದೆ, ಆತ ಪುರುಷೋತ್ತಮನಾಗುತ್ತಾನೆ. ಇದು ಇಲ್ಲಿ ಸಹಜವಾಗಿ ಲಭ್ಯವಾಗುವ ಸರಳ ನೇರ ಅರ್ಥ ಅಥವಾ ಮೇಲುನೋಟಕ್ಕೆ ಕಂಡುಬರುವ ಅರ್ಥ.

ಆದರೆ, ಇದಕ್ಕಿಂತ ಮುಖ್ಯವಾದ, ಅಡಿಗ–ವಿಶಿಷ್ಟವಾದ ಇನ್ನೊಂದು ಅರ್ಥವಿದೆ: ನಮಗೆ ಇತಿಹಾಸದ ದಶರಥ–ಕೌಶಲ್ಯೆ ಅಥವಾ ರಾಮ ಗೊತ್ತಿಲ್ಲ. ನಮಗೆ ಗೊತ್ತಿರುವುದು

ವಾಲ್ಮೀಕಿಯ 'ಕೈ ಕಡೆದ ನೋಟ' ಮಾತ್ರ! ಅಂದರೆ, ಕವಿ ವಾಲ್ಮೀಕಿ ರಾಮಾಯಣದ ರಚನೆಯನ್ನು ಆರಂಭಿಸಿದ್ದಾನೆ, ಪುತ್ರಕಾಮೇಷ್ಟಿ ಯಾಗದ ಬಗ್ಗೆಯೂ ಬರೆದಿದ್ದಾನೆ. ಅಷ್ಟು ಹೊತ್ತಿಗೆ ತ್ರಿಕಾಲಕ್ಕೂ ಸಲ್ಲುವ ಅಪೂರ್ವವಾದ ಏನೋ ಒಂದು ಹಠಾತ್ತಾಗಿ ಬಂದು ಕೃತಿರಚನೆಯಲ್ಲಿ ಸೇರಿಕೊಳ್ಳುತ್ತದೆ. ಈ ಅಜ್ಞಾತವಸ್ತುವೇ ರಾಮಾಯಣಕ್ಕೆ ಅನನ್ಯತೆಯನ್ನು ತಂದುಕೊಡುತ್ತದೆ.

ಅಂದರೆ, ಮೇಲಿನ ಸಾಲು ಕೃತಿಯೊಂದರ ಶ್ರೇಷ್ಠತೆಯ ಗೂಢದ ಮೇಲೆ ಬೆಳಕು ಚೆಲ್ಲುತ್ತದೆ ಮತ್ತು ಒಂದು ಶ್ರೇಷ್ಠ ಕೃತಿಯನ್ನು ರಚಿಸುವುದಕ್ಕೆ ಕೃತಿಕಾರನ ಜ್ಞಾನ ಮತ್ತು ಪರಿಶ್ರಮವಷ್ಟೇ ಸಾಲದು, ಅದಕ್ಕೆ ವಿವರಣೆಗೆ ಸಿಗದ ಅಜ್ಞಾತಶಕ್ತಿಯ ನೆರವೂ ಬೇಕು ಎಂಬ ಸತ್ಯದ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಸೃಷ್ಟಿಯ ಗಳಿಗೆಗಳನ್ನು ಎಚ್ಚರವಿಟ್ಟು ಅಧ್ಯಯನ ಮಾಡಿದ ಕವಿ ಮಾತ್ರ ಈ ಮಾತನ್ನು ಹೇಳುವುದು ಸಾಧ್ಯ. ಒಂದು ರೀತಿಯಲ್ಲಿ, ಒಬ್ಬ ಕವಿ (ಇಲ್ಲಿ ಆತ ಅಡಿಗ) ತನ್ನ ಅನುಭವದ ಬೆಳಕಲ್ಲಿ ಮತ್ತೊಬ್ಬ ಕವಿಯನ್ನು (ಆತ ಆದಿಕವಿ ಎಂಬ ಖ್ಯಾತಿಯ ಭಾರತದ ಮೊಟ್ಟ ಮೊದಲ ಕವಿ ವಾಲ್ಮೀಕಿ, ಮಹಾಕವಿ!!) ಅರ್ಥಮಾಡಿಕೊಳ್ಳುವ ಪರಿ ಇದು ಎಂದು ಹೇಳಬಹುದು.

(ಸಾಹಿತ್ಯಸೃಷ್ಟಿ ಅಥವಾ ಕಲಾಸೃಷ್ಟಿಯ ಹೊತ್ತಿನಲ್ಲಿ ಹಠಾತ್ತನೆಎಲ್ಲಿಂದಲೋ ಅಜ್ಞಾತಅಂಶ ಬಂದು ಸೇರಿಕೊಳ್ಳುವ ಈ ಸೋಜಿಗದಿಂದ ಪ್ರೇರಿತರಾಗಿಯೇ ಯು. ಆರ್. ಅನಂತಮೂರ್ತಿಯವರು ತಮ್ಮ ಕೃತಿಗಳ ಬಗ್ಗೆ ಮಾತಾಡುವಾಗ "ಇದು ನನ್ನದು, ಇದು ನನ್ನದಲ್ಲ" ಎಂಬ ಮಾತನ್ನು ಬಳಸುತ್ತಾರೆ.)

ರಾಕೆಟ್‌ನಲ್ಲಿ ಘನರೂಪದ ಅಥವಾ ದ್ರವರೂಪದ ಇಂಧನವನ್ನು, ಜೊತೆಗೆ ಅದನ್ನು ಉರಿಸಲು ದ್ರವರೂಪೀ ಆಕ್ಸಿಜೆನ್ನನ್ನು ಬಳಸಲಾಗುತ್ತದೆ. ಕಂಬಶ್ಚನ್ ಚೇಂಬರ್‌ನಲ್ಲಿ ಅತ್ಯಧಿಕ ಉಷ್ಣತೆಯಲ್ಲಿ (ಸುಮಾರು 32000 ಸೆಂ. ಅಥವಾ 58000 ಫ್ಯಾ)[6] ಆಕ್ಸಿಜೆನ್ ಸಹಾಯದಿಂದ ಇಂಧನವನ್ನು ಉರಿಸಿದಾಗ ವಿಪರೀತ ಗ್ಯಾಸು ಉತ್ಪತ್ತಿಯಾಗುತ್ತದೆ. ಅತ್ಯಧಿಕ ಉಷ್ಣತೆಯ ಕಾರಣ ಆ ಗ್ಯಾಸು ಅತ್ಯಧಿಕ ಒತ್ತಡದಲ್ಲಿರುತ್ತದೆ. ಹೀಗೆ ಅತ್ಯಧಿಕ ಒತ್ತಡದಲ್ಲಿರುವ ಅತ್ಯಧಿಕ ಉಷ್ಣತೆಯ ಗ್ಯಾಸನ್ನು ರಾಕೆಟ್‌ನ ಕೆಳತುದಿಯಲ್ಲಿರುವ ಒಂದು ಸಂಕೀರ್ಣವಾದ ನಾಝಲ್ (nozzle) ಮೂಲಕ ಹೊರತಳ್ಳಿ ಒತ್ತಡವನ್ನು ಇನ್ನಷ್ಟು ಹೆಚ್ಚಿಸಲಾಗುತ್ತದೆ. ಹೀಗೆ ಹೊರಬರುವ ಅತ್ಯಧಿಕ ಉಷ್ಣತೆಯ ಗ್ಯಾಸು ಬೆಳಕೇ ಘನಗೊಂಡು ಹೊರಹೊಮ್ಮುತ್ತಿರುವಂತಹ ಭಾಸ ಹುಟ್ಟಿಸುತ್ತದೆ. ಇದು ನಾಝಲ್‌ನಿಂದ ಹೊರಹೊಮ್ಮುವಾಗ ಮೊನಚಾಗಿದ್ದು ನಂತರ ಸುರುಳಿಸುರುಳಿಯಾಗಿ ಅಚ್ಚ ಬಿಳಿ ಬೆಳಕಿನ ಮೋಡದಂತೆ ಬಿಚ್ಚಿಕೊಳ್ಳುತ್ತದೆ. ಅಡಿಗರು ಇಲ್ಲಿನ ನಾಝಲನ್ನು ಸಿಡಿತಲೆ ಎಂದು ಕರೆದರೆ, ಘನಗೊಂಡ ಬೆಳಕಿನಂತೆ ಹೊರಹೊಮ್ಮುವ ಗ್ಯಾಸನ್ನು ಗರಿಷ್ಠ ತೇಜದ ಮೊನೆ ಎಂದು ಕರೆಯುತ್ತಾರೆ.

ರಾಕೆಟ್‌ನ ಚಲನೆಯು ನ್ಯೂಟನ್‌ನ ಮೂರನೆಯ ತತ್ವವಾದ "ಪ್ರತಿಯೊಂದು ಕ್ರಿಯೆಗೂ ಅದಕ್ಕೆ ಸಮನಾದ ಮತ್ತು ವಿರುದ್ಧವಾದ ಪ್ರತಿಕ್ರಿಯೆ ಇರುತ್ತದೆ" ಎಂಬುದನ್ನು ಆಧರಿಸಿದೆ. ಗ್ಯಾಸನ್ನು ಎಷ್ಟು ವೇಗವಾಗಿ ಕೆಳಮುಖವಾಗಿ ತಳ್ಳಲಾಗುತ್ತದೆಯೋ (ಕ್ರಿಯೆ) ಅಷ್ಟೇ ವೇಗವಾಗಿ ಅದು ರಾಕೆಟ್ಟನ್ನು ಮೇಲ್ಮುಖವಾಗಿ ತಳ್ಳುತ್ತದೆ (ಪ್ರತಿಕ್ರಿಯೆ). ಜೆಟ್ ವಿಮಾನದ ಚಲನೆ ಕೂಡ ಈ ಮೂರನೇ ತತ್ವವನ್ನು ಆಧರಿಸಿದೆ. ಜೆಟ್‌ಗೂ ರಾಕೆಟ್‌ಗೂ ಇರುವ ವ್ಯತ್ಯಾಸವೆಂದರೆ, ಜೆಟ್ ವಾಯುಮಂಡಲದಲ್ಲೇ ಹಾರಾಡುವುದರಿಂದ

ಅದು ಇಂಧನವನ್ನು ಉರಿಸಲು ಗಾಳಿಯಲ್ಲಿರುವ ಆಕ್ಸಿಜೆನ್ನನ್ನು ಬಳಸುತ್ತದೆ; ಆದರೆ, ರಾಕೆಟ್ ವಾಯುಮಂಡಲವನ್ನು ದಾಟಿ ಆಕ್ಸಿಜೆನ್ ಲಭ್ಯವಿಲ್ಲದ ನಿರ್ವಾತ ಪ್ರದೇಶಕ್ಕೆ ಹೋಗುವುದರಿಂದ, ಅದು ತನ್ನ ಇಂಧನವನ್ನು ಉರಿಸಲು ಬೇಕಾದ ಆಕ್ಸಿಜೆನ್ನನ್ನು ತಾನೇ ಜೊತೆಯಲ್ಲಿ ಕೊಂಡೊಯ್ಯುತ್ತದೆ.

ಸಂಸ್ಕೃತದಲ್ಲಿ 'ಅವತಾರ' ಎಂದರೆ ಇಳಿದುಬರುವುದು ಎಂದರ್ಥ. ದೇವರ ಅವತಾರಕ್ಕೆ ಸಂಬಂಧಿಸಿದಂತೆ ಅದು 'ಆಕಾಶದಿಂದ ದೇವರು ಇಳಿದು ಬರುವುದು' ಎಂಬ ಅರ್ಥ ಪಡೆಯುತ್ತದೆ. ಅಡಿಗರು ಇಲ್ಲಿ ರಾಮನ ಅವತಾರವನ್ನು ಆಕಾಶದಿಂದ ಧರೆಗೆ ಇಳಿದು ಬಂದು ಮನುಷ್ಯರೂಪ ತಾಳುವ ದಿವ್ಯಪ್ರಭೆ ಎಂದು ಬಣ್ಣಿಸಿ, ಅವತಾರ ಎಂಬ ಶಬ್ದವನ್ನು ಬಳಸದೆಯೆ, ಅದರ ಅರ್ಥ ಮೂಡಿಬರುವಂತೆ, ಅದನ್ನು ಒಂದು ದೃಶ್ಯ ಅನುಭವವಾಗಿ ಚಿತ್ರಿಸಿದ್ದಾರೆ. 'ಮಣ್ಣುಟ್ಟು' ಅಂದರೆ ಮನುಷ್ಯರೂಪ ತಾಳಿ ಎಂದರ್ಥ (ಮನುಷ್ಯ ದೇಹ ಮಣ್ಣಿನಿಂದ ರಚಿತವಾದದ್ದು ಎಂಬ ಕಲ್ಪನೆಯಿದೆ). ದೇವರನ್ನು ಬೆಳಕಿನ ರೂಪದಲ್ಲಿ ಚಿತ್ರಿಸುವ ಬಗ್ಗೆ ಮುಂದಿನ ಪದ್ಯದ ಸಂದರ್ಭದಲ್ಲಿ ವಿವರವಾಗಿ ಹೇಳುತ್ತೇನೆ.

ಅಡಿಗರು ಈ ಕವನದಲ್ಲಿ ರಾಕೆಟ್‌ನ ಚಿತ್ರವನ್ನು ಬಳಸಿರುವ ರೀತಿ ಆಶ್ಚರ್ಯಕರವಾದದ್ದು. ಈ ಹಿಂದೆ, ಆಕಾಶಯಾನದ ಸಂದರ್ಭದಲ್ಲಿ ರಾಕೆಟ್ಟನ್ನು ಆಧುನಿಕ ವಿಕಾರ ಎಂದು ಕರೆದು ಅದನ್ನು ನಕಾರಾತ್ಮಕ ಅರ್ಥದಲ್ಲಿಬಳಸಿದ್ದರು. ಇಲ್ಲಿ, ಪುತ್ರಕಾಮೇಷ್ಟಿಯಾಗ ಹಾಗೂ ತ್ರಿಕಾಲ ಚಕ್ರದ ಸ್ಪರ್ಶಕ್ಕೆ ಉತ್ತರವಾಗಿ, ದಿವ್ಯಪ್ರಭೆಯೊಂದು ಭೂಮಿಗೆ ಇಳಿದು ಬಂದು ಶ್ರೀರಾಮನ ರೂಪದಲ್ಲಿ ಜನ್ಮತಾಳಿತು ಎಂದು ಹೇಳುವುದಕ್ಕೆ, ರಾಕೆಟ್ಟನ್ನು ಸಕಾರಾತ್ಮಕ ಅರ್ಥದಲ್ಲಿ ಬಳಸಿದ್ದಾರೆ. ಅಂದರೆ, ಒಂದೇ ಕವನದ ಎರಡು ಬೇರೆಬೇರೆ ಸಂದರ್ಭಗಳಲ್ಲಿ, ವಿರುದ್ಧಾರ್ಥದ ಎರಡು ಬೇರೆಬೇರೆ ಸಂಗತಿಗಳನ್ನು ಹೇಳಲು, ರಾಕೆಟ್ಟನ್ನು ಎರಡು ವಿಭಿನ್ನ ದೃಷ್ಟಿಕೋನಗಳಿಂದ ಬಳಸಿದ್ದಾರೆ.

ಇಲ್ಲಿನ 'ಕೆಳಪಟ್ಟು' ಎಂಬ ಪ್ರಯೋಗದ ಬಗ್ಗೆ ಟಿಪ್ಪಣಿ ಮಾಡುತ್ತಾ ಯು.ಆರ್. ಅನಂತಮೂರ್ತಿಯವರು ಹೀಗೆ ಹೇಳುತ್ತಾರೆ: "...'ಕೆಳಪಟ್ಟು' ಶಬ್ದ ನನ್ನನ್ನು ಕೊಕ್ಕೆಯಾಗಿ ಹಿಡಿಯುತ್ತದೆ. ಮೇಲ್ಪಟ್ಟು ಎಂಬ ಪದ ಕೇಳಿದ್ದೇವೆ; ಆದರೆ ಕೆಳಪಟ್ಟು ಎಂಬುದನ್ನು ಕೇಳಿಲ್ಲ. 'ಕೆಳಪಟ್ಟು ಮಣ್ಣುಟ್ಟು ನಿಂತ ಘಟನೆ' – ಇದರಲ್ಲಿರುವ ವಕ್ರತೆ ನನ್ನನ್ನು ಆಕರ್ಷಿಸುತ್ತದೆ."(ನೋಡಿ: 'ಪದ್ಯ ಬಗೆವ ಬಗೆ', ಪೂರ್ವಾಪರ ಸಂಕಲನ, ಯು.ಆರ್. ಅನಂತಮೂರ್ತಿ) ಇಲ್ಲಿನ ಕೆಳಪಟ್ಟು ಎಂಬ ಪ್ರಯೋಗ ಹೊಸತು ಎಂಬುದೇನೋ ನಿಜ. ಆದರೆ ಅಡಿಗರಿಗಿಂತ ಮೊದಲೇ ಬೇಂದ್ರೆಯವರು ಇಂತಹ ಪ್ರಯೋಗಗಳನ್ನು ಮಾಡಿದ್ದರು ಎನ್ನುವುದನ್ನು ನಾವು ಮರೆಯಬಾರದು. ಉದಾಹರಣೆಗೆ, ಬೇಂದ್ರೆಯವರ 'ಕನಸಿನೊಳಗೊಂದು ಕಣಸು' ಕವನದ ಈ ಸಾಲುಗಳನ್ನು ನೋಡೋಣ:

"ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ."

"ಮುಂಜರಿವ ಹುರುಪಿನೊಡೆ ಮುಂದೆ ಬಾರಯ್ಯ."

ಹಿಂಜರಿಯುವುದು ಎಲ್ಲರಿಗೂ ಗೊತ್ತಿರುವ ಪ್ರಯೋಗ. ಆದರೆ, ಮುಂಜರಿಯುವುದು ಎಂಬುದು ಈ ಸಂದರ್ಭಕ್ಕಾಗಿಯೇ ಬೇಂದ್ರೆಯವರು ಹುಟ್ಟು ಹಾಕಿದ ವಿಶೇಷ ಪ್ರಯೋಗ. ಅಡಿಗರಿಗೆ ಇದು ಗೊತ್ತಿತ್ತು. ಯಾಕೆಂದರೆ, ಇದೇ ಕವನದ "ಯಾರು ನಿಂದವರಲ್ಲಿ ? ತಾಯೆ?" ಎಂದೆ, ಇತ್ಯಾದಿ ಸಾಲುಗಳನ್ನು ಅಡಿಗರು ತಮ್ಮ

ಪ್ರಸಿದ್ಧ ಭೂಮಿಗೀತಎಂಬ ಕವನದಲ್ಲಿ ಉದ್ಧರಿಸಿದ್ದಾರೆ.

ಬೆಳ್ಳಂಬೆಳಕಿನಲ್ಲಿ ಬಿಳಿಹಾಯಿಗಳ ಪರದಾಟ,
ಹಾಲ್ಗಡಲ ಬಗೆದೊಲೆವ ರಾಜಹಂಸ;
ಅಂತರಂಗದ ಸುರಳಿ ಬಿಚ್ಚಿ ಸರ್ಚ್‌ಲೈಟಲ್ಲಿ
ಹೆದ್ದಾರಿ ಹಾಸಿದ್ದ ರಾಮಚರಿತ.

ಕುಂಡಲಿನಿಯ ಬಗ್ಗೆ ಗೊತ್ತಿರುವ ಯಾರೂ ಈ ಚಿತ್ರವನ್ನು ಥಟ್ಟನೆ ಗುರುತಿಸಬಲ್ಲರು. ಇದು ಜ್ಞಾನೋದಯದ ಚಿತ್ರ. ಹಿಂದೆ ನಾವು ಕಂಡ ಮೂಲಾಧಾರದಲ್ಲಿನ ಕಿಡಿ ಈಗ ಸಹಸ್ರಾರವನ್ನು ತಲುಪಿದೆ. ಆದ್ದರಿಂದ ಈ ಚಿತ್ರ ಬಂದಿದೆ.

ಮನುಷ್ಯನ ನೆತ್ತಿಯಲ್ಲಿರುವ ಸಹಸ್ರಾರದಲ್ಲಿ ಕ್ಷೀರಸಾಗರವಿದೆ, ಅದರಲ್ಲಿ ಪರಮಶಿವ ರಾಜಹಂಸದ ಮೇಲೆ ಕುಳಿತುಕೊಂಡು ವಿಹರಿಸುತ್ತಿರುತ್ತಾನೆ ಎಂಬುದು ಸಹಸ್ರಾರದ ವರ್ಣನೆ. ಜಾಗೃತಗೊಂಡ ಕುಂಡಲಿನಿ ಶಕ್ತಿಯು ತಪಸ್ವಿಯ ಧ್ಯಾನಸ್ಥ ಸ್ಥಿತಿಯಲ್ಲಿ ಷಟ್ಚಕ್ರಗಳನ್ನು ಹಾಯ್ದು ಸಹಸ್ರಾರವನ್ನು ತಲುಪಿ ಅಲ್ಲಿ ಶಿವನನ್ನು ಕೂಡಿಕೊಳ್ಳುತ್ತದೆ, ಆಗ ವ್ಯಕ್ತಿ–ವಿಶಿಷ್ಟವಾದ ಜೀವಾತ್ಮ ಅಥವಾ ಹಂಸ (ಅಥವಾ ಅಂಚೆ) ವಿಶ್ವಚೈತನ್ಯ ಸ್ವರೂಪಿಯಾದ ಪರಮಾತ್ಮನನ್ನು ಅಥವಾ ರಾಜಹಂಸವನ್ನು (ಅಥವಾ ಅರಸಂಚೆಯನ್ನು) ಕೂಡಿಕೊಳ್ಳುತ್ತದೆ, ಜ್ಞಾನೋದಯವಾಗುತ್ತದೆ ಎಂದು ಹೇಳಲಾಗುತ್ತದೆ. ಕುಂಡಲಿನಿಯ ಭಾಷೆಯಲ್ಲಿ ಜ್ಞಾನೋದಯವನ್ನು "ಅಮೃತವರ್ಷಾ" ಎಂದು ಕರೆಯುತ್ತಾರೆ.

ಟಿಪ್ಪಣಿ : 5

ಅಡಿಗರು ಇಲ್ಲಿ ರಾಕೆಟ್‌ನ ಚಿತ್ರಗಳನ್ನು ಬಳಸುವುದಕ್ಕೆ ಒಂದು ನಿರ್ದಿಷ್ಟ ಕಾರಣವಿದೆ. ಅವರು ಈ ಕವನವನ್ನು ಬರೆದದ್ದು ಮಾರ್ಚ್ 1968ರಲ್ಲಿ. ಅದೇ ಕೆಲವು ವರ್ಷಗಳ ಮೊದಲು, ಅಂದರೆ 1959ರಲ್ಲಿ, ರಷ್ಯಾದ ರಾಕೆಟ್ ಚಂದ್ರನನ್ನು ತಲುಪಿತ್ತು. 12 ಏಪ್ರಿಲ್ 1961ರಂದು, ರಷ್ಯಾದ ಯೂರಿ ಗಗಾರಿನ್ ಭೂಮಿಯ ಕಕ್ಷೆಯನ್ನು ಸುತ್ತಿ ಬಾಹ್ಯಾಕಾಶವನ್ನು (outer space) ತಲುಪಿದ್ದರು. (ಅವರಿಗಿಂತ ಮುಂಚೆ ಪ್ರಯೋಗಕ್ಕಾಗಿ ಒಂದು ನಾಯಿಯನ್ನು ಹಾಗೆ ಕಳಿಸಲಾಗಿತ್ತು). 1962ರಲ್ಲಿ ಅಮೆರಿಕದ ರಾಕೆಟ್ ಚಂದ್ರನನ್ನು ತಲುಪಿತ್ತು. ಈ ಸಾಧನೆಗಳು ಜಗತ್ತಿನಾದ್ಯಂತ ಆಸಕ್ತಿಯನ್ನು ಕೆರಳಿಸಿದ್ದವು. ಅಡಿಗರು ತಮ್ಮ ಸಮಕಾಲೀನ ವೈಜ್ಞಾನಿಕ ಸಾಧನೆಯ ಒಂದು ಘಟನೆಯನ್ನು ಇಲ್ಲಿ ತಮ್ಮ ಕವನದ ಉದ್ದೇಶಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. (ಅಡಿಗರು ಈ ಕವನವನ್ನು ಬರೆದ ಸುಮಾರು ಒಂದು ವರ್ಷದ ನಂತರ, 20 ಜುಲೈ 1969ರಂದು ಅಮೆರಿಕದ ನೀಲ್ ಆರ್ಮ್‌ಸ್ಟ್ರಾಂಗ್‌ರವರ ಸ್ಪೇಸ್‌ಕ್ರಾಫ್ಟ್ ಚಂದ್ರನನ್ನು ತಲುಪಿತು; ಅದರ ಆರು ಗಂಟೆಗಳ ನಂತರ, ಜುಲೈ 21ರಂದು, ಅವರು ಚಂದ್ರನ ಮೇಲೆ ಓಡಾಡಿದರು.)

ಟಿಪ್ಪಣಿ : 6

ಹೋಲಿಸಿ : (1) ನೀರು ಕುದಿಯುವ ಉಷ್ಣತೆ : 100^0ಸೆಂ. ಅಥವಾ 212^0ಫ್ಯಾ.
(2) ಪ್ರೆಶರ್ ಕುಕರ್ ಕುದಿಯುವ ಉಷ್ಣತೆ : 121^0 ಸೆಂ. ಅಥವಾ 250^0ಫ್ಯಾ.

(ಮುಂದುವರಿಯುವುದು....)

❖❖❖

ಕನ್ನಡ ಸಂಶೋಧಕರಿಗೆ ಸವಾಲೊಡ್ಡುವ ಬಸವರಾಜಕಾರಣ

ಡಾ. ಅಜಕ್ಕಳ ಗಿರೀಶ ಭಟ್
ಪ್ರಾಧ್ಯಾಪಕ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ, ದ.ಕ.– 574327

ಸಾಹಿತ್ಯ ಹಾಗೂ ಸಮಾಜವಿಜ್ಞಾನ ವಿಷಯಗಳಿಗೆ ಸಂಬಂದಿಸಿದಂತೆ ಕನ್ನಡ ಭಾಷೆಯಲ್ಲಿ ನಡೆಯುತ್ತಿರುವ ಸಂಶೋಧನೆಯ ಸ್ವರೂಪದ ಬಗ್ಗೆ ಈಚೆಗೆ ವಿಮರ್ಶೆ ನಡೆಯುತ್ತಿದೆ. ಸುಮರು ಒಂದು ವರ್ಷದ ಹಿಂದೆ ಬಂದ ನಿತ್ಯಾನಂದ ಶೆಟ್ಟಿಯವರ 'ಮಾರ್ಗಾನ್ವೇಷಣ' ಎಂಬ ಕೃತಿ ಸಾಹಿತ್ಯ ವಿಭಾಗಗಳಲ್ಲಿ ನಡೆಯುವ ಸಂಶೋಧನೆಯ ಬಗ್ಗೆ ಸಾಕಷ್ಟು ಕಟುವಾದ ಟೀಕೆಯನ್ನು ಒಳಗೊಂಡಿದೆ. ಇತ್ತೀಚೆಗೆ ಪ್ರವೀಣ ಟಿ.ಎಲ್. ಮತ್ತು ಜೆ.ಎಸ್. ಸದಾನಂದ ಅವರ ಸಾಹಿತ್ಯ ಕಥನ ವರ್ಸಸ್ ಸಮಾಜ ವಿಜ್ಞಾನ ಎಂಬ ಕೃತಿಯಲ್ಲಿ ಕನ್ನಡದ ಸಮಾಜ ವಿಜ್ಞಾನವು ಹೇಗೆ ಸಾಹಿತಿಗಳ ಕಾಲ್ಪನಿಕ ಬರಹಗಳನ್ನು (ಫಿಕ್ಷನ್) ಅವಲಂಬಿಸಿದೆ ಎಂಬುದನ್ನು ತೋರಿಸುತ್ತದೆ; ಆ ಮೂಲಕ, ಕನ್ನಡ ಸಮಜವಿಜ್ಞಾನ ಕ್ಷೇತ್ರವು ಸಂಶೋಧನೆಗೆ ಗಮನಾರ್ಹ ಕೊಡುಗೆಯನ್ನು ನೀಡಲು ಯಾಕೆ ಸಾಧ್ಯವಾಗಿಲ್ಲ ಎಂಬುದನ್ನು ಕೂಡ ತೋರಿಸುತ್ತದೆ.

ಸಮಾಜದ ಕುರಿತ ಕನ್ನಡ ಬೌದ್ಧಿಕ ವಲಯದ ಚಿಂತನೆಯಲ್ಲಿರುವ ಸಮಸ್ಯೆಯು ಸಾಹಿತ್ಯದ ವಿಮರ್ಶೆ ಮತ್ತು ಸಾಹಿತ್ಯದ ಸಂಶೋಧನೆಗಳಲ್ಲೂ ಪ್ರತಿಫಲಿತವಾಗಿದೆ. ಸಂಶೋಧನ ಕೌಶಲದಲ್ಲಿ ಕೊರತೆಯಿರುವಂತೆಯೇ ಆಕರಗಳನ್ನು ಪ್ರಾಮಾಣಿಕವಾಗಿ ಪರಿಗಣಿಸುವ ಮತ್ತು ಪರಿಶೀಲಿಸುವ ಧೋರಣೆಯಲ್ಲೂ ಕೊರತೆಯಿರುವುದನ್ನು ಈಚಿನ ಕೆಲವು ಬರಹಗಳು ತೋರಿಸಿಕೊಟ್ಟಿವೆ.

ವರ್ತಮಾನದ ರಾಜಕಾರಣದ ಅಗತ್ಯಕ್ಕೆ ತಕ್ಕಂತೆ ಪ್ರಾಚೀನ ಸಾಹಿತ್ಯವನ್ನು ಅಪಾರ್ಥ ಮಾಡಿಕೊಂಡು ಓದಿದ್ದಕ್ಕೆ ಹಲವು ದೃಷ್ಟಾಂತಗಳನ್ನು ನೀಡಬಹುದು. ಉದಾಹರಣೆಗೆ ಮನುಷ್ಯ ಜಾತಿ ತಾನೊಂದೆವಲಂ ಎಂದು ಹೇಳಿದ ಪಂಪನ ಮಾತನ್ನು ಪಂಪ ಬಳಸಿದುದಕ್ಕಿಂತ ಬೇರೆಯೇ ಅರ್ಥದಲ್ಲಿ ಅಥವಾ ಹೆಚ್ಚುಕಡಿಮೆ ವಿರುದ್ಧವಾದ ಅರ್ಥದಲ್ಲಿ ಬಳಸುತ್ತಿರುವ ಕ್ರಮವು ಲಾಗಾಯ್ತಿನಿಂದ ಕನ್ನಡ ವಿದ್ವತ್ ಲೋಕದಲ್ಲಿದೆ! ಹಾಗೆ ನೋಡಿದರೆ ಪಂಪನು ಆದಿಪುರಾಣದಲ್ಲಿ ಜಾತಿ ಸಮನತೆಯನ್ನು ಪ್ರತಿಪಾದಿಸಲೇ ಇಲ್ಲ! ಅಷ್ಟೇ ಅಲ್ಲ; ಇದು ಪಂಪನದೇ ಸ್ವಂತ ಮಾತು ಕೂಡ ಅಲ್ಲ. ಪೂರ್ವಪುರಾಣದಲ್ಲಿರುವುದೇ ಆಗಿದೆ. ಹೀಗಿದ್ದರೂ ಪಂಪನ ಈ ಸಾಲು ಧ್ಯೇಯವಾಕ್ಯವಾಗಿ ಕನ್ನಡದಲ್ಲಿ ಬಳಕೆಯಾಗುತ್ತಿದೆ. ಕನ್ನಡದ ಎಲ್ಲಾ ವಿಚಾರಸಂಕಿರಣಗಳಲ್ಲೂ ಉಲ್ಲೇಖವಾಗುತ್ತಲಿದೆ. ಈ ಬಗ್ಗೆ ಒಂದೆರಡು ಲೇಖನಗಳು ಕನ್ನಡದಲ್ಲಿ ಬಂದಿವೆಯಾದರೂ ಮುಂಚೂಣಿ ವಿಮರ್ಶಕರು ಅವುಗಳನ್ನು ಕಣ್ಣೆತ್ತಿಯೂ ನೋಡಿದಂತಿಲ್ಲ. ಪುಣ್ಯಕೋಟಿಯ ಕಥೆಯು ಹೇಳುವ ಮೌಲ್ಯ ಅಥವಾ ನೀತಿಯನ್ನು ತಪ್ಪಾಗಿ ಅರ್ಥೈಸಿಕೊಂಡು ಆ ಕಥೆಯು ಪರಿಸರ ಸಮತೋಲನಕ್ಕೆ ವಿರುದ್ಧ, ಹುಲಿಯ ವಿರುದ್ಧ, ದಮನಿತರ ವಿರುದ್ಧ ಎಂಬೆಲ್ಲ ರೀತಿಗಳಲ್ಲಿ ವ್ಯಾಖ್ಯಾನಿಸಿದ ವಿದ್ವಾಂಸರೂ ಕನ್ನಡದಲ್ಲಿ ಇದ್ದಾರೆ.

ನಮ್ಮ ವಿಶ್ವವಿದ್ಯಾಲಯಗಳಲ್ಲಿ ವೈಜ್ಞಾನಿಕ ದೃಷ್ಟಿಯಿಂದ, ತರ್ಕವನ್ನು ಆಧರಿಸಿ ಸಂಶೋಧನೆಗಳು ನಡೆಯುತ್ತಿಲ್ಲ ಎನ್ನುವುದನ್ನು ತೋರಿಸುವ ಈಚಿನ ಒಂದು ಪ್ರಮುಖ ಕೃತಿ ರವಿ ಹಂಜ್ ಅವರ 'ಬಸವರಾಜಕಾರಣ'. ಇದಕ್ಕೆ ಮುನ್ನುಡಿ ಬರೆದ ಶೈಲಜ ಹಿರೇಮಠ ಅವರು ಹೀಗೆ ಹೇಳುತ್ತಾರೆ. "ಜಾತಿಗಳು ಹಾಗೂ ಧರ್ಮಗಳು ಸಾಮಾಜಿಕ ನೆಲೆಯಲ್ಲಿ ಶಕ್ತಿಪ್ರದರ್ಶನದ ಅಸ್ತ್ರವಾಗಿ ಹಾಗೂ ರಾಜಕೀಯ ನೆಲೆಯಲ್ಲಿ ದಾಳವಾಗಿ ಪರಿವರ್ತನೆಗೊಂಡವು. ಇದಕ್ಕೆ ಭದ್ರವಾದ ಬುನಾದಿ ಸೃಷ್ಟಿಯಾಗಿದ್ದೇ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಪಿಎಚ್.ಡಿ. ಸಂಶೊಧನಾ ಅಧ್ಯಯನಗಳ ಮೂಲಕ". ಮುಂದೆ ಅವರೇ ಹೇಳುವಂತೆ, "ವಚನ ಚಳುವಳಿ, ಜಾತಿ ನಿರ್ದಿಷ್ಟವಾಗಿ, ಧರ್ಮನಿರ್ದಿಷ್ಟವಾಗಿ ಬೆಳೆದ ಬೆಳವಣಿಗೆಯಲ್ಲಿ ಸಂಭವಿಸಿದ ಪ್ರಕ್ರಿಯೆಗಳು ಸೃಷ್ಟಿಸಿದ ರಾಜಕಾರಣವನ್ನು ರವಿ ಹಂಜ್ ಅವರ 'ಬಸವರಾಜಕಾರಣ' ಕೃತಿಯು ಅನಾವರಣಗೊಳಿಸುತ್ತದೆ." ಬಸವಣ್ಣನವರ ಕಾಲದ ರಾಜಕಾರಣವನ್ನು ಅನಾವರಣಗೊಳಿಸುತ್ತಲೇ ನಮ್ಮ ಸಂಶೋಧನ ಕ್ಷೇತ್ರದ ರಾಜಕಾರಣವನ್ನೂ, ರಾಜಕೀಯ ಸರಿತನದ ದೃಷ್ಟಿಯನ್ನೂ ಅನಾವರಣಗೊಳಿಸಿದ್ದಾರೆ. ಆ ಮೂಲಕ ಸಂಶೋಧನ ಬರವಣಿಗೆಗಳು ಸತ್ಯ ಶೋಧನೆಗೆ ಮತ್ತು ಸತ್ಯ ಪ್ರತಿಪಾದನೆಗೆ ವಿಮುಖವಾಗುವುದನ್ನೂ ರವಿ ಹಂಜ್ ಈ ಕೃತಿಯಲ್ಲಿ ತೋರಿಸಿದ್ದಾರೆ.

'ಬಸವರಾಜಕಾರಣ' ಪ್ರಕಟವಾಗಿ ಸಾಕಷ್ಟು ಸಮಯವಾಗಿದ್ದರೂ ಅವರ ಸವಾಲನ್ನು ಕನ್ನಡದ ಪ್ರಮುಖ ಸಂಶೋಧಕರು/ ಲೇಖಕರು/ ಚಿಂತಕರು ಸ್ವೀಕರಿಸಿದಂತೆ ಕಾಣುವುದಿಲ್ಲ. ಅಲಕ್ಷ್ಯ ಮಾಡಿದಂತೆಯೇ ತೋರುತ್ತದೆ. ರವಿ ಹಂಜ್ ಅವರ ಕೆಲವು ತೀರ್ಮಾನಗಳು ಚರ್ಚಾರ್ಹವೇ ಇರಬಹುದು; ಕೆಲವು ತೀರ್ಮನಗಳಿಗೆ ಬರುವ ಮೊದಲು ಅವರು ಇನ್ನಷ್ಟು ಆಕರಗಳನ್ನು ಪರಿಶೀಲಿಸಬೇಕಿತ್ತು ಎಂದು ವಾದಿಸಲು ಅವಕಶವಿದೆ; ಅದೇನೇ ಇದ್ದರೂ ಅಲಕ್ಷ್ಯ ಮಾಡಬೇಕಾದ ಕೃತಿ ಇದಲ್ಲ.

*****

'ಬಸವರಾಜಕಾರಣ' ವನ್ನು ಲೇಖಕರು ಭಾರತೀಯ ತತ್ತ್ವಶಾಸ್ತ್ರ ಮತ್ತು ತರ್ಕಶಾಸ್ತ್ರದ ಹಿನ್ನೆಲೆಯನ್ನು ಹೇಳುವುದರೊಂದಿಗೆ ಆರಂಭಿಸುತ್ತಾರೆ. "ಹಿಂದೂ, ಪಾಶುಪತ, ಜೈನ, ಬೌದ್ಧ ಧರ್ಮಗಳು ಧರ್ಮಗಳಾಗಿ ವಿಕಾಸಗೊಳ್ಳುವ ಮೊದಲು ತರ್ಕಸಾಸ್ತ್ರದ ತಾತ್ತ್ವಿಕ ಶಾಲೆಗಳಾಗಿದ್ದವು. ಹಿಂದೂ ಸಂಸ್ಕೃತಿಯ ಉಳಿದೆಲ್ಲಾ ಪಂಥಗಳು ಸಹ ಭಾರತೀಯ ತರ್ಕಶಾಸ್ತ್ರದ ಕವಲುಗಳೇ ಆಗಿವೆ. ಹಾಗಾಗಿಯೇ ಆ ಪಂಥಗಳು ಇತಿಹಾಸದುದ್ದಕ್ಕೂ ತಾರ್ಕಿಕ ಸಂವಾದಗಳಲ್ಲಿ ತೊಡಗಿ ನಂತರ ಪಂಥಶ್ರೇಷ್ಠತೆಯ ವ್ಯಸನಕ್ಕೊಳಗಾಗಿ ಅತಾರ್ಕಿಕ ಗಟ್ಟವೇರಿ ಇಂದಿನ ವಿರಾಟ್ ಜಾತಿ ಸ್ವರೂಪ ಪಡೆದುಕೊಂಡಿರುವುವು." (ಪು.5). ಕುರುಡಾಗಿ 'ನಂಬುವುದರ' ಬದಲಾಗಿ ಜ್ಞಾನ, ತರ್ಕಗಳನ್ನು ಅವಲಂಬಿಸಿದ ಅಧ್ಯಾತ್ಮವು ಪ್ರಾಚೀನ ಭಾರತೀಯ ಪರಂಪರೆಯ ವೈಶಿಷ್ಟ್ಯ. ಹೀಗೆ ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮಿಕ ಜಿಜ್ಞಾಸೆಯು ತತ್ತ್ವಶಾಸ್ತ್ರ ಮತ್ತು ತರ್ಕವನ್ನು ಅವಲಂಬಿಸಿದ್ದನ್ನೇ ಇಲ್ಲಿ ಲೇಖಕರು ಸರಿಯಾಗಿಯೇ ಗುರುತಿಸಿದ್ದಾರೆ. ತತ್ತ್ವ ಜಿಜ್ಞಾಸೆಯು ಯಾವುದೋ ಹಂತದಲ್ಲಿ ಶ್ರೇಷ್ಠತೆಯ ವ್ಯಸನಕ್ಕೆ ತಿರುಗಿ ಜಿಜ್ಞಾಸೆಯು ಸ್ಥಗಿತವಾದುದರಿಂದಲೇ ತರ್ಕವು ಹಿಂದೆ ಬಿತ್ತು ಎನ್ನುವುದು ಬಹುಶಃ ಲೇಖಕರ ಸೂಚನೆ.

ಇದು ಹಿಂದಿನ ಕಾಲದ ಕತೆಯಾಯಿತು. ಆದರೆ ಆಧುನಿಕ ವೈಚಾರಿಕ, ವೈಜ್ಞಾನಿಕ ಮತ್ತು ಮತ ನಿರಪೇಕ್ಷ ದೃಷ್ಟಿಕೋನದವರು ಎನಿಸಿಕೊಂಡವರಾದರೂ ಮಾಡಿದುದೇನು? ಪ್ರಾಚೀನ ಕಾಲದ ಸಂವಾದ, ತತ್ತ್ವಜಿಜ್ಞಾಸೆ, ತರ್ಕಕ್ಕೆ ಪರ್ಯಾಯವಾಗಿ ಇಂದು ನಾವು ಪರಿಗಣಿಸಬೇಕಾಗಿರುವ ಈ ಕಾಲದ ಸಂಶೋಧನೆಗಳಾದರೂ ಹೇಗಿವೆ? ಸಂಶೋಧಕರ ಸತ್ಯನಿಷ್ಠೆ ಮತ್ತು ಬದ್ಧತೆ ಯಾವ ಬಗೆಯದು? ಇವೆಲ್ಲ ಕೇಳಿಕೊಳ್ಳಬೇಕಾದ ಪ್ರಶ್ನೆಗಳು.

"ಅಂದು ನಮ್ಮ ಶಿಕ್ಷಕರು ತರ್ಕವೆಂದರೆ ವಾದ, ಸಂವಾದ, ಚರ್ಚಾ ಸ್ಪರ್ಧೆಗಳೆಂಬರ್ಥವನ್ನು ಕೊಡುತ್ತಿದ್ದರು ಅಥವಾ ಹಾಗೆಂದು ತಿಳಿದಿದ್ದರು. ತರ್ಕವೆಂಬುದು ಗಣಿತದ ಯಾ ವಿಜ್ಞಾನದ ಬುನಾದಿ ಎಂದು ಅವರು ತಿಳಿದಿರಲಿಲ್ಲ. ಇಂದಿನ ಭಾರತೀಯ ವಿಶ್ವವಿದ್ಯಾನಿಲಯಗಳ ಸಾಕಷ್ಟು ಉಪನ್ಯಾಸಕವರ್ಗವೂ ಬಗೆದಿಲ್ಲ!... ವರ್ತಮಾನದಲ್ಲಿನ ಭಾಷಾ ಮತ್ತು ಸಾಮಾಜಿಕ ಉಪನ್ಯಾಸಕ ಹುದ್ದೆಯ ಅನೇಕ ಬುದ್ಧಿಜೀವಿಗಳ ತರ್ಕವೆಂದರೆ ವಾದ ಎಂಬ ಸಕುಚಿತಕ್ಕೆ ತರ್ಕವನ್ನು ಸೀಮಿತ ದಿಕ್ಕೂಚಿಗೊಳಪಡಿಸಿರುವುದು ತತ್ತ್ವ ಮೀಮಾಂಸೆಯ ದುರಂತ."(ಪು.10). ಕಲ್ಪನಾ ಸಾಹಿತ್ಯ ಸೃಷ್ಟಿಗೆ, ಅಂದರೆ ಕಥೆ, ಕಾದಂಬರಿ, ನಾಟಕ, ಕಾವ್ಯಗಳಿಗೆ ಹೆಚ್ಚು ತರ್ಕ ಬೇಡ; ಸಂಶೋಧನೆಗೆ ತರ್ಕ ಬೇಕು. ವಿಮರ್ಶೆಗೂ ಬೇಕು. ಆದರೆ ಇಂದು ಸಂಶೋಧನೆ ಅಥವಾ ವೈಚಾರಿಕ ನಿರೂಪಣೆಗಳಿಗೂ ತರ್ಕ ಅಗತ್ಯವಿಲ್ಲ ಎಂಬಂತಾಗಿದೆ. ನಿಮ್ಮ ಕಥನವನ್ನು ಯಾರಾದರೂ ತರ್ಕದ ನೆಲೆಯಿಂದ ಪ್ರಶ್ನಿಸಿದರೆ ದಿವ್ಯ ನಿರ್ಲಕ್ಷ್ಯ ತೋರಿಸಿದರಾಯಿತು; ಅಥವಾ ವರ್ತಮಾನದ ಸಾಮಾಜಿಕ, ರಾಜಕೀಯ ಪರಿಸ್ಥಿತಿಯಲ್ಲಿ ತರ್ಕ ಮತ್ತು ಸತ್ಯಕ್ಕಿಂತ 'ರಾಜಕೀಯ ಸರಿತನ'ವೇ ಮುಖ್ಯ ಎಂದರಾಯಿತು; ಅಥವಾ ಮತ್ತಷ್ಟು ಒತ್ತಡ ಬಂದರೆ, 'ಸತ್ಯಕ್ಕೆ ಹಲವು ಮುಖಗಳಿರುತ್ತವೆ' ಎಂದು ಹೇಳಿ ಮುಖ ತಿರುಗಿಸಿದರಾಯಿತು.

ರವಿ ಹಂಜ್ ಹೇಳುವಂತೆ "ಸ್ವಾತಂತ್ರ್ಯೋತ್ತರದ ಸಂಶೋಧಕರು ಆ ಸಾಸ್ತ್ರೀಯ ವೈಧಾನಿಕತೆಗಳನ್ನು ನಿರ್ಲಕ್ಷಿಸಿ ಭಾವನಾತ್ಮಕವಾಗಿ ಕ್ರಿಯಾಶೀಲರಾಗಿದ್ದಾರೆ" (ಪು. 19). ಭಾರತೀಯ ಸಮಾಜದಲ್ಲಿ ಜನಜನಿತವಾಗಿರುವ ಕೆಲವೇ ಕೆಲವು ಸಿದ್ಧಾಂತಗಳನ್ನು ಪರಿಗಣಿಸಿ ಆ ಸಿದ್ಧಾಂತಗಳು ಹೇಗೆ ಸಾಮಾನ್ಯಜ್ಞಾನದ ವಿಶ್ಲೇಷಣೆಗೆ, ತರ್ಕಕ್ಕೆ ಮತ್ತು ಸಾಕ್ಷಿಗಳಿಗೆ ವಿರುದ್ಧವಾಗಿವೆ ಎಂದು ಪರಿಶೀಲಿಸುವುದು ಲೇಖಕರ ಉದ್ದೇಶವಾಗಿದೆ. (ಪು.20).

'ಬಸವ ರಾಜಕಾರಣ'ವು ಮುಖ್ಯವಾಗಿ ವೀರಶೈವ–ಲಿಂಗಾಯತರ ಚಳವಳಿಯ ಕುರಿತು ಬಂದ ಸಂಶೋಧನ ಬರೆಹಗಳನ್ನು ವಿಮರ್ಶೆಗೊಳಪಡಿಸುತ್ತದೆ. ವಚನಗಳನ್ನೇ ಲೇಖಕರು ಆಕರಗಳನ್ನಾಗಿ ಬಳಸುತ್ತಾರೆ. ಅವರು ಹೆಚ್ಚು ಕಡಿಮೆ ವಚನಗಳನ್ನು ಮಾತ್ರವೇ ಬಳಸಿಕೊಳ್ಳುವುದು. ಒಟಾರೆಯಾಗಿ ಬರತೀಯ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆಗಳ ಸ್ವರೂಪವನ್ನು ಲೇಖಕರು ಗಮನದಲ್ಲಿ ಇಟ್ಟುಕೊಳ್ಳುತ್ತಾರಾದರೂ ನಿರ್ದಿಷ್ಟವಾಗಿ ವಚನಗಳ ಕುರಿತ ಸಂಶೋಧನೆಯನ್ನು ವಿವೇಚಿಸುತ್ತ ತಮ್ಮ ವಿಮರ್ಶೆಯನ್ನು ಹರಿತಗೊಳಿಸಿ ಕೇಂದ್ರೀಕರಿಸಿದ್ದಾರೆ. ವಚನಗಳು ಮತ್ತು ವೀರಶೈವ– ಲಿಂಗಾಯತವನ್ನು ಆಯ್ದುಕೊಳ್ಳಲು ಕಾರಣವನ್ನು ಹೀಗೆ ಹೇಳಿದ್ದಾರೆ: "ಈ ವಿಷಯಗಳನ್ನು ನಾನು ಆಯ್ದುಕೊಳ್ಳಲು ಪ್ರಮುಖವಾಗಿ ಅವುಗಳ ಸಾಮಾಜಿಕ ಸಿದ್ಧ ಸಿದ್ಧಾಂತ, ಮನ್ನಣೆ ಮತ್ತು ಸತ್ಯಾಸತ್ಯತೆಯಲ್ಲಿನ ವ್ಯತ್ಯಾಸಗಳು

ಕಾರಣವಾಗಿವೆ... ಈ ಆಯ್ಕೆಯ ಕೆಲವು ವಿಷಯಗಳ ಕುರಿತಾಗಿ ಯಾವುದೇ ಭಿನ್ನಾಭಿಪ್ರಾಯ ಮಂಡನೆಯನ್ನು ಭಾರತೀಯ ಪ್ರಜಾಪ್ರಭುತ್ವದ ಸಂಖ್ಯಾ ಸೂತ್ರದನ್ವಯ ಸಮಾಜ ದ್ರೋಹದಂತೆ ಪರಿಗಣಿಸಲಾಗುತ್ತದೆ. ಆದರೆ ಸತ್ಯವನ್ನು ಒಂದು ತಾರ್ಕಿಕ ನೆಲೆಯಲ್ಲಿ ಕಂಡುಕೊಳ್ಳಬೇಕಾದ ಅಗತ್ಯ ಎಲ್ಲಾ ಸಾಸ್ತ್ರಸೂತ್ರಗಳನ್ನು ಮೀರಿ ಈಗ ಅತ್ಯಂತ ಹೆಚ್ಚಾಗಿದೆ.... ಈ ವಿಷಯಗಳನ್ನು ತರ್ಕ, ಸಾಮಾನ್ಯಜ್ಞಾನ, ಖಚಿತ ಪುರಾವೆ ಮತ್ತು ವಿಶ್ಲೇಷಣೆಗೊಳಪಡಿಸಿದಾಗ ದೊರೆತ ಫಲಿತಾಂಶವು ಅವುಗಳ ಇಲ್ಲಿಯವರೆಗಿನ ನಿರೂಪಿ ಸಿದ್ಧಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿದೆ. ಸಾಮಾಜಿಕವಾಗಿ ರಾಜಕೀಯವಾಗಿ ಅತ್ಯಂತ ಪ್ರಭಾವಶಾಲಿ ಎನಿಸಿದ ಸಂಗತಿಗಳೇ ಇಷ್ಟೊಂದು ವ್ಯತಿರಿಕ್ತವಾಗಿರುವಾಗ 'ಶೋಧ್ ಗಂಗಾ' ದಲ್ಲಿರುವ ಲಕ್ಷಾಂತರ ಸಂಶೋಧನೆಗಳು ಎಷ್ಟರಮಟ್ಟಿಗೆ ವ್ಯತಿರಿಕ್ತವಾಗಿರಬಹುದು?" (ಪು. 21).

ಭಾರತದಲ್ಲಿ ಜಾತಿತಾರತಮ್ಮದ ಕಥನದ ಚರಿತ್ರೆಯನ್ನು ರವಿ ಹಂಜ್ ರವಿ ಹಂಜ್ ಮೊದಲಿಗೆ ಪರಿಶೀಲಿಸುತ್ತಾರೆ. ಸಮಾಜದಲ್ಲಿ ವೃತ್ತಿಯಾಧಾರಿತ ವಿಭಾಗಗಳು ತೊಲಗಿ ಹುಟ್ಟಿನಿಂದ ಜಾತಿ ಎನ್ನುವ ನೀತಿಯು ಪ್ರಧಾನವಾಗಲಾರಂಭಿಸಿದಾಗ ಅದನ್ನು ಪ್ರಶ್ನಿಸುತ್ತ ವಚನಗಳ ಚಳವಳಿ ಹುಟ್ಟಿ ಬೆಳೆಯಿತು ಎಂಬುದು ರವಿ ಹಂಜ್ ಅವರ ಮುಖ್ಯ ಪ್ರತಿಪಾದನೆ. ಹೀಗಾಗಿ ಅಸ್ಪೃಶ್ಯತೆ ಮತ್ತು ಹುಟ್ಟಿನಿಂದಲೇ ನಿರ್ಧಾರವಾಗುವ ಜಾತಿ ಪದ್ಧತಿಯು ಯಾವಾಗ ಆರಂಭವಾಯಿತು ಎಂಬ ಚರ್ಚೆಯನ್ನು ಅವರು ಕೈಗೆತ್ತಿಕೊಳ್ಳುತ್ತಾರೆ.

ತಮ್ಮ ವಾದದಲ್ಲಿ ಮೊದಲನೆಯದಾಗಿ, "ಅಸ್ಪೃಶ್ಯತೆಯು ಭರತಖಂಡದಾದ್ಯಂತ ಶತಶತಮಾನಗಳಿಂದ ಜಾರಿಯಲ್ಲಿದೆಯೆಂದು, ಅಸ್ಪೃಶ್ಯರನ್ನು ಶತಶತಮಾನಗಳಿಂದ ಶೋಷಣೆಗೊಳಪಡಿಸಿ ತುಳಿಯಲಾಗಿದೆಯೆಂದು, ಇದಕ್ಕೆಲ್ಲಾ ಕಾರಣ ಸನಾತನವಾಗಿ ಕ್ರಿಸ್ತಪೂರ್ವದಿಂದಲೂ ಇರುವ 'ಹುಟ್ಟಿನಿಂದಲೇ ನಿಧಾರವಾಗುವ' ಜಾತಿಪದ್ಧತಿ" ಎಂಬ ಕಥನದ ಬಗ್ಗೆ ಪ್ರಶ್ನೆಯನ್ನು ಎತ್ತುತ್ತಾರೆ. ಈ ಕಥನವನ್ನು ಅಲ್ಲಗಳೆಯಲು ಆಧಾರಗಳನ್ನು ನೀಡಲು ಯತ್ನಿಸುತ್ತಾರೆ.

ಯುರೋಪಿಯನ್ನರು ರಿಲಿಜಿಯಸ್ ಪುಸ್ತಕದ ಆಧಾರದಲ್ಲಿ ಮೌಲ್ಯಗಳನ್ನು ನ್ಯಾಯವನ್ನು ನಿರ್ಣಯಿಸುವ ಪರಂಪರೆಯವರು. ಸರಿಯಾದ ಒಂದು ಆಧಾರ ಗ್ರಂಥವಿಲ್ಲದ ಪೇಗನ್‌ಗಳ ನಡೆನುಡಿಯ ಸರಿತಪ್ಪುಗಳನ್ನು ನಿರ್ಣಯಿಸುವುದು ಹೇಗೆ? ಅದೇ ಹಿನ್ನೆಲೆಯಿಂದ ಅವರು ಬಾರತದ ಸಂಪ್ರದಾಯಗಳನ್ನು ಅರ್ಥ ಮಾಡಿಕೊಂಡು ಭಾರತೀಯರ ರಿಲಿಜಿಯಸ್ ಗ್ರಂಥಗಳ ಹುಡುಕಾಟದಲ್ಲಿ ತೊಡಗಿದ್ದು ಇವೆಲ್ಲ ಸಂಗತಿಗಳ ಈಚೆಗೆ ಸಾಕಷ್ಟು ಚರ್ಚೆಗಳಾಗಿವೆ. ಆಗುತ್ತಿವೆ. ರವಿ ಹಂಜ್ ಅವರು ಕೂಡ ಸರಿಯಾಗಿಯೇ "ಮನುಸ್ಮೃತಿಗೆ ಪ್ರಾಮುಖ್ಯವನ್ನು ಕೊಟ್ಟದ್ದೇ ಬ್ರಿಟಿಷರು" ಎಂದು ಹೇಳುತ್ತಾರೆ.(ಪು.16). "ಮೊಟ್ಟ ಮೊದಲ ಬಾರಿಗೆ ಬ್ರಿಟಿಷ್ ಸರಕಾರಕ್ಕೆ ಭಾರತೀಯರನ್ನು ಆರ್ಯ, ದ್ರಾವಿಡ, ಅರಬ(ಮುಸ್ಲಿಂ)ರೆಂದು ಜನಾಂಗೀಯವಾಗಿ ಗುರುತಿಸ(ವಿಭಜಿಸ)ಬೇಕೆಂಬ ಮಂಡನೆಯನ್ನಿರಿಸಿದವನೇ ಇವನು (ಸರ್ ವಿಲಿಯಂ ಜೋನ್ಸ್)... ಮುಂದೆ ಕ್ರಿ.ಶ. 1794ರಲ್ಲಿ ಸರ್ ವಿಲಿಯಂ ಜೋನ್ಸ್, ಬ್ರಿಟಿಷ್ ಸರಕಾರದ ಅಣತಿಯಂತೆ ಹಿಂದೂ ಕಾನೂನಾಗಿಸಲೆಂದೇ ಮನುಸ್ಮೃತಿಯನ್ನು ಇಂಗ್ಲಿಷಿಗೆ ಭಾಷಾಂತರಿಸಿದನು." (ಪು.17).

5ನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದ ಫಾಹಿಯಾನ್ ಮತ್ತು 7ನೇ ಶತಮಾನದ ಚೀನೀ ಪ್ರವಾಸಿ ಹುಯೆನ್ ತ್ಸಾಂಗ್ ಮತ್ತು ಹನ್ನೊಂದನೇ ಶತಮಾನದಲ್ಲಿ ಭಾರತಕ್ಕೆ ಬಂದ ಅಲ್ ಬೆರೂನಿ–ಈ ಪ್ರವಾಸಿಗಳ ಅವಲೋಕನಗಳನ್ನು ಆಧರಿಸಿ ಆ ಅಸ್ಪೃಶ್ಯತೆ ಮತ್ತು ಜಾತಿಯ ಪ್ರಶ್ನೆಗಳನ್ನು ಲೇಖಕರು ವಿವೇಚಿಸುತ್ತಾರೆ. ಫಾಹಿಯಾನನ ಮಾತುಗಳನ್ನು ಲೇಖಕರು ಹೀಗೆ ಉಲ್ಲೇಖಿಸುತ್ತಾರೆ: "ಚಾಂಡಾಲರು ತಮ್ಮ ಕಟುಕ ವೃತ್ತಿಯನ್ನು ಬಿಟ್ಟು ಪರಿವರ್ತನೆಗೊಂಡಲ್ಲಿ (ವೃತ್ತ್ಯಾಂತರಗೊಂಡಲ್ಲಿ) ಪುರೋಹಿತರಾಗುವ ವ್ಯವಸ್ಥೆ ಕೂಡಾ ಇದೆ." (ಪು.36). ಫಾಹಿಯಾನ್ ದಾಖಲಿಸಿರುವುದು ಒಂದು 'ಸಾಮಾಜಿಕ ವ್ಯವಸ್ಥೆ'ಯ ಶ್ರೇಣೀಕೃತ ವಾಣಿಜ್ಯಸಂಕರ ಎನ್ನಬೇಕಾಗುತ್ತದೆಯೇ ಹೊರತು 'ಧರ್ಮಾಧಾರಿತ' ವರ್ಣಸಂಕರವಲ್ಲ ಎನ್ನುವ ರವಿ ಹಂಜ್ ಮುಂದುವರಿದು ಹೀಗೆ ಹೇಳುತ್ತಾರೆ.: "ಫಾಹಿಯಾನ್ ಎಲ್ಲಿಯೂ ಚಾಂಡಾಲರು ಮುಟ್ಟಲು ಯಾ ಮುಟ್ಟಿಸಿಕೊಳ್ಳಲು ಅನರ್ಹರೆಂದು ಹೇಳಿಲ್ಲ. ಅದನ್ನು ಹೇಳುವ ಅವಶ್ಯಕತೆಯೇ ಅವನಿಗಿರಲಿಲ್ಲ! ಏಕೆಂದರೆ ಜನ ಅವರ ಕೈಯಿಂದ ಮಾಂಸವನ್ನು ಕೊಳ್ಳುತ್ತಿದ್ದರು ಮತ್ತು ಪರಿವರ್ತಿತರಾದರೆ ಅವರನ್ನು ಒಳಗೊಳ್ಳುತ್ತಿದ್ದರು ಮತ್ತು ಬ್ರಾಹ್ಮಣರಾದರೆ ಅವರನ್ನು ಆರಾಧಿಸುತ್ತಿದ್ದರು ಸಹ. ಒಟ್ಟಾರೆ ಫಾಹಿಯಾನನ ಪ್ರಕಾರ ಹುಟ್ಟಿನಿಂದ ವರ್ಣಗಳು ನಿರ್ಧಾರವಾಗುತ್ತಿರಲಿಲ್ಲ ಮತ್ತು ಅಸ್ಪೃಶ್ಯತೆಯಂತೂ ಇರಲೇ ಇಲ್ಲ." (ಪು.37).

ಹುಯೆನ್ ತ್ಸಾಂಗ್ ಕೂಡ ಅಸ್ಪೃಶ್ಯತೆಯ ಬಗ್ಗೆ ಯಾವುದೇ ಮಾಹಿತಿಯನ್ನು ದಾಖಲಿಸಿಲ್ಲವೆಂಬುದು ಗಮನಾರ್ಹ ಸಂಗತಿ ಎಂದು ಲೇಖಕರು ಗುರುತಿಸುತ್ತಾರೆ. ಬ್ರಾಹ್ಮಣರ ಕೇರಿ, ಕುರುಬರ ಕೇರಿ, ಕುಂಬಾರರ ಕೇರಿ ಇತ್ಯಾದಿ ಕೇರಿಗಳು ಔದ್ಯೋಗಿಕ ಕಾರಣಗಳಿಂದಾದ ವರ್ಗೀಕರಣ ಎಂದು ರವಿ ಹಂಜ್ ಹೇಳುತ್ತಾರೆ. ಅವರ ಪ್ರಕಾರ ಆಗಿನ ವರ್ಣಗಳು ಈಗಿನ ಅಧುನಿಕ ಸಮಾಜದ ಬಿಳಿಯ ಕಾಲರಿನ ಮತ್ತು ನೀಲಿ ಕಾಲರ್ ವ್ಯತ್ಯಾಸವಿದ್ದಂತೆ... ವೃತ್ತಿಯ ಸ್ಥಳ ವ್ಯತ್ಯಾಸವಿದ್ದಂತೆಯೇ ಹೊರತು ಹುಟ್ಟಿನಿಂದಾದ ಜಾತಿ, ಧರ್ಮದಿಂದಾದ ವ್ಯತ್ಯಾಸವಲ್ಲ. (ಪು.40).

ಶಂಕರಾಚಾರ್ಯರು ಮತ್ತು ಚಾಂಡಾಲನೋರ್ವನ ನಡುವೆ ನಡೆಯಿತೆನ್ನಲಾದ ಸಂವಾದದ ಬಗ್ಗೆ ಬರೆಯುತ್ತಾ ಹಂಜ್ ಹೀಗೆ ಹೇಳುತ್ತಾರೆ: "ಇವರೀರ್ವರ ನಡುವೆ ನಡೆದ ಸಂಭಾಷಣೆಯ ವಿವರಗಳು ಕೂಡಾ ಅಂತರಂಗ/ ಬಹಿರಂಗ ಶುದ್ಧಿಯ ಕುರಿತಾಗಿವೆಯೇ ಹೊರತು ಅಸ್ಪೃಶ್ಯತೆಯ ಕುರಿತಲ್ಲ... ಈ ದೃಷ್ಟಾಂತದಲ್ಲಿ ಶುದ್ಧಿ ಪದವು ಮಡಿಯೆನಿಸಿ ಮೈಲಿಗೆ ಪದವು ಅಸ್ಪೃಶ್ಯತೆ ಪದದ ತತ್ಸಮಾನ ಪದವೆನಿಸುವುದರಿಂದ ಹೆಚ್ಚು ವಿಶ್ಲೇಷಣೆಯಿಲ್ಲದೆ ಸಂಸೋಧನೆಗಳು 'ಆಹಾ, ಇದೋ ಅಸ್ಪೃಶ್ಯತೆ' ಎಂದಂತಿದೆಯೆನಿಸುತ್ತದೆ." (ಪು. 41– 42).

ಇರಾನಿ ಯಾತ್ರಿಕ ಅಲ್ ಬರೂನಿ ಕೂಡ ಅಂತ್ಯಜರು ಮೋಕ್ಷಕ್ಕೆ ಅರ್ಹರಲ್ಲವೆಂಬ ಅಭಿಪ್ರಾಯವನ್ನು ಬಿಟ್ಟರೆ ಅಸ್ಪೃಶ್ಯತೆಯ ಬಗ್ಗೆ ಏನನ್ನೂ ಹೇಳಿಲ್ಲ ಎಂದು ಲೇಖಕರು ಹೇಳುತ್ತಾರೆ. "ಅಲ್ ಬರೂನಿಯ ಹಿಂದೂಸ್ತಾನದ ದಸ್ತಾವೇಜಿನಲ್ಲಿ ಅತ್ಯಂತ ಪ್ರಮುಖವಾಗಿ ಗಮನಿಸಬೇಕಾದುದು 'ಅಂತ್ಯಜ' ವರ್ಗ. ಇದು ಚಾತುರ್ವರ್ಣದ ಹೊರಗೆ ಆಗಷ್ಟೇ ಸೃಷ್ಟಿಯಾದ ವರ್ಗ! ಏಕೆಂದರೆ ಇಸ್ಲಾಂ ದಾಳಿಯ ನಂತರ ಹುಟ್ಟಿನಿಂದ ಜಾತಿಯನ್ನು ಸೃಷ್ಟಿಸಿಕೊಂಡ ಹಿಂದೂ ಧರ್ಮ, ಅದನ್ನು ಒಮದು

ಕಟ್ಟುನಿಟ್ಟಿನ ನಿಯಮವನ್ನಾಗಿಸಲು ಯಾರಾದರೂ ತಮ್ಮ ವರ್ಗಗಳ ಹೊರಗೆ ವಿವಾಹ ಸಂಬಂಧಗಳನ್ನೋ, ವಿವಾಹೇತರ ಸಂಬಂಧಗಳನ್ನೋ ಹೊಂದಿ ಮಕ್ಕಳನ್ನು ಪಡೆದರೆ ಆ ಮಕ್ಕಳನ್ನು ಅಂತ್ಯಜರೆನ್ನುವ, ವರ್ಣಗಳ ಹೊರಗಿನವರೆಂದು ವರ್ಗೀಕರಿಸಿ ಅಂತಹವರು ಮೋಕ್ಷಕ್ಕೆ ಅರ್ಹರಲ್ಲವೆನ್ನುತ್ತಿದ್ದರು..." (ಪು. 47).

"ಹುಟ್ಟಿನಿಂದ ಜಾತಿಗಳನ್ನು ನಿರ್ಧರಿಸುವ ಪದ್ಧತಿ ಇಸ್ಲಾಂ ಬಂಡುಕೋರ ದಾಳಿಯ ನಂತರ ಜಾರಿಗೆ ಬಂದಿತು ಎಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ." ಎಂದು ರವಿ ಹಂಜ್ ಪ್ರತಿಪಾದಿಸುತ್ತಾರೆ. (ಪು.42). "ಭಾರತದಲ್ಲಿ ನೆಲೆ ನಿಲ್ಲದ ಮುಸ್ಲಿಂ ದಾಳಿ 'ಹುಟ್ಟಿನಿಂದ ಜಾತಿ'ಯ ಸೃಷ್ಟಿಗೆ ಕಾರಣವಾಗಿ 'ಧಾರ್ಮಿಕ ಅಸಮಾನತೆ'ಯನ್ನು ಸೃಷ್ಟಿಸಿದರೆ, ಇಲ್ಲಿಯೇ ನೆಲೆನಿಂತ (ಮೊಘಲ್) ಮುಸ್ಲಿಂ ಆಡಳಿತ 'ಸಾಮಾಜಿಕ ಅಸಮಾನತೆ'ಯನ್ನು ಸೃಷ್ಟಿಸಿತು. ಹಾಗೆಂದು ಸಾಮಾಜಿಕ ಅಸಮಾನತೆ ಮುಸ್ಲಿಂ ಆಡಳಿತಗಾರರಿಗಿಂತ ಮುಂಚಿತವಾಗಿ ಭಾರತದಲ್ಲಿ ಇರಲೇ ಇಲ್ಲವೆಂದಲ್ಲ. ಅದು ಪ್ರಭುತ್ವ ಪಂಥಗಳ ಉನ್ನತ ವರ್ಗಗಳ ಓಲೈಕೆಯ ಮಟ್ಟಿಗಿದ್ದಿತೇ ಹೊರತು ಸಾಮಾನ್ಯ ವರ್ಗಗಳ ಮಟ್ಟಿಗೆ ಅದರ ಬಿಸಿ ತಟ್ಟಿರಲಿಲ್ಲ." (ಪು.50).

ಭಾರತದಲ್ಲಿ ಸುಮಾರು ಹತ್ತನೇ ಶತಮಾನದ ಬಳಿಕ ಭಕ್ತಿಪಂಥಗಳ ಹುಟ್ಟಿ ಬೆಳೆದುದರ ಕಾರಣವನ್ನು ರವಿ ಹಂಜ್ ಹೀಗೆ ಗುರುತಿಸುತ್ತಾರೆ: "...ಧಾರ್ಮಿಕ ಅಸಮಾನತೆ ಮತ್ತು ಸಾಮಾಜಿಕ ಅಸಮಾನತೆಯೆಂಬ ಎರಡು ಅನಿಷ್ಟಗಳನ್ನು ವಿರೋಧಿಸಿ ಸಾಕಷ್ಟು ನವಪ್ರಭುತ್ವಗಳು, ಭಕ್ತಿಪಂಥಗಳು ಉದಯವಾದವು. ಶೂದ್ರ ಭಕ್ತಿಪಂಥಗಳ ಪ್ರಮುಖ ಉದ್ದೇಶ 'ಸಾಮಾಜಿಕ ನ್ಯಾಯ' ಮತ್ತು 'ಧಾರ್ಮಿಕ ಸಮಾನತೆ'ಯಾಗಿದ್ದವು. 'ಹುಟ್ಟಿನಿಂದ ಜಾತಿ', ಮತ್ತು ಸಾಮಾಜಿಕ ಅಸಮಾನತೆಗಳು ಕ್ರಮೇಣವಾಗಿ ವಿವಿಧ ಪ್ರಾಂತ್ಯಗಳಿಗೆ ಮುಸ್ಲಿಂ ಆಕ್ರಮಣ ವಿಸ್ತಾರಗೊಂಡಂತೆ ವಿಸ್ತರಿಸುತ್ತಾ ಸಾಗಿದವು. ಅದಕ್ಕನುಗುಣವಾಗಿ ಶೂದ್ರ ಭಕ್ತಿಪಂಥ ಸಹ ವಿಸ್ತಾರಗೊಳ್ಳುತ್ತಾ ಸಾಗಿತು. ಹಾಗಾಗಿಯೇ ಶೂದ್ರ ಭಕ್ತಿಪಂಥ ಹತ್ತನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ ಮುಸ್ಲಿಂ ಪ್ರಭುತ್ವಗಳು ವಿಸ್ತಾರಗೊಂಡಂತೆ ವಿಸ್ತರಿಸುತ್ತ ಸಾಗಿಬಂದಿದೆ." (ಪು.52).

ಫಾಹಿಯಾನ್, ಹುಯೆನ್ ತ್ಸಾಂಗ್‌ರಂಥವರ ಪ್ರವಾಸದ ಕಾಲದಲ್ಲಿ ಇತ್ತೇ ಅಥವಾ ಇರಲಿಲ್ಲವೇ ಎಂದು ಲೇಖಕರು ಪರಿಶೀಲಿಸುವ ಪದ್ಧತಿಯನ್ನು 'ಹುಟ್ಟಿನಿಂದ ಜಾತಿ' ಎಂದು ಕರೆದಿರುವುದು ಸ್ವಲ್ಪ ಗೊಂದಲಕ್ಕೆ ಕಾರಣವಾಗುತ್ತದೆ. ಜಾತಿ ಎನ್ನುವ ಪದವೇ ಹುಟ್ಟು, ಜನ್ಮ ಎಂಬರ್ಥದ್ದು. ಹೀಗಿರುವಾಗ 'ಹುಟ್ಟಿನಿಂದ ಜಾತಿ' ಎನ್ನುವುದು ಇರಲಿಲ್ಲ ಎಂದರೆ ವೈರುಧ್ಯದಂತೆ ತೋರುತ್ತದೆ. ಬಹುಶಃ ಸುಮಾರಾಗಿ ಹತ್ತನೇ ಶತಮಾನದ ಪೂರ್ವದಲ್ಲಿ ಹುಟ್ಟಿನಿಂದ ವರ್ಣ ಅಥವಾ ವೃತ್ತಿಯ ನಿರ್ಧಾರವಾಗುತ್ತಿರಲಿಲ್ಲ ಎಂಬುದು ಲೇಖಕರ ಪ್ರತಿಪಾದನೆಯಿರಬೇಕು ಎನಿಸುತ್ತದೆ. ಹೆಚ್ಚಿನೆಲ್ಲಾ ಕಡೆಗಳಲ್ಲಿ ಲೇಖಕರು 'ಹುಟ್ಟಿನಿಂದ ಜಾತಿ ಎನ್ನುವ ಪದ್ಧತಿ ಇರಲಿಲ್ಲ' ಎಂದೇ ಪದಪುಂಜವನ್ನು ಬಳಸಿ ಗೊಂದಲ ಉಂಟುಮಾಡುತ್ತಾರಾದರೂ ಒಂದೆರಡು ಕಡೆಗಳಲ್ಲಿ ಸರಿಯಾಗಿ ಅರ್ಥವಾಗುವಂತೆ 'ಹುಟ್ಟಿನಿಂದ ವರ್ಣ ನಿಧಾರವಾಗುತ್ತಿರಲಿಲ್ಲ' ಎಂದೇ ಪದಗಳನ್ನು ಬಳಸಿರುವುದರಿಂದ (ಪು.37) ಅವರು ಒಟ್ಟಾರೆಯಾಗಿ ಹೇಳುವುದೇನು ಎನ್ನುವುದು ಗೊತ್ತಾಗುತ್ತದೆ. 'ಹುಟ್ಟನ್ನು' ಆಧರಿಸದೆ ವರ್ಣ ಅಥವಾ ವೃತ್ತಿ ಇರಬಹುದಾಗಿತ್ತು ಎನ್ನುವಲ್ಲಿಯೂ 'ಹುಟ್ಟು' ಎಂದು ಕರೆಯುವುದು ಯಾವುದನ್ನು? ಜಾತಿಯನ್ನೇ!

ಆಧರಿಸದೆ ಇರುವುದು ಯಾವುದನ್ನು? ಹುಟ್ಟನ್ನು. ಅಂದರೆ ಜಾತಿಯನ್ನು. ಅಂದರೆ ಜಾತಿ ಇತ್ತು ಎಂದೇ ಅರ್ಥವಾಗುತ್ತದೆ.

ಒಟ್ಟಿನಲ್ಲಿ 10ನೇ ಶತಮಾನಕ್ಕೂ ಮುಂಚೆ 'ಹುಟ್ಟನ್ನು' ಅವಲಂಬಿಸದ ಅಥವಾ 'ಜಾತಿಯನ್ನು' ಅವಲಂಬಿಸದ ವರ್ಣ ಅಥವಾ ವೃತ್ತಿ ವ್ಯವಸ್ಥೆ ಇತ್ತು ಎನ್ನುವುದು ಎಂದು ರವಿ ಹಂಜ್ ವಾದಿಸುತ್ತಿದ್ದಾರೆಂದು ನಾನು ಅರ್ಥ ಮಾಡಿಕೊಂಡದ್ದು. ಅಂದರೆ ವರ್ಣಗಳ ನಡುವೆ ಚಲನೆ ಸಾಧ್ಯವಿತ್ತು. ಲೇಖಕರು ಬಹಳ ನಿರ್ಣಾಯಕವಾಗಿ ಈ ಮಾತುಗಳನ್ನು ಹೇಳುತ್ತಾರಾದರೂ ನಮಗೆ ಪೂರ್ತಿ ಮನವರಿಕೆಯಾಗುವುದಿಲ್ಲ. ಅದರಲ್ಲೂ ಅವರು ಸುಮಾರು ಹತ್ತನೇ ಶತಮಾನದವರೆಗೂ ಹುಟ್ಟಿನಿಂದ ವರ್ಣ/ ವೃತ್ತಿಗಳು ಇರಲಿಲ್ಲ ಎಂದಾಗ ಒಪ್ಪಲು ಕಷ್ಟವಾಗುತ್ತದೆ. ಅವರು ಅವಲಂಬಿಸುವ ಆಕರಗಳು ಸೀಮಿತವಾದುದೇ ಇದಕ್ಕೆ ಕಾರಣವಿರಬಹುದು. ವೇದಗಳ ಕಾಲವನ್ನು ಬಿಡೋಣ. ಪುರಾಣಗಳ ಕಾಲಕ್ಕೆ ಬಂದರೆ, ನಮ್ಮ ಪುರಾಣಗಳಲ್ಲಿ ಹುಟ್ಟನ್ನು/ ಜಾತಿಯನ್ನು ಆಧರಿಸದೆ ವಿವಿಧ ಜಾತಿಗಳಲ್ಲಿ 'ಹುಟ್ಟಿದ' ಸಣ್ಣ ದೊಡ್ಡ ಅರಸರು ಆಳ್ವಿಕೆ ನಡೆಸಿದ್ದರ ಉಲ್ಲೇಖ ಕಾಣುತ್ತದೆ. ಇತಿಹಾಸದಲ್ಲಂತೂ ಬಸವಣ್ಣನವರ ಕಾಲದ ಬಿಜ್ಜಳರಾಜನೇ ಇದ್ದ. ಆದರೆ ಹತ್ತಿರ ಹತ್ತಿರ ವಚನಗಳ ಆರಂಭದ ಕಾಲದವರೆಗೂ ಯಾವ ಜಾತಿಯಲ್ಲಿ ಹುಟ್ಟಿದರೂ ಯಾವುದೇ ವರ್ಣ ಅಥವಾ ವೃತ್ತಿಯನ್ನು ಮಾಡಲು ಸಾಧ್ಯವಿತ್ತು ಎನ್ನುವುದು ತೀರಾ ಸಹಜ ಮತ್ತು ಸಾಮಾನ್ಯವೆಂಬಂತೆ ಅಥವಾ 'ಜನರಲ್ ರೂಲ್'ನಂತೆ ಇತ್ತೇ ಎನ್ನುವ ಪ್ರಶ್ನೆ ನನ್ನ ಮಟ್ಟಿಗೆ ಉಳಿದೇ ಇದೆ.

ಕನಿಷ್ಠ ಹತ್ತನೇ ಶತಮಾನದವರೆಗೂ ವರ್ಣಗಳ ನಿರ್ಧಾರಕ್ಕೆ ಹುಟ್ಟು ಪ್ರಮುಖ ಮಾನದಂಡವಾಗಿರಲಿಲ್ಲ ಮತ್ತು ವರ್ಣಗಳ/ ವೃತ್ತಿಗಳ ನಡುವೆ ಸಹಜವಾದ, ಸುಲಭವಾದ ಚಲನೆ ಸಾಧ್ಯವಿತ್ತು ಎನ್ನುವುದು ಸಾಧಿತವಾಗದಿದ್ದರೆ ವಚನ ಚಳವಳಿಯ ಕುರಿತಾದ, ರವಿ ಹಂಜ್ ಅವರ ಅತಿ ಮುಖ್ಯವಾದ ಪ್ರತಿಪಾದನೆಯ ತಳಪಾಯ ಗಟ್ಟಿಯಾಗುವುದಿಲ್ಲ. ಯಾಕೆಂದರೆ, 'ಹುಟ್ಟಿನಿಂದ ಜಾತಿ' (ಅಂದರೆ, ನಾನು ಅರ್ಥ ಮಾಡಿಕೊಂಡಂತೆ 'ಹುಟ್ಟು/ ಜಾತಿಯನ್ನು ಆಧರಿಸಿ ವರ್ಣ/ವೃತ್ತಿ') ಎಂಬ ತತ್ತ್ವವನ್ನು ವಿರೋಧಿಸಿದವರು ಬಸವಾದಿ ಶರಣರು ಎಂಬುದು ರವಿ ಹಂಜ್ ಅವರ ವಾದವಾಗಿದೆ. ಈ ವಿರೋಧವೇ ಬಸವಾದಿಗಳ ವಚನ ಚಳವಳಿಯ ತಾತ್ತ್ವಿಕ ಬುನಾದಿ ಎನ್ನುವುದು ಅವರ ತೀರ್ಮಾನ. ಅವರ ಪ್ರಕಾರ ಕಾಯಕ/ ವೃತ್ತಿ ಮತ್ತು ಅರಿವಿನ ಮಟ್ಟದ ಮೇಲೆ ನಿರ್ಧರಿತವಾಗಿತ್ತಿದ್ದ ಜಾತಿಯನ್ನು ಬಸವಣ್ಣಾದಿಗಳು ಬೆಂಬಲಿಸಿದರು. ಹುಟ್ಟಿನಿಂದ ಜಾತಿ ಎಂಬ ನೂತನ ಬದಲಾವಣೆಯನ್ನು ವಿರೋಧಿಸಿದರು. 'ಜಾತಿಯಿಂದ ವೃತ್ತಿ' ಬದಲಿಗೆ 'ವೃತ್ತಿಯಿಂದ ಜಾತಿ' ಎಂಬ ತತ್ತ್ವವನ್ನು ಶರಣರು ಪ್ರತಿಪಾದಿಸಿದರು. ಇದಕ್ಕೆ ಹಂಜ್ ಅವರು ಮುಂದಿಡುವ ಒಂದು ತರ್ಕ ಹೀಗಿದೆ: "ಕ್ಷಿಪ್ರ ಕ್ರಾಂತಿಗಳಿಗೆ ಕ್ಷಿಪ್ರವಾಗಿ ತರಲಾಗುವ ಬದಲಾವಣೆಗಳು ಪ್ರಮುಖ ಕಾರಣವಾಗಿರುತ್ತವೆಯೇ ಹೊರತು ಶತಮಾನಗಳಿಂದ ಆಚರಣೆಯಲ್ಲಿರುವ ಆಚರಣೆಗಳಲ್ಲ. ಹಾಗಾಗಿ ಕಲ್ಯಾಣ ಕ್ರಾಂತಿ ಎಂಬ ಕ್ಷಿಪ್ರ ಕ್ರಾಂತಿ ಉಂಟಾಗಿದ್ದು 'ಹುಟ್ಟಿನಿಂದ ಜಾತಿ' ಎಂಬ ಕ್ಷಿಪ್ರ ಬದಲಾವಣೆಯ ವಿರುದ್ಧ!" (ಪು. 115). 'ವೃತ್ತಿಯಿಂದ ಜಾತಿ'ಯ ನಿಯಮವೇ ಬೇಕೆಂದು 'ಕಾಯಕವೇ ಕೈಲಾಸ'ವೆಂಬ ಉದ್ಘೋಷದೊಂದಿಗೆ ಉಗ್ರವಾಗಿ ಹೋರಾಡಿದಷ್ಟು ಇನ್ಯಾವ ಚಳವಳಿಯೂ ಭಾರತದ ಇತಿಹಾಸದಲ್ಲಿಯೇ ಹೋರಾಡಿಲ್ಲ ಎನ್ನುತ್ತಾರೆ ರವಿ ಹಂಜ್. (ಪು. 116).

ಬಸವಣ್ಣನವರು 'ವೃತ್ತಿಯಿಂದ ಜಾತಿ ಎಂದಾಗಬೇಕು' ಎಂದು ಹೋರಾಟ ಮಾಡಿದುದೋ ಅಥವಾ 'ಭಕ್ತಿಯಿಂದ ಅಥವಾ ಆರಾಧನೆ/ ಉಪಾಸನೆಯಿಂದ ಜಾತಿ ಎಂದಾಗಬೇಕು' ಎಂದು ಹೋರಾಟ ಮಾಡಿದುದೋ? ನನಗೇಕೋ ಎರಡನೆಯದೇ ಸರಿ ಎನಿಸುತ್ತದೆ. ವಚನಗಳ ಬಹುಮುಖ್ಯ ತಾತ್ತ್ವಿಕತೆಗಳು ಎನ್ನಬಹುದಾದ ಶರಣರೊಳಗೆ ಸಮಾನತೆ, ಶರಣರಲ್ಲದವರು ಯಾವ ವೃತ್ತಿಯನ್ನೇ ಮಾಡಿದರೂ ಶರಣರಿಗೆ ಸಮಾನರಲ್ಲವೆಂಬ ತತ್ತ್ವ, ಅನ್ಯದೈವಗಳಿಗೆ ಎರಗಬಾರದು ಎನ್ನುವುದು– ಇವೆಲ್ಲ ತೋರಿಸುವಂತೆ ಇಲ್ಲಿರುವುದು ಒಂದೇ ವೃತ್ತಿ ಮಾಡುವವರು ಸಮಾನರೆಂಬ ತತ್ತ್ವ ಅಲ್ಲ! ಬದಲಾಗಿ ಒಂದೇ ದೇವರನ್ನು ಒಂದೇ ರೀತಿಯಲ್ಲಿ ಆರಾಧಿಸುವವರು, ಉಪಾಸಿಸುವವರು, ಅವರು ಯಾವುದೇ ಪ್ರತ್ಯೇಕ ವೃತ್ತಿಯನ್ನು ಮಾಡಲಿ, ಸಮಾನರು ಎಂಬ ತತ್ತ್ವ. ಬಸವಣ್ಣನವರು ಒಂದು ವಚನದಲ್ಲಿ ಹೇಳುವಂತೆ, "ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬುದು ಹುಸಿ, 'ವರ್ಣಾನಾಂ ಗುರುಃ' ನಮ್ಮ ಕೂಡಲಸಂಗನ ಶರಣರು." ಹಾಗೆಯೇ, ಇನ್ನೊಂದು ವಚನದಲ್ಲಿ ಬಸವಣ್ಣ ಹೇಳಲುತ್ತಾರೆ: "ಜಾತಿಯಲ್ಲದ ಜಾತಿಯ ಕೂಡಿ ಅದರ ಪರಿಯಂತೆ, ಸಂಗವಲ್ಲದ ಸಂಗವ ಮಾಡಿದಡೆ ಭಂಗತಪ್ಪದು, ಕೂಡಲಸಂಗಮದೇವಾ." ಇಲ್ಲಿಯೂ ಲಿಂಗಭಕ್ತರಲ್ಲದವರ ಸಂಗವನ್ನು ಮಾಡಬಾರದು ಎಂದೇ ಬಸವಣ್ಣ ಹೇಳುತ್ತಿರುವುದು.

ಒಟ್ಟಿನಲ್ಲಿ ಇಲ್ಲಿ ವೃತ್ತಿಗಳ ಮೂಲಕ ಒಂದುತನ ಸಾಧಿತವಾಗುವುದಲ್ಲ; ಬದಲಾಗಿ ಭಕ್ತಿಯಿಂದ ಸಾಧಿತವಾಗುವುದು. 'ಕಾಯಕವೇ ಕೈಲಾಸ' ಎಂಬ ಉದ್ಘೋಷವು ಶರಣರು ಮಾಡುವ ಎಲ್ಲ ವೃತ್ತಿಗಳಿಗೂ ಘನತೆ ತರುತ್ತದೆ ಹೊರತು ಶಿವಭಕ್ತರಲ್ಲದವರು ಮಾಡುವ ವೃತ್ತಿಗೆ ಘನತೆ ತರುವುದಿಲ್ಲ!

ಕ್ಷಿಪ್ರ ಬದಲಾವಣೆಗಳೇ ಕ್ಷಿಪ್ರಕ್ರಾಂತಿಗೆ ಕಾರಣ ಎನ್ನುವುದನ್ನು ಒಂದು ತರ್ಕವಾಗಿ ಸ್ವೀಕರಿಸಬಹುದು. ಅದರೆ ಕ್ಷಿಪ್ರ ಎಂದರೆ ಎಷ್ಟು ಕ್ಷಿಪ್ರ ಎನ್ನುವ ಪ್ರಶ್ನೆ ಉಳಿದೇ ಉಳಿಯುತ್ತದೆ. ಯಾಕೆಂದರೆ 'ಜಾತಿಯಿಂದಲೇ/ ಹುಟ್ಟಿನಿಂದಲೇ ವೃತ್ತಿ' ಎನ್ನುವ ಪದ್ಧತಿ ಅಷ್ಟೊಂದು ಕ್ಷಿಪ್ರವಾಗಿ ಬಂದುದು ಎಂದು ಹೇಳಲು ಅಧಾರಗಳು ಸಾಲವು ಎನಿಸುತ್ತದೆ. ಅಲ್ಲದೆ ಆಗ ಕೇವಲ ಜಾತಿಗಳು ಮಾತ್ರ ಇದ್ದುದಲ್ಲ. ಜೈನರು ಸಾಕಷ್ಟು ಪ್ರಭಾವಶಾಲಿಗಳಾಗಿಯೇ ಇದ್ದರು.

ಹಾಗೆಂದು ವಚನ ಚಳವಳಿಯನ್ನು ಕೇವಲ ಸಾಮಾಜಿಕ ಚಳವಳಿ ಎಂದು ಲೇಖಕರು ಪರಿಗಣಿಸುವುದಿಲ್ಲ. ಈಗಾಗಲೇ ಸೂಚಿಸಿದಂತೆ ವಚನಗಳನ್ನು ಭಕ್ತಿಪಂಥದ ಭಾಗವಾಗಿಯೇ ಲೇಖಕರು ಪರಿಗಣಿಸುವುದರಿಂದ ಸಾಮಾಜಿಕ ಸಮಾನತೆಗಾಗಿ ನಡೆಸುವ ಚಳವಳಿಯ ಅಂತಿಮ ಉದ್ದೇಶ ಧಾರ್ಮಿಕ/ ಆಧ್ಯಾತ್ಮಿಕ ಸಮಾನತೆಯೇ. ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ ಆಧ್ಯಾತ್ಮಿಕ ಸಾಧನೆಗೆ ತೊಡಕನ್ನು ಉಂಟುಮಾಡುವ ಸಾಮಾಜಿಕ ಸಂಗತಿಗಳನ್ನು ತೊಡೆದು ಹಾಕಲು ವಚನಚಳವಳಿಯತ್ನಿಸಿತು.

ಧಾರ್ಮಿಕ ಪಂಥವೊಂದು ಸಾಮಾಜಿಕ ಪಂಥವಾಗಿ ರೂಪುಗೊಂಡುದು ವಚನಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ ಎಂದು ರವಿ ಹಂಜ್ ಹೇಳುತ್ತಾರೆ. (ಪು. 116).

*****

ಹತ್ತನೆಯ ಶತಮಾನದ ಮೊದಲು ಅಸ್ಪೃಶ್ಯತೆ ಇರಲಿಲ್ಲ ಎನ್ನುವ ಮಾತನ್ನು

ಒಪ್ಪದವರಿಗೆ ಪಂಪನಲ್ಲಿ ಒಂದು ಅಧಾರ ಸಿಗುತ್ತದೆ. ಹತ್ತನೇ ಶತಮಾನದ ಮೊದಲರ್ಧದಲ್ಲಿ ಪಂಪನು ರಚಿಸಿದ ಆದಿಪುರಾಣದಲ್ಲಿ ಸ್ಪೃಶ್ಯಾಸ್ಪೃಶ್ಯರ ಉಲ್ಲೇಖ ಬರುತ್ತದೆ. ಇದು ಆದಿಪುರಾಣದಲ್ಲಷ್ಟೇ ಅಲ್ಲ; ಪಂಪನಿಗೆ ಮೂಲವಾದ ಜಿನಸೇನರ ಪೂರ್ವಪುರಾಣದಲ್ಲೇ ಇರುವ ಸಾಲು. ಆದಿಪುರಾಣದಲ್ಲಿ ವೃಷಭನು ವರ್ಣಗಳನ್ನು ಸೃಷ್ಟಿ ಮಾಡಿದ ಸಂದರ್ಭವನ್ನು ಹೇಳುವಲ್ಲಿ ಈ ಮುಂದಿನ ಸಾಲುಗಳಿವೆ. "ತನ್ನ ಪಡೆದ ಸಕಲ ಕ್ಷತ್ರಿಯ ವಣಿಕ್ ಶೂದ್ರರೆಂಬ ಮೂರುಂ ವರ್ಣಗಳೊಳಂ ಕ್ಷತತ್ರಾಣಾದಿ ಗುಣೋಪಮೇತಮಪ್ಪ ನಿಖಿಳ ಕ್ಷತ್ರಿಯ ಸಮೂಹಕ್ಕೆ ಶಸ್ತ್ರಕರ್ಮಮುಮಂ, ವಣಿಗ್ವಂಶಕ್ಕೆ ಪಾಶುಪಾಲ್ಯ ಕೃಷಿ – ಪಣ್ಯಕರ್ಮಂಗಳುಮಂ ಸ್ಪೃಶ್ಯಾಸ್ಪೃಶ್ಯಕಾರುಗಳುಮಂದಿರ್ತೆರದ ಶೂದ್ರ ಸಂತತಿಗೆ ಶುಶ್ರೂಷಾನಿಯೋಗಂಗಳುಮಂ ಯಥಾಯೋಗ್ಯಂ ಉಪದೇಶಂಗೆಯ್ದು, ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ ಕೊಡೆಯುಮಂ ನಿಯೋಜಿಸಿ.."(ಆದಿಪುರಾಣಂ, 8–64ರ ನಂತರದ ವಚನ). ಈಗಾಗಲೇ ಹೇಳಿದಂತೆ ಇದು ಪಂಪನ ಸ್ವಂತದ್ದಲ್ಲ; ಒಂಬತ್ತನೇ ಶತಮಾನದ ಪೂರ್ವಾರ್ಧದಲ್ಲಿ ರಚಿತವಾದ ಪೂರ್ವಪುರಾಣದಲ್ಲಿ ಇರುವುದೇ ಆಗಿದ್ದು ಅಲ್ಲಿ ಈ ಕೆಳಗಿನ ಸಾಲುಗಳಿವೆ.

ಕ್ಷತ್ರಿಯಾ ವಣಿಜ ಶೂದ್ರಾಃ ಕ್ಷತ ತ್ರಾಣಾದಿಭಿರ್ಗುಣೈಃ
ಕ್ಷತ್ರಿಯಾ ಶಸ್ತ್ರಜೀವಿತ್ವಮನುಭೂಯ ತದಾಭವನ್
ವೈಶ್ಯಾಶ್ಚ ಕೃಷಿವಾಣಿಜ್ಯ ಪಾಶುಪಾಲ್ಯೋಪಜೀವಿನಃ
ತೇಷಾಂ ಶುಶ್ರೂಷಣಾಚ್ಛೂದ್ರಾಸ್ತೇ ದ್ವಿಧಾ ಕಾರ್ವಕಾರವಃ
ಕಾರವೋ ರಜಕಾದ್ಯಾಃ ಸ್ಯುಸ್ತತೋನ್ಯೇ ಸ್ಯುರಕಾರವಃ
ಕಾರವೋಪಿ ಮತಾದ್ವೇಧಾ ಸ್ಪೃಶ್ಯಾಸ್ಪೃಶ್ಯ ವಿಕಲ್ಪತಃ
ತತ್ರಾಸ್ಪೃಶ್ಯಾಃ ಪ್ರಜಾಬಾಹ್ಯಾಃ ಸ್ಪೃಶ್ಯಾಃ ಸ್ಯುಃ ಕರ್ತಕಾದಯಃ
ಯಾಸ್ವಂ ಸ್ವೋಚಿತಂ ಕರ್ಮ ಪ್ರಜಾ ದಧುರಸಂಕರಂ
ವಿವಾಹಜಾತಿಸಂಬಂಧ ವ್ಯವಹಾರಶ್ಚ ತನ್ಮತಂ
ಯಾವತೀ ಜಗತೋವೃತ್ತಿರಪಾಪೋಪಹತಾ ಚಯಾ
ಸಾ ಸರ್ವಾಸ್ಯ ಮತೇನಾಸೀತ್ ಸ ಹಿ ಧಾತಾ ಸನಾತನಃ (ಪೂ.ಪುರಾಣ, ಸರ್ಗ 16)

ವರ್ಣಸಂಕರವಾಗದಂತೆ ತಮ್ಮದೇ ಹುಟ್ಟಿನ ಜಾತಿಯೊಳಗೆ ವಿವಾಹ ಸಂಬಂಧಗಳಾಗಬೇಕೆಂದು ವೃಷಭನು ವಿಧಿಸಿದ್ದನು ಎನ್ನುವುದು ಪಂಪನ ಮಾತು. ಅಲ್ಲದೆ, ವರ್ಣವು 'ಸಂಕರಗೊಳ್ಳುವುದು' ಎನ್ನುವ ಪರಿಕಲ್ಪನೆಯೇ ಹುಟ್ಟನ್ನು ಅವಗಣಿಸಿದ ಸಂಬಂಧ, ವಿವಾಹಗಳೆಲ್ಲ ಅಷ್ಟೇನೂ ಸಾಮಾನ್ಯವಾಗಿರಲಿಲ್ಲ ಎನ್ನುವುದನ್ನೂ ಸೂಚಿಸುತ್ತದೆ. ಹುಟ್ಟಿನ ಜಾತಿಗಳ ಒಳಗೆಯೇ ವಿವಾಹವಾಗುತ್ತಿದ್ದರೆ ವರ್ಣಗಳ ನಡುವೆ ಚಲನೆಯಿತ್ತು ಎಂಬುದರಿಂದ ಹೆಚ್ಚೇನೂ ಉಪಯೋಗವಿಲ್ಲ! ಅಂದರೆ ಹೊಸತೊಂದು ವೃತ್ತಿಯಿಂದಾಗಿ ಜಾತಿ ಬದಲಾಗುವ ಪ್ರಶ್ನೆ ಅಲ್ಲಿ ಬರುವುದಿಲ್ಲ. ವೃತ್ತಿಯಿಂದ ಜಾತಿ ಬದಲಾಗದಿದ್ದರೆ ವೃತ್ತಿಯಿಂದ ಜಾತಿ ಎನ್ನುವ ತತ್ತ್ವ ಪಾಲನೆಯಾದಂತಾಗದು.

ಆದರೆ ಒಂದು ಗೊಂದಲ ಉಂಟು. ವರ್ಣಗಳ ಸೃಷ್ಟಿ ಮತ್ತು ವರ್ಣಸಂಕರವಾಗದಂತೆ ನೋಡಿಕೊಳ್ಳವ ಬಗ್ಗೆ ಪೂರ್ವಪುರಾಣ ಮತ್ತು ಆದಿಪುರಾಣಗಳಲ್ಲಿ ಬರುವ ಅಂಶಗಳು ಜೈನ ಮತೀಯರೊಳಗಿನ ವಿವಿಧ ವರ್ಣಗಳು ಮತ್ತು ಸ್ಪೃಶ್ಯಾಸ್ಪೃಶ್ಯರೇ ಆಗಿರಬೇಕಲ್ಲ. ಜೈನಮತದ ಹೊರಗಿನವರನ್ನು ವೃಷಭನು ಸೃಷ್ಟಿಸಿರುವ ಸಾಧ್ಯತೆ ಇಲ್ಲ.

ಅಥವಾ ಇಲ್ಲಿ ಅಸ್ಪೃಶ್ಯರು ಜೈನಮತದೊಳಗೆ ಬರುವುದಿಲ್ಲವೇ? ಜಾತಿಭೇದವನ್ನು ಉಳಿಸಿಕೊಂಡಿತ್ತು; ಹೀಗಾಗಿ ಜೈನಮತದಿಂದ ಹೊರಗೆ ಇಡಲ್ಪಟ್ಟಿದ್ದ ಒಕ್ಕಲುಗಳು ಇದ್ದರು ಎಂದು ಕಲ್ಬುರ್ಗಿಯವರು ಹೇಳುತ್ತಾರೆ. ಒಟ್ಟಿನಲ್ಲಿ ಜೈನರೊಳಗೆಯೇ ಆಗಲಿ ಹೊರಗೆಯೇ ಆಗಲಿ, ಸಮಾಜದಲ್ಲಿ ಸ್ಪೃಶ್ಯಾಸ್ಪೃಶ್ಯರ ಕಲ್ಪನೆಯಂತೂ ಒಂಬತ್ತನೇ ಶತಮಾನದಲ್ಲಿಯಾದರೂ ಇದ್ದಿತ್ತು ಎಂದೇ ಹೇಳಬಹುದು.

ಬಸವಣ್ಣನವರು ಶಿವಭಕ್ತ ವಿಪ್ರನ ಮಗನಾಗಿ ಹುಟ್ಟಿದವರು ಎಂಬ ಹೇಳಿಕೆಯನ್ನು ರವಿ ಹಂಜ್ ಒಪ್ಪುವುದಿಲ್ಲ. ಅವರ ಪ್ರಕಾರ ಬಸವಣ್ಣ ನಿಸ್ಸಂಶಯವಾಗಿ ಕಾಳಾಮುಖ ಪರಂಪರೆಯ ಜಂಗಮ. (ಪು.123). "ಹೆಚ್ಚು ಪ್ರಬಲವೆನಿಸುವ ಸಾಕ್ಷ್ಯಗಳು ಬಸವಣ್ಣನನ್ನು ಜಂಗಮ ಎಂದಿರುವಾಗ ಕೇವಲ ಪೌರಾಣಿಕ ರಗಳೆಯ ಆಧಾರದ ಮೇಲೆ ಬಸವಣ್ಣನನ್ನು ಬ್ರಾಹ್ಮಣ ಎನ್ನಲಾಗದು" (ಪು.124). ಸುರೇಂದ್ರನಾಥ ದಾಸಗುಪ್ತರು ಕೂಡ ತಮ್ಮ ಭಾರತೀಯ ತತ್ತ್ವಶಾಸ್ತ್ರದ ಇತಿಹಾಸ ಸಂಪುಟದಲ್ಲಿ ವಚನಗಳು ಪಾಶುಪತ ತತ್ತ್ವಕ್ಕೆ ಹತ್ತಿರ ಎನ್ನುತ್ತಾರೆ ಎನ್ನುವುದನ್ನು ನೆನಪಿಸಿಕೊಳ್ಳಬಹುದು. ಏನಿದ್ದರೂ 'ಬಸವಣ್ಣನವರು ವಿಪ್ರನ ಮಗನಲ್ಲ; ಅವರು ಕಾಳಾಮುಖ ಜಂಗಮ ಎಂದಾಗ ಅವರು ಕಾಳಾಮುಖ ಜಂಗಮರ ಮಗನಾಗಿ ಹುಟ್ಟಿದರು ಎಂದೇ ಗ್ರಹಿಸಬೇಕಾಗುತ್ತದೆ. ಹಾಗಿದ್ದರೆ ಆ ಕಾಲದಲ್ಲಿ 'ಹುಟ್ಟಿನಿಂದ ಜಾತಿ' ಎಂಬುದಿನ್ನೂ ಸರಿಯಾಗಿ ಸ್ಥಾಪಿತವಾಗದೆ ಇದ್ದಾಗ ಕಾಳಾಮುಖ ಜಂಗಮ ಎನ್ನುವುದೊಂದು ಪ್ರತ್ಯೇಕ 'ಜಾತಿ'ಯೇ ಆಗಿತ್ತೇ? ಅಥವಾ ಯಾವ 'ಜಾತಿ'ಯಲ್ಲಿ ಹುಟ್ಟಿದವರೂ ಕಾಳಾಮುಖ ಜಂಗಮರಾಗಬಹುದಿತ್ತೇ ಈಗಿನ ಅಯ್ಯಪ್ಪಸ್ವಾಮಿ ವ್ರತಧಾರಿಗಳ ಹಾಗೆ? ಶಿವಭಕ್ತ ವಪ್ರನೊಬ್ಬ ಕಾಳಾಮುಖ ಜಂಗಮನಾಗುವ ಸಾಧ್ಯತೆ ಇರಲಿಲ್ಲವೆ? ಯಾವ ಜಾತಿಯಲ್ಲಿ ಹುಟ್ಟಿದವರೂ ಜಂಗಮರಾಗಬಹುದಿತ್ತು ಎಂದಾದರೆ ಬಸವಣ್ಣನವರ ತಂದೆತಾಯಿಗಳಿಗೂ ಒಂದು ಜಾತಿ ಇದ್ದಿರಬೇಕಲ್ಲ. ಅದು ಯಾವ ಜಾತಿ ಎಂಬ ಪ್ರಶ್ನೆ ಉಳಿಯುತ್ತದೆ.

ಬಸವಣ್ಣನವರು ತಮ್ಮನ್ನು ಹಾರುವ ಎಂದು ಕರೆದುಕೊಂಡಿರುವ ಎರಡು ವಚನಗಳನ್ನು ರವಿ ಹಂಜ್ ಅವಲೋಕಿಸುತ್ತಾರೆ.

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ.
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ,
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ.

ಇನ್ನೊಂದು ವಚನ 'ಸೆಟ್ಟಿಯೆಂಬೆನೆ ಸಿರಿಯಾಳನ, ಮಡಿವಾಳನೆಂಬೆನೆ ಮಾಚಯ್ಯನ ಎಂದು ಆರಂಭವಾಗಿ ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ' ಎಂದು ಕೊನೆಯಾಗುವ ವಚನ. ಬ್ರಾಹ್ಮಣರನ್ನು ಉದ್ದೇಶಿಸಿ ಬಸವಣ್ಣನು ನೀವು ಹಾಗೆ ನುಡಿಯದೆ ಹೀಗೆ ಬ್ರಾಹ್ಮಣರಾಗಿದ್ದೇವೆ ಎಂದು ನುಡಿಯಿರಿ ಎಂದು ಸೂಚ್ಯವಾಗಿ ಹೇಳಿರುವ ಸಾಧ್ಯತೆಯೂ ಇದೆ ಎಂದು ಮುಂತಾಗಿ ಹೇಳಿ ಈ ಎರಡೂ ವಚನಗಳಲ್ಲಿ ಬಸವಣ್ಣನು ತನ್ನನ್ನೇ ಉದ್ದೇಶಿಸಿ ಹೇಳಿಕೊಂಡಿದ್ದಾನೆ ಎಂದು ಹೇಳಲಾಗದು ಎಂದು ಲೇಖಕರು ಪ್ರತಿಪಾದಿಸುತ್ತಾರೆ. (ಪು.127). ಆದರೆ ತನ್ನನ್ನೇ ಉದ್ದೇಶಿಸಿ ಬಸವಣ್ಣ

ಹೇಳಿದ್ದಲ್ಲ ಎನ್ನಲು ಲೇಖಕರು ನೀಡುವ ಈ ಕಾರಣಗಳು ತೃಪ್ತಿಕರ ಎನಿಸುವುದಿಲ್ಲ. ಮುಂದುವರಿದು ರವಿ ಹಂಜ್ ಹೀಗೆ ಹೇಳುತ್ತಾರೆ: "...ಬಸವನು ಜಂಗಮ, ಬ್ರಾಹ್ಮಣ, ಮಾದಾರ ಅಲ್ಲದೆ ಈ ಶಾಸನದಲ್ಲಿ ಹಾಲುಬಸವಿದೇವನೆಂದಿದೆಯೆಂದು ಅವನು ಹಾಲುಮತದವನೆಂದೋ ದಂಣಾಯಕ ಪದವಿದೆಯೆಂದು ಬೇಡರ ನಾಯಕ ಪಡೆಯವನೆಂದೋ ಮತ್ತೊಂದೆಂದೋ ಜಾತಿಯವನೆನ್ನುವುದು ಅರ್ಥಹೀನ. ಏಕೆಂದರೆ ಅವನು ಹುಟ್ಟಿದ ಕಾಲಘಟ್ಟದಲ್ಲಿ ಜಾತಿಯು ಹುಟ್ಟಿನಿಂದ ನಿರ್ಧಾರವಾಗುತ್ತಲೇ ಇರಲಿಲ್ಲ!" (ಪು. 128). ಬಸವಣ್ಣರಂಥವರನ್ನು ಜಾತಿಗೆ ಅಂಟಿಸುವುದು ಸರಿಯಲ್ಲವೆನ್ನುವ ಲೇಖಕರ ಮಾತು ಒಪ್ಪಬೇಕಾದದ್ದೆ. ಆದರೆ ಯಾವ ಜಾತಿಯಲ್ಲಿ ಹುಟ್ಟಿದ ಎಂದು ಸಂಶೋಧನೆ ಮಾಡಬಾರದು ಎಂದೇನಿಲ್ಲ.

ಮೇಲೆ ಉದ್ಧರಿಸಿದ ವಚನದಲ್ಲಿ ಬಸವಣ್ಣನವರು ತಮ್ಮ ಸಮಕಾಲೀನ ಹಾರುವರಿಗೇ ಹೇಳುತ್ತಿದ್ದಾರೆ ಎಂದಾದರೂ ಕೂಡ, ಕೂಡಲಸಂಗಮದೇವನು ಶರಣನಲ್ಲದ ಅಶುದ್ಧನಾದ ವಿಪ್ರಕರ್ಮವನ್ನು ಮಾಡುವವನನ್ನು ಶುದ್ಧನನ್ನಾಗಿ ಮಾಡುತ್ತಾನೆ ಎಂದಾಗುತ್ತದೆ. ಅಂದ ಬಳಿಕ ಅಶುದ್ಧರಾಗಿರುವ ವಿಪ್ರರು ಬಸವಣ್ಣನವರು ಹುಟ್ಟಿದ ಕಾಲಘಟ್ಟದಲ್ಲಿ ಕೂಡ ಇದ್ದರು ಅಂತಲೇ ಆಗುತ್ತದೆ. ಅಂತಹ ಅಶುದ್ಧ ವಿಪ್ರರು ಹುಟ್ಟಿನಿಂದ ವಿಪ್ರರಾಗಿರದೆ ಕರ್ಮದಿಂದ ಮಾತ್ರ ವಿಪ್ರರಾಗಿದ್ದವರು ಎನ್ನಲು ಲೇಖಕರು ನೀಡುವ ಸಾಕ್ಷ್ಯ ಸಾಕಾಗುವುದಿಲ್ಲ. ಅಷ್ಟೇ ಅಲ್ಲ; ಹುಟ್ಟಿನಿಂದಲ್ಲದೆ ಕರ್ಮದಿಂದ ವಿಪ್ರರಾದವರನ್ನು ಬಸವಣ್ಣನವರು ಬೈಯುವ ಸಾಧ್ಯತೆಯೂ ತಾತ್ತ್ವಿಕವಾಗಿ ನೋಡಿದರೆ ಕಡಿಮೆಯೇ. ಯಾಕೆಂದರೆ ಆ ವಿಪ್ರರು ಆಗ 'ಹುಟ್ಟಿನಿಂದ ಜಾತಿ' ಎಂಬ ನೆಲೆಯಿಂದ ವಿಪ್ರರಾದವರು ಅಲ್ಲ; ಬದಲಾಗಿ ವೃತ್ತಿಯಿಂದ ಜಾತಿ ಎಂಬ ಬಸವಣ್ಣನವರ ತತ್ತ್ವದಂತೆ ಆಗಿದ್ದವರು ತಾನೆ?! ಹೀಗಾಗಿ ಒಟ್ಟಿನಲ್ಲಿ 'ಹುಟ್ಟಿನಿಂದ ಜಾತಿ ನಿರ್ಧಾರವಾಗುತ್ತಿರಲಿಲ್ಲ' ಎನ್ನುವ ಹೇಳಿಕೆ ಮತ್ತೊಮ್ಮೆ ನಮ್ಮನ್ನು ಗೊಂದಲಕ್ಕೆ ದೂಡುತ್ತದೆ.

ಬಸವಣ್ಣನವರು ತಮ್ಮ ಹುಟ್ಟಿನ ಜಾತಿಯನ್ನು 'ಸೂಚಿಸಿದ' ಬೇರೆ ವಚನಗಳೂ ಇವೆ. ಅಂತಹ ಕೆಲವನ್ನು ಗಮನಿಸಬಹುದು.

"ಕಷ್ಟಜಾತಿ ಜನ್ಮದಲಿ ಜನಿಯಿಸಿದೆ ಎನ್ನ,
ಎನಗಿದು ವಿಧಿಯೆ ಕೂಡಲಸಂಗಮದೇವಾ"
"ಉತ್ತಮಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯಾ ಶಿವದಾನವನೆರೆಯ ನೋಡಯ್ಯಾ,
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ,
ಕೂಡಲಸಂಗಮದೇವಾ, ಶಿವಧೋ ಶಿವಧೋ"
"ಅಂದೇಕೆ ಬಾರರು
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ"

“ಹಾರುವ ಹಾರುವನಪ್ಪೆ ನಾನು, ಸದ್ಭಕ್ತರೆನ್ನವರೆನ್ನವರೆಂದು
ಹಾರು[ವೆ] ಹಾರು[ವೆ]ನವ್ವಾ ನಾನು, ಶರಣರು ಎನ್ನವರೆನ್ನವರೆನ್ನವರೆಂದು,
ಕೂಡಲಸಂಗನ ಶರಣರು ಒಕ್ಕುದನಿಕ್ಕಿ ಸಲಹುವರೆಂದು.”
“ಕದ್ದ ಕಳ್ಳನ ಬಿಟ್ಟಮಂಡೆಯ ಹಿಡಿದು,
ಹುಡುಕು ನೀರೊಳಗದ್ದುವಂತೆ ಮುಳುಗಲಾರೆನು, ಹಿಂಡಲಾರೆನು.
ಹಿಂಗಿದೆನಯ್ಯಾ ಎಲ್ಲ ಹಾರುವ ಕುಲವನು,
ಮುಳುಗುವನ ಕೈಯ ಹಿಡಿದೆತ್ತಿದ
ನಮ್ಮ ನಮ್ಮ ಕೂಡಲಸಂಗಮದೇವ.”
ಇವಲ್ಲದೆ, ಇನ್ನೊಂದು ವಚನ ಕೂಡ ಮುಖ್ಯವಾಗಿದೆ. ಅದು ಹೀಗಿದೆ:
“ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.”

ಈ ಮೇಲಿನ ವಚನವು ಬಹುಶಃ “ಇವನು ಹಾರವ, ಇವನು ಹಾರವ ಎಂದೆನಿಸದಿರಯ್ಯಾ” ಎಂದಿದ್ದಿರಬೇಕು. ಬರಹರೂಪದಲ್ಲಿ ದಾಖಲಾಗುವಾಗ ಅದು ‘ಇವನಾರವ’ ಅಂತಾಗಿದೆ. ಬಸವಣ್ಣನವರು ವಚನಗಳಲ್ಲಿ ಬ್ರಾಹ್ಮಣ ಎಂಬರ್ಥದಲ್ಲಿ ಹೆಚ್ಚಾಗಿ ಉಪಯೋಗಿಸುವುದು ಹಾರುವ/ ಹಾರವ ಎನ್ನುವ ಪದವನ್ನು. ‘ಇವನು ಯಾರು’ ಎಂಬರ್ಥದಲ್ಲಿ ಬಸವಣ್ಣವನರು ಈ ವಚನವನ್ನು ಹೇಳಿದ್ದಾರೆಂದೇ ಇದನ್ನು ಅರ್ಥೈಸಲಾಗುತ್ತದೆ. ಆದರೆ, ಯಾರು ಎಂಬುದಕ್ಕೆ ‘ಆರವ’ ಎಂಬ ಪ್ರಯೋಗ ವಚನಗಳಲ್ಲಾಗಲೀ ವಚನಗಳ ಕಾಲದ ಇತರ ರಚನೆಗಳಲ್ಲಾಗಲೀ ಬಹುಶಃ ಕಾಣುವುದಿಲ್ಲ. ಯಾರು ಎನ್ನುವ ಅರ್ಥದಲ್ಲಿ ‘ಆರ್ಗೆ’ ಎಂಬ ಪ್ರಯೋಗವಾದರೆ ಹಿಂದೆ ಇತ್ತು. ಅಲ್ಲದೆ ಇಡೀ ವಚನದ ಅರ್ಥವನ್ನು ಗ್ರಹಿಸಿದರೆ, ಬ್ರಾಹ್ಮಣ ಎಂದು ತನ್ನನ್ನು ದೂರ ಮಾಡದಂತೆ ಮಾಡು ಎಂದೇ ಬಸವಣ್ಣ ಕೂಡಲಸಂಗಮದೇವನನ್ನು ಇಲ್ಲಿ ಬೇಡುತ್ತಿರುವುದೆಂದು ತೋರುತ್ತದೆ. ಅಲ್ಲದೆ ಬಸವಣ್ಣನವರ ವಚನಗಳನ್ನು ನೋಡಿದರೆ ಅವರನ್ನು ಇತರರು ದೂರ ಮಾಡುತ್ತಿದ್ದುದು ಅವರ ಕಷ್ಟ ಜಾತಿಯ ಕಾರಣದಿಂದ. ಬ್ರಾಹ್ಮಣನೆಂಬ ಉತ್ತಮ ಕುಲದ ಕಾರಣದಿಂದಲೇ ಕಕ್ಕಯ್ಯನು ಒಕ್ಕುದನಿಕ್ಕದಿರುವುದು! ಹೀಗಾಗಿಯೇ ಚೆನ್ನಯ್ಯ ಕಕ್ಕಯ್ಯರಂಥವರ ಜೊತೆಗೆ ತಾನು ಗುರುತಿಸಿಕೊಳ್ಳುವಂತಾಗಲು ಮತ್ತು ಶರಣರೆಲ್ಲ ಒಂದೇ ಜಾತಿ ಅಂತಾಗಲು “ಚೆನ್ನಯ್ಯನ ಮನೆಯ ದಾಸನ ಮಗನು ಮತ್ತು ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲ್ಲಿ ಹೋಗಿ ಸಂಗವ ಮಾಡಿದರು; ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮದೇವನ ಸಾಕ್ಷಿಯಾಗಿ” ಎಂದು ಬಸವಣ್ಣ ಹೇಳಿಕೊಂಡಿರುವುದು.

ಒಟ್ಟಿನಲ್ಲಿ ಬಸವಣ್ಣನವರು ಹುಟ್ಟಿದ ಕಾಲಘಟ್ಟದಲ್ಲಿ ಹುಟ್ಟಿನಿಂದ ಜಾತಿ ನಿರ್ಧಾರವಾಗುತ್ತಿರಲಿಲ್ಲ ಎನ್ನುವ ಹೇಳಿಕೆಯೇ ಸಂದೇಹಾಸ್ಪದವಾದ್ದರಿಂದ ಬಸವಣ್ಣರು ಹುಟ್ಟಿದ ಜಾತಿಯ ಕುರಿತ ತೀರ್ಮಾನವೂ ಚರ್ಚಾರ್ಹವೇ ಆಗಿದೆ.

******

ವರ್ತಮಾನ ಕಾಲದಲ್ಲಿ ಬಸವರಾಜಕಾರಣವು ಹೇಗೆ ನಡೆಯುತ್ತಿದೆ ಎಂಬುದನ್ನು

ಹೇಳಲು ನ್ಯಾ. ನಾಗಮೋಹನದಾಸ್ ನೇತೃತ್ವದ ಸಮಿತಿಯು ಹೇಳಿದ ಅಂಶಗಳನ್ನು ರವಿ ಹಂಜ್ ಅವಲೋಕಿಸುತ್ತಾರೆ. ಈ ಭಾಗದಲ್ಲಿ ಮುಖ್ಯವಾಗಿ ವರ್ತಮಾನಕಾದ ಕನ್ನಡ ಸಂಶೋಧನ ಕ್ಷೇತ್ರದ ದುಸ್ಥಿತಿಯನ್ನು ಲೇಖಕರು ಅನಾವರಣ ಮಾಡುತ್ತಾರೆ.

ಲಿಂಗಾಯತವೆನ್ನುವುದು ಬೇರೆಯೆ ಧರ್ಮ ಎಂದು ತೀರ್ಮಾನಿಸಿದ ನ್ಯಾ. ನಾಗಮೋಹನ ದಾಸ್ ಸಮಿತಿಯ ನಿರ್ಣಯವನ್ನು ಲೇಖಕರು ಸಾಧಾರವಾಗಿ ಕಾರಣಸಹಿತ ಪ್ರಶ್ನೆ ಮಾಡುತ್ತಾರೆ. "ಇಷ್ಟಲಿಂಗ ಕಟ್ಟುವ ಸಂಪ್ರದಾಯವನ್ನು ಬಸವಣ್ಣನವರು ಹುಟ್ಟುಹಾಕಿದ್ದರೆ, ಬಸವಣ್ಣನವರನ್ನು ಭೇಟಿ ಮಡುವ ಮೊದಲೇ ಲಿಂಗವು ಅಲ್ಲಮನ ಎಎಗೆ ಹೇಗೆ ಏರಿತ್ತು? ಕಾಳಾಮುಖ ಯಾ ವೀರಶೈವ ಪರಂಪರೆ ಮೊದಲಿನಿಂದಲೂ ಕೊರಳಿಗೆ ಇಷ್ಟಲಿಂಗ ಕಟ್ಟುವ ಸಂಪ್ರದಾಯವನ್ನು ಪಾಲಿಸುತ್ತಿದ್ದಾಗ ಬಸವಣ್ಣನವರೇ ಇಷ್ಟಲಿಂಗ ಕಟ್ಟುವ ಸಂಪ್ರದಾಯವನ್ನು ಕಂಡುಹಿಡಿದರು ಎಂದು ಹೇಗೆ ಹೇಳಲಾಗುತ್ತದೆ?" ಎಂದು ಹಂಜ್ ಕೇಳುತ್ತಾರೆ. (ಪು. 206).

ಕನ್ನಡದ ಬಹು ಮಾನ್ಯರಾದ ಸಂಶೋಧಕರು ಮತ್ತು ವಚನಗಳ ಮಟ್ಟಿಗೆ ಅತಿದೊಡ್ಡ ತಜ್ಞರು ಎನಿಸಿಕೊಂಡ ಎಂ.ಎಂ. ಕಲ್ಬುರ್ಗಿಯವರು ಭ್ರಮಾತ್ಮಕ ತೀರ್ಮಾನಗಳಿಗೆ ಬಂದ ಬಗ್ಗೆ ರವಿ ಹಂಜ್ ಉಲ್ಲೇಖಿಸುತ್ತಾರೆ. (ಪು. 216). ಅದೇರೀತಿ, ಶರಣ ಜಂಗಮರದು ಅದ್ವೈತವಾದರೆ, ಆಚಾರ್ಯ ಜಂಗಮರದು ದ್ವೈತವಾಗಿದೆ ಎನ್ನು ಕಲ್ಬುರ್ಗಿಯವರ ಹೇಳಿಕೆಯನ್ನು ಆಧಾರಸಹಿತವಾಗಿಯೇ ಪ್ರಶ್ನಿಸುತ್ತಾರೆ. (ಪು. 217).

ವೀರಶೈವ ಪದವನ್ನು ವಚನಗಳಲ್ಲಿ ನಂತರದ ಕಾಲದಲ್ಲಿ ತುರುಕಲಾಗಿದೆ ಎಂಬ ವಾದದ ಬಗ್ಗೆ ಲೇಖಕರು ಹೀಗೆ ಹೇಳುತ್ತಾರೆ: "ಪ್ರೊ. ಕಲ್ಬುರ್ಗಿಯವರು ವೇರಶೈವ ಎಂಬ ಪದ ಬಳಕೆಯಾಗಿರುವ ಬಸವ, ಅಲ್ಲಮ, ಅಕ್ಕನ ವಚನಗಳನ್ನು ಪ್ರಕ್ಷೇಪ ವಚನಗಳೆಂದು ತಿರಸ್ಕರಿಸುತ್ತಾರೆ. ಆದರೆ ಅವು ಏಕೆ ಪ್ರಕ್ಷೇಪ ಎನ್ನಲು ಸಮರ್ಥ ಕಾರಣಗಳನ್ನು ಕೊಡುವುದಿಲ್ಲ. ಅದಲ್ಲದೆ ಲಿಂಗಾಯತ ಎಂಬ ಪದಬಳಕೆಉ ವಚನಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವುದಕ್ಕೆ ಸಹ ಅವರು ಯಾವುದೇ ಸಮಜಾಯಿಷಿ ಕೊಟ್ಟಿಲ್ಲ. ಆದರೆ ಹೀಗಿದ್ದೂ ವೀರಶೈವ ಎಂದಿರುವ ಎಲ್ಲ ಪ್ರಕ್ಷಿಪ್ತ ವಚನಗಳನ್ನು ಇವರ ಸಂಪಾದಕತ್ವದಲ್ಲೆ ಅಧಿಕೃತವಾಗಿ ಪ್ರಕಟಿಸಲಾಗಿದೆ." (ಪು. 211). ಪ್ರೊ. ಕಲ್ಬುರ್ಗಿಯವರು ತಮಗೆ ಬೇಕಾದಂತೆ ಆಯ್ದ ಆಕರಗಳ ಮೂಲಕ ತೀರ್ಮಾನಕ್ಕೆ ಬರುತ್ತಾರೆ ಎಂಬ ಅಂಶವನ್ನು ರವಿ ಹಂಜ್ ಮುಖ್ಯವಾಗಿ ಓದುಗರ ಗಮನಕ್ಕೆ ತರುತ್ತಾರೆ. (ಪು. 212–216).

ತಾವೊಬ್ಬ ಹವ್ಯಾಸಿ ಕುತೂಹಲಿ ಎಂದು ಕರೆದುಕೊಳ್ಳುವ ರವಿ ಹಂಜ್ ಅವರು ಪ್ರೊ. ಕಲ್ಬುರ್ಗಿಯವರೂ ಸೇರಿದಂತೆ ಕನ್ನಡದ ಕೆಲವು ಸಂಶೋಧಕರ ಸಂಶೋಧನೆಗಳನ್ನು ಮಾತ್ರ ಪ್ರಶ್ನಿಸುತ್ತಿಲ್ಲ; ಬದಲಾಗಿ ಸಂಶೋಧನೆಯ ಬಗೆಗಿನ ಅಥವಾ ಸತ್ಯಶೋಧನೆಯ ಕಡೆಗಿನ ಬದ್ಧತೆ ಅಥವಾ ನಿಷ್ಠೆಯನ್ನೇ ತಮ್ಮ ಆಧಾರಗಳ ಮೂಲಕ ಪ್ರಶ್ನಿಸುತ್ತಿದ್ದಾರೆ. ಒಟ್ಟಾರೆಯಾಗಿ ಕನ್ನಡದ ಸಂಶೋಧನ ಕ್ಷೇತ್ರದ ಬಗ್ಗೆ ರವಿ ಹಂಜ್ ಬರೆಯುವ ಷರಾ ಹೀಗಿದೆ. ಇದನ್ನು ಸ್ವಲ್ಪ ದೀರ್ಘವಾಗಿಯೇ ಉಲ್ಲೇಖಿಸಬೇಕು.

"ಹೀಗೆ ಒಂದು ಖಚಿತ ತಾರ್ಕಿಕ ನಿಲುವನ್ನು ತೋರದೆ, ಒಂದೊಮ್ಮೆ ಪ್ರಕ್ಷೇಪವೆಂದು ಮತ್ತೊಮ್ಮೆ ಅಪೇಕ್ಷೆ ಪಟ್ಟು ನಿಕ್ಷೇಪವಾಗಿಸುವ ಗೊಂದಲದ ಸಂಶೋಧನೆಯ ಹಲವಾರು ಸಂಶೋಧಕರನ್ನು ಅತ್ಯಂತ ಗೌರವಾನ್ವಿತ ಸಂಶೋಧಕರೆಂದು ಶೈಕ್ಷಣಿಕ ವಲಯ,

ಸಮಾಜ ಮತ್ತು ಸರ್ಕಾರಗಳು ಮಾನ್ಯ ಮಾಡಿರುವ ಸಾಕಷ್ಟು ನಿದರ್ಶನವಿರುವಾಗ ಅಂತಹ ಪ್ರಕ್ಷೇಪಾಕ್ಷೇಪನಿಕ್ಷೇಪ ಸಂಶೋಧನ ಶಿಸ್ತನ್ನು ಅಳವಡಿಸಿಕೊಂಡಿರುವ ಗಣನೀಯ ಸಂಖ್ಯೆಯಲ್ಲಿರುವ ಶಿಷ್ಯಗಣ ಸಂಶೋಧಕರ ಒಂದು ಇಡೀ ತಲೆಮಾರನ್ನು ನಂಬುವುದೆಂತು? ಎಂಬ ಪ್ರಶ್ನೆ ಯಾವುದೇ ತಾರ್ಕಿಕ ಸಿದ್ಧಾಂತದ ಸಂಶೋಧಕನನ್ನು ಬಿಡಿ, ನನ್ನಂತಹ ಹವ್ಯಾಸಿ ಕುತೂಹಲಿಗೆ ಸಹ ತೀವ್ರವಾಗಿ ಕಾಡಲಾರಂಭಿಸುತ್ತದೆ. ಹಾಗಾಗಿ ಒಬ್ಬ ಸಂಶೋಧಕನು ಉತ್ಪ್ರೇಕ್ಷೆಗಳ ತೆಗೆದು ಯಥಾರ್ಥವನ್ನು ಮಂಡಿಸಿ ಕೃತಾರ್ಥನಾಗುವ ತುರ್ತು ಇಂದು ಭಾರತದಲ್ಲಿ ಅತ್ಯಂತ ಅವಶ್ಯವಾಗಿದೆ.

ಇನ್ನು ಇಂತಹ ಅಪೇಕ್ಷಿತ ಆಕರಗಳನ್ನಷ್ಟೇ ಪರಿಗಣಿಸಿದ ಮುಖ್ಯಮಂತ್ರಿಗಳ ಲಿಂಗಾಯತ ಪ್ರತ್ಯೇಕ ಧರ್ಮ ಸಮಿತಿಯ ಸದಸ್ಯರುಗಳ ವೃತ್ತಿಪರತೆಯಲ್ಲಿರಬೇಕಿದ್ದ ತರ್ಕ, ನ್ಯಾಯಸೂತ್ರ, ಅನ್ವೇಷಣಾ ತಂತ್ರ, ನಿರಪೇಕ್ಷ ಮನೋಭಾವ, ವಿಶ್ಲೇಷಣಸೂತ್ರಗಳು ಶೂನ್ಯವಾಗಿ ಸಮಿತಿಯು ಪೀಠವನ್ನು ಅಲಂಕರಿಸಿ ಶೂನ್ಯವನ್ನು ಸಂಪಾದಿಸಿದೆ.

ಈ ಸಂಶೋಧನೆಗೆ ವಚನಗಳೇ ಬಹುಪಾಲು ಆಧಾರವಾಗಿರುವಾಗ ಇಂತಹ ಅಧಿಕೃತ ಕನಿಷ್ಠ ಅಂಕಿ ಅಂಶಗಳನ್ನೇ ಕೆದಕದ ಈ ಸಮಿತಿಯಲ್ಲಿದ್ದ ಖ್ಯಾತ ನಿವೃತ್ತ ನ್ಯಾಯಾಧೀಶರು, ಸಂಶೋಧನ ಹಿನ್ನೆಲೆಯ ಪ್ರಾಧ್ಯಾಪಕರು, ತನಿಖಾ ವಿಶ್ಲೇಷಣಾ ವರದಿಗಾರ ತಜ್ಞ ಪತ್ರಕರ್ತರು ಅವರವರ ವೃತ್ತಿಗಳಲ್ಲಿ ಈವರೆಗೆ ಕೈಗೊಂಡ ನ್ಯಾಯನಿರ್ಣಯ, ಸಂಶೋಧನೆಗಳು ಮತ್ತು ತನಿಖಾ ವರದಿಗಳು ಎಷ್ಟರಮಟ್ಟಿಗೆ ಸತ್ಯನಿಷ್ಠೆಯಿಂದ ಕೂಡಿದ್ದವು ಎಂಬ ಧನಾ(ಋಣಾ)ತ್ಮಕ ಸಂಶಯವನ್ನು ಸಹಜವಾಗಿ ಮೂಡಿಸುತ್ತವೆ!...” (ಪು.223).

ಸಂಶೋಧನೆಯ ಘನ ಗಂಭೀರ ಭಾಷೆಯ ಬದಲಿಗೆ ತುಸುವೇ ವಿಡಂಬನೆಯೊಂದಿಗೆ ಪದಗಳನ್ನು ಎಗ್ಗಿಲ್ಲದೆ ಹಂಜ್ ಬಳಸುತ್ತಾರೆ. ಮೇಲಿನ ಉದ್ಧರಣೆಯಲ್ಲೂ ಅದು ಕಂಡೀತು. ಅವರ ಈ ಶೈಲಿ ಕೇವಲ ಕುತೂಹಲಿಯಾಗಿ ಸಾಮಾನ್ಯಜ್ಞಾನ ಮತ್ತು ತರ್ಕವನ್ನು ಅವಲಂಬಿಸಿದ್ದೇನೆ ಎಂದು ಹೇಳಿಕೊಳ್ಳುವ ಅವರ ವಾದಕ್ರಮಕ್ಕೆ ಸೂಕ್ತವೇ ಆಗಿದೆ!

ಕನ್ನಡ ಭಾಷೆಯಲ್ಲಿ ಸಂಶೋಧನ ಲೇಖನಗಳನ್ನು ಬರೆಯುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿರುವ ನಾವೆಲ್ಲ ಮುಟ್ಟಿ ನೋಡಿಕೊಳ್ಳುವಂತೆ ಬರೆದಿರುವ ಈ ಮೇಲಿನ ಸಾಲುಗಳಿಂದ ಪ್ರಚೋದನೆಗೊಳಗಾಗಿ ಇನ್ನಾದರೂ ‘ಬಸವರಾಜಕಾರಣ’ ಕೃತಿಯ ನೆಪದಲ್ಲಿ ಮತ್ತು ಅದರ ಹಿನ್ನೆಲೆಯಲ್ಲಿ, ವಚನಗಳಿಗಷ್ಟೇ ಅಲ್ಲ; ಇನ್ನಿತರ ವಿಚಾರಗಳಿಗೆ ಸಂಬಂಧಿಸಿದಂತೆ ಕೂಡ ಕನ್ನಡ ಸಾಂಸ್ಕೃತಿಕ ಜಗತ್ತಿನ ಇದುವರೆಗಿನ ಎಷ್ಟೋ ತೀರ್ಮಾನಗಳನ್ನು ಮತ್ತೊಮ್ಮೆ ಯಾರಾದರೂ ಒರೆಗೆ ಹಚ್ಚುತ್ತಾರೆಯೇ ಎಂದು ಕಾಯಬೇಕಿದೆ. ಹಾಗೆ ಒರೆಗೆ ಹಚ್ಚುವ ಮೂಲಕ ರವಿ ಹಂಜ್ ಎಂಬ ಸಂಶೋಧಕನಲ್ಲದ ಕೇವಲ ಕುತೂಹಲಿ ತೆಗೆಯುತ್ತಿರುವ ಕನ್ನಡ ಸಂಶೋಧನೆಯ ಮರ್ಯಾದೆಯನ್ನು ನಾವು ಉಳಿಸಿಕೊಳ್ಳುತ್ತೇವೋ ಎಂದು ನೋಡಬೇಕಿದೆ!

❖❖❖

ಕನ್ನಡ ಕಾವ್ಯ ಪರಂಪರೆ : ವಸ್ತು ಮತ್ತು ಆಶಯ

ಡಾ. ಲಕ್ಷ್ಮೀಕಾಂತ ಪಂಚಾಳ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಂಪೂರ, ತಾ.ಜಿ. ಬಾಗಲಕೋಟೆ–587207

ಮಾನವ ವಿಕಾಸ ಕ್ರಮದಲ್ಲಿ ಭಾಷೆಯ ಆವಿಷ್ಕಾರ ಒಂದು ಅದ್ಭುತವಾದ ಘಟನೆ. ತನ್ನ ಜೀವನದ ಆಗು–ಹೋಗುಗಳನ್ನು ಶಿಲ್ಪ, ಸಂಗೀತ, ನಾಟ್ಯ, ಕಲೆ, ಸಾಹಿತ್ಯ ಮೊದಲಾದ ಕಲಾಮಾಧ್ಯಮಗಳ ಮೂಲಕ ಅಭಿವ್ಯಕ್ತಿಯಲ್ಲಿ ತೊಡಗಿದ. ಹಾಗೇ ಸಾಹಿತ್ಯವೂ ಕೂಡ ಒಂದು ಸಶಕ್ತವಾದ ಅಭಿವ್ಯಕ್ತಿ ಮಾಧ್ಯಮವಾಗಿದೆ. ಸಾಹಿತ್ಯ ಎಂಬುದು ಜೀವನದ ಗತಿಬಿಂಬ; ಪ್ರತಿಬಿಂಬ ಎಂದು ವಿದ್ವಾಂಸರು ದಾಖಲಿಸಿದ್ದಾರೆ.

ಬದುಕು ನಿಂತ ನೀರಲ್ಲ; ಅದು ಹರಿಯುತ್ತಿರುವ ನದಿಯಂತೆ, ಸಾಹಿತ್ಯವೂ ಕೂಡ ನಿತ್ಯನೂತನವಾಗಿ ಸದಾ ಹರಿಯುತ್ತಿರುವ ಜೀವ ನದಿಯಂತೆ, ಬದಲಾಗುವ ಬದುಕಿನ ಸಂಕ್ರಮಣಗಳಿಗೆ ಮನಸ್ಸು ತೆರೆದುಕೊಳ್ಳವುದರಿಂದ ಸಾಹಿತ್ಯ ಚರಿತ್ರೆಯು ಘಟ್ಟಗಳಲ್ಲಿ ರೂಪುಗೊಳ್ಳುತ್ತದೆ. ಇದು ಅಂದಿನ ಸಾಹಿತ್ಯ ರಚನೆಯ ಏಳು–ಬೀಳಿನ ದೃಷ್ಟಿ–ಧೋರಣೆಯನ್ನು ಮಾತ್ರ ಹೇಳದೇ ಬದಲಾದ ಆಯಾಯ ಯುಗಮನೋಧರ್ಮದ ಸಮಗ್ರ ಸಮಾಜದ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

ಜಗತ್ತಿನ ಪ್ರತಿಯೊಂದು ಭಾಷೆಯು ತನ್ನದೆ ಆದ ಸಾಹಿತ್ಯಕಇತಿಹಾಸವನ್ನು ಹೊಂದಿರುತ್ತದೆ. ಅದಕ್ಕೆ ಕನ್ನಡ ಭಾಷೆಯು ಹೊರತಲ್ಲ. ಕನ್ನಡ ಭಾಷೆ, ಸಾಹಿತ್ಯದ ಇತಿಹಾಸವನ್ನು ಮಹಾಭಾರತ, ರಾಮಾಯಣ, ಪುರಾಣ ಕಾವ್ಯಗಳಲ್ಲಿ ಗುರುತಿಸುವ ಪ್ರಯತ್ನಗಳು ನಡೆದಿವೆ. ನಂತರದ ಅವಧಿಯಲ್ಲಿ ಕಲ್ಬರಹಗಳು ಶಾಶ್ವತವಾದ ದಾಖಲೆಗಳಾಗಿ ನಮ್ಮೊಂದಿಗಿವೆ. ಕ್ರಿ.ಪೂ. 3ನೇ ಶತಮಾನದ ಅಶೋಕ ಚಕ್ರವರ್ತಿಯ ಕಾಲದಲ್ಲಿ ಶಾಸನಗಳಲ್ಲಿ ಸಿಗುವ ಪದಗಳು ಕನ್ನಡ ಭಾಷೆಯ ಆರಂಭದ ಪದಗಳು ಎಂದು ಗುರುತಿಸುವ ಪ್ರಯತ್ನಗಳು ನಡೆದಿವೆಯಾದರೂ, ಖಚಿತವಾದ ಮೊದಲ ದಾಖಲೆ ಸಿಗುವುದು ಕ್ರಿ.ಶ. 5ನೇ ಶತಮಾನ ಹಲ್ಮಿಡಿ ಕಲ್ಬರಹ. ಇದನ್ನು ಆಧಾರವಾಗಿ ಪರಿಗಣಿಸಿದರೂ, ಕನ್ನಡ ಸಾಹಿತ್ಯ ಚರಿತ್ರೆಗೆ ಸಾವಿರದ ಆರು ನೂರು ವರ್ಷಗಳ ದೀರ್ಘವಾದ ಚರಿತ್ರೆ ಇರುವುದನ್ನು ಕಾಣಬಹುದು.ಅದು ಕಾಲ, ದೇಶ, ಪರಿಸರ, ಪರಿಸ್ಥಿತಿ ಮತ್ತು ತುರ್ತಿಗೆ ಅನುಗುಣವಾಗಿ ಬದಲಾಗುತ್ತ, ರೂಪಗೊಳ್ಳುತ್ತಾ, ಬೆಳೆಯುತ್ತಾ ಬಂದಿದೆ.ಇದನ್ನು ಕವಿ, ಕಾಲಘಟ್ಟ, ಧರ್ಮ, ರಸ, ಭಾಷೆ, ಮೊದಲಾದವುಗಳನ್ನು ಸಾಕ್ಷೀಕರಿಸಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ವಿಭಾಗಿಸುವುದುಂಟು.

'ಹಲ್ಮಿಡಿ ಶಾಸನ' ಕನ್ನಡದ ಮೊದಲ ಉಪಲಬ್ಧ ಶಾಸನವೆಂದು ಕನ್ನಡ ಸಾಹಿತ್ಯಕ್ಕೆ ಒಂದು ಖಚಿತತೆಯನ್ನು ಒದಗಿಸಿದೆ.ಜೊತೆಗೆ ಚಾರಿತ್ರಿಕವಾಗಿ ಕದಂಬ ವಂಶದ ಕಾಕುಸ್ಥವರ್ಮನ ವಿವರಣೆಯನ್ನು ದಾಖಲಿಸಿದೆ. ಇಲ್ಲಿ ದಾನದ ವಿಷಯ

ಪ್ರಸ್ತಾಪಗೊಂಡಿದೆ. ಅನಂತರ ಕಾಲದಲ್ಲಿ ಶ್ರವಣಬೆಳಗೊಳ ಶಾಸನವನ್ನು 'ನಂದಿಸೇನ' ಎಂಬ ಯತಿವರ್ಯನ ಉಲ್ಲೇಖ ಮಾಡುತ್ತ, ಬದುಕಿನ ನಶ್ವರತೆಯನ್ನು ಕಾಮನಬಿಲ್ಲಿನಂತೆ, ಮಿಂಚಿನಂತೆ ಕ್ಷಣಿಕ ಎಂಬುದನ್ನು ತಿಳಿಸುತ್ತದೆ.

ಕ್ರಿ.ಶ. 7ನೇ ಶತಮಾನವೂ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಮತ್ತೊಂದು ಮಹತ್ವದ ಮೈಲಿಗಲ್ಲು. ಅದು ಬಾದಾಮಿಯ ಕಲ್ಬರಹ. ಇದು ಕಪ್ಪೆಅರಭಟ್ಟನೆಂಬ ವ್ಯಕ್ತಿಯ ಉದಾತ್ತ ವ್ಯಕ್ತಿತ್ವವನ್ನು ಚಿತ್ರಿಸುವ ವ್ಯಕ್ತಿಚಿತ್ರವಾಗಿದೆ. ಇದಕ್ಕೆ ಸಾಹಿತ್ಯಕವಾದ ಮತ್ತೊಂದು ಮಹತ್ವವಿದೆ. ಇದರಲ್ಲಿ ಮೊದಲ ಬಾರಿಗೆ ಅಂಶಗಣಾನ್ವಿತವಾದ ತ್ರಿಪದಿಯ ಬಳಕೆ. ಇದು ಕೇವಲ ಕಪ್ಪೆಅರಭಟ್ಟನ ಚಿತ್ರಣವಾಗಿರದೆ; ಅದು ಸಮಕಾಲೀನ ಸಂದರ್ಭದ ಕನ್ನಡಿಗರ ಉದಾತ್ತ ಜೀವನದ ದ್ಯೋತಕವೆಂದೇ ಹೆಸರಿಸಬಹುದು.

ಅನಂತರ ಕನ್ನಡ ಸಾಹಿತ್ಯ ಪರಂಪರೆಯ ಮೊದಲ ಉಪಲಬ್ಧ ಕೃತಿ ದೊರೆಯುವುದು, 9ನೇ ಶತಮಾನದ ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ. ನೃಪತುಂಗನ ಆಸ್ಥಾನದ ಕವಿ ಶ್ರೀವಿಜಯ ವಿರಚಿತ 'ಕವಿರಾಜಮಾರ್ಗ'. ಈ ಕೃತಿಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಮುಂಚಿನ ಕನ್ನಡದ ಹಲವು ಪದ್ಯ–ಗದ್ಯಕಾರರನ್ನು ದಾಖಲಿಸುವುದರಿಂದ ಸಂಶೋಧನೆಗೆ ಎಡೆಮಾಡಿಕೊಟ್ಟಿದೆ. ಕವಿರಾಜಮಾರ್ಗವೂ ಕನ್ನಡ ನಾಡಿನ ಗಡಿಯನ್ನು 'ಕಾವೇರಿಯಿಂದ ಗೋದಾವರಿ ನದಿಯವರೆಗೆ' ಎಂಬುದನ್ನು ಸ್ಪಷ್ಟಪಡಿಸುತ್ತದೆ.ಅಲ್ಲದೆ ಕನ್ನಡದ ಜನತೆಯ ಗುಣವಿಶೇಷತೆಗಳನ್ನು 'ಸುಭಟರು, ಕವಿಗಳು, ಚೆಲುವುಳ್ಳವರು, ಗುಣಿಗಳು ಅಭಿಮಾನಿಗಳು, ಕುರಿತೋದದೆಯೂ ಕಾವ್ಯ ಪ್ರಯೋಗ ಮಾಡುವ ಪರಿಣತರು' ಎಂಬುದಾಗಿಯೂ ತಿಳಿಸುತ್ತದೆ. ಪರಧರ್ಮ ಪರ ವಿಚಾರ ಸಹಿಸುವುದು ನಿಜವಾದ ಧರ್ಮ ಎಂದು ಭಾವಿಸುತ್ತದೆ. ಹೀಗಾಗಿ ಸಹಬಾಳ್ವೆ, ಸಹೋದತ್ವ, ಸಹಕಾರ, ವಿಶ್ವಮಾನವೀಯ ಗುಣ ಮೊದಲಾದವುಗಳ ಆಗರವಾಗಿ ಕನ್ನಡ ಕಾವ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದೆ.

'ವಡ್ಡಾರಾಧನೆ' ಕನ್ನಡ ಸಾಹಿತ್ಯದಲ್ಲಿ ಮತ್ತೊಂದು ಮಹತ್ವದ ಕೃತಿ. ಕನ್ನಡದ ಮೊದಲ ಉಪಲಬ್ಧ ಗದ್ಯಗ್ರಂಥ ಎಂಬುದು ಒಂದು ಕಡೆಯಾದರೆ; ಜೈನ ಧರ್ಮದ ತತ್ತ್ವಗಳನ್ನು ಕಥೆಗಳ ಮೂಲಕ ಪ್ರಸಾರಮಾಡುವುದು. ಅಷ್ಟಕ್ಕೆ ಸೀಮಿತವಾಗದೆ ಕಲಾತ್ಮಕವಾದ ನಿರೂಪಣ ಶೈಲಿ ಇದರ ಮತ್ತೊಂದು ವೈಶಿಷ್ಟ್ಯವಾಗಿದೆ. 19 ಕಥೆಗಳ ಗುಚ್ಛವಾಗಿರುವ ಈ ಗ್ರಂಥವು ಶಿವಕೋಟ್ಯಾಚಾರ್ಯನಿಂದ ರಚಿತವಾಗಿದೆ. ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ, ಕಷ್ಟಸಹಿಷ್ಣುತೆ, ಏಕಾಗ್ರತೆ, ನ್ಯಾಯ ನೀತಿಮಾರ್ಗ ಮೊದಲಾದ ಮಾನವೀಯ ಗುಣಗಳನ್ನು ತಿಳಿಹೇಳುವುದು ಇಲ್ಲಿ ಕಾಣಬಹುದಾಗಿದೆ.

10ನೇ ಶತಮಾನವನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎಂದೇ ಕರೆಯುತ್ತಾರೆ. ಸಂಸ್ಕೃತ ಸಾಹಿತ್ಯದ ಗಾಢ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತ ಭೂಯಿಷ್ಠತೆಯಿಂದ ಕೂಡಿದ 'ಮಾರ್ಗ' ಶೈಲಿಯಲ್ಲಿ ಸಾಹಿತ್ಯ ರಚಿತವಾಯಿತು. ಬಹುತೇಕವಾಗಿ ಈ ಶತಮಾನದ ಕವಿಗಳು ಜೈನ ಧರ್ಮದ ಹಿನ್ನೆಲೆಯುಳ್ಳವರು. ಪಂಪನಿಗಿಂತಲೂ ಹಿಂದೆಯೇ (ಗುಣವರ್ಮ–1) ಬಳಕೆಯಲ್ಲಿದ್ದ ಆಗಮಿಕ ಮತ್ತು ಲೌಕಿಕ ಎಂಬ ಕಾವ್ಯಮಾರ್ಗವನ್ನು ಅನುಸರಿಸಿದರು. ಆಗಮಿಕ ಕಾವ್ಯಗಳಲ್ಲಿ ಜೈನ ತೀರ್ಥಂಕರರು, ಚಕ್ರವರ್ತಿಗಳು, ಮಹಾಪುರುಷರ ಜೀವನವನ್ನು ವಿವರಿಸಿದರೆ; ಲೌಕಿಕ ಕಾವ್ಯಗಳಲ್ಲಿ ಆಶ್ರಯದಾತ ಅರಸನ ಚರಿತ್ರೆ, ತತ್ಕಾಲೀನ ರಾಜಕೀಯ, ಮಹಾಭಾರತ–ರಾಮಾಯಣದಂತಹ ಚಾರಿತ್ರಿಕ ಕಾವ್ಯಗಳನ್ನು

ಕಥಾವಸ್ತುವನ್ನು ಹೊಂದಿವೆ. ಈ ಕಾವ್ಯಗಳು ಪಾಂಡಿತ್ಯ ಪ್ರಧಾನವಾಗಿ, ಛಂದೋಬದ್ಧವಾಗಿ ರೂಪುಗೊಂಡಿದ್ದವು. ಚಂಪೂ ರೂಪವು ಈ ಶತಮಾನದಲ್ಲಿ ತನ್ನ ಉತ್ತುಂಗ ಸ್ಥಾನ ತಲುಪಿತು. ಈ ಕವಿಗಳು ಧರ್ಮ–ಕಾವ್ಯಧರ್ಮವನ್ನು ಸಮನ್ವಯಗೊಳಿಸಿದರು. ವೀರಯುಗಕ್ಕೆ ಸಂಬಂಧಿಸಿದಂತೆ ವೀರಮೌಲ್ಯಗಳನ್ನು ಪ್ರತಿಪಾದಿಸಿದರು.

ಈ ಯುಗದ ಕವಿ, ಮಹಾಕವಿ, ಕನ್ನಡದ ಆದಿಕವಿ ಪಂಪ. ಈತನು ಹತ್ತನೆಯ ಶತಮಾನದ ಪ್ರಾತಿನಿಧಿಕ ಕವಿಯಾಗಿದ್ದಾನೆ. ಪಂಪನು ತುಳಿದ ದಾರಿ ಮುಂದಿನ ಬಹುತೇಕ ಜೈನ ಕವಿಗಳು ಅನುಸರಿಸಿದ್ದಾರೆ. ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಕಾವ್ಯವನ್ನು ರಚಿಸಿದ್ದಾನೆ. ಆದಿಪುರಾಣವು ಪಂಪನ ಆಗಮಿಕ ಅಥವಾ ಧಾರ್ಮಿಕ ಕಾವ್ಯವಾಗಿದೆ. ಇದು ಮೊದಲ ತೀರ್ಥಂಕರನಾದ ಆದಿನಾಥನ ಮತ್ತು ಮೊದಲ ಚಕ್ರವರ್ತಿಯಾದ ಭರತನ ಚರಿತ್ರೆಯನ್ನು ಕಥಾವಸ್ತುವನ್ನಾಗಿ ಹೊಂದಿದೆ. ಆದಿನಾಥನ ಕಥೆಯು ಕಾಮತ್ಯಾಗವನ್ನು ತಿಳಿಸಿದರೆ; ಭರತನ ಕಥೆಯು, ಅಹಂಕಾರ ತ್ಯಾಗವನ್ನು ತಿಳಿಸುತ್ತದೆ. ವಿಕ್ರಮಾರ್ಜುನ ವಿಜಯ ಕಾವ್ಯಕ್ಕೆ ಪಂಪಭಾರತ ಎಂತಲೂ ಹೆಸರಿದೆ. ಮಹಾಕವಿ ವ್ಯಾಸರ ಮಹಾಭಾರತವನ್ನು ಪಂಪ ಕನ್ನಡಿಸಿದ್ದಾನೆ. ಕಾವ್ಯನಾಯಕನಾದ ಅರ್ಜುನನಿಗೆ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಹೋಲಿಸಿದ್ದಾನೆ. ಸಮಕಾಲೀನ ಮೌಲ್ಯಗಳನ್ನು ಸಂದರ್ಭಾನುಸಾರವಾಗಿ ದಾಖಲಿಸುತ್ತಾನೆ. ಈತನು ಕನ್ನಡ ಸಾಹಿತ್ಯಕ್ಕೆ ಆನೆ ನಡೆದುದೇ ಮಾರ್ಗ ಎಂಬಂತೆ ದಾರಿ ತೋರಿದ್ದಾನೆ. ಆದ್ದರಿಂದಲೇ ನಾಗರಾಜ ಕವಿಯು 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಘೋಷಿಸಿರುವುದು ಔಚಿತ್ಯಪೂರ್ಣವಾಗಿದೆ.

ಪಂಪನು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದ ಮತ್ತೋರ್ವ ಕವಿ ಪೊನ್ನ. ಕನ್ನಡದ ರತ್ನತ್ರಯರು ಪಂಪ, ಪೊನ್ನ, ರನ್ನ.ಕನ್ನಡದ ಕವಿಚಕ್ರವರ್ತಿಗಳು ಪೊನ್ನ, ರನ್ನ, ಜನ್ನ. ರತ್ನತ್ರಯರಲ್ಲಿ ಎರಡನೆಯವನಾದ ಈತನ ಆಶ್ರಯದಾತ ರಾಷ್ಟ್ರಕೂಟರ 3ನೇ ಕೃಷ್ಣ. ಪೊನ್ನನ ಧಾರ್ಮಿಕ ಕಾವ್ಯ ಶಾಂತಿಪುರಾಣ. ಇದರಲ್ಲಿ 16ನೇ ತೀರ್ಥಂಕರನಾದ ಶಾಂತಿನಾಥನ ಚರಿತ್ರೆಯಿದೆ. ಹನ್ನೆರಡು ಆಶ್ವಾಸಗಳು ಒಳಗೊಂಡಿದೆ. ಅತ್ತಿಮಬ್ಬೆಯು ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿದಳು. ಭುವನೈಕ್ಯರಾಮಾಭ್ಯುದಯ (ರಾಮಕಥೆ) ಕೃತಿಯು ಲೌಕಿಕ ಕಾವ್ಯವಾಗಿದೆ. ಈತನಿಗೆ 'ಕುರುಳ್ಗಳ ಸವಣ' ಎಂಬ ಬಿರುದು ಇತ್ತು. 'ಕನ್ನಡ ಕವಿತೆಯೊಳ್ ಅಸಗಂಗಂ ನೂರ್ಮಡಿ, ಕಾಳಿದಾಸಂಗಂ ನಾಲ್ವಡಿ'ಎಂದು ಕವಿ ಹೇಳಿಕೊಂಡಿದ್ದಾನೆ.

ರನ್ನ 10ನೇ ಶತಮಾನದ ಪ್ರಮುಖ ಕವಿ. ಈತನ 'ಅಜಿತತೀರ್ಥಂಕರ ಪುರಾಣಂ'ವು ಧಾರ್ಮಿಕ ಕಾವ್ಯ.ಅಜಿತ ಪುರಾಣದಲ್ಲಿ ಹದಿನಾಲ್ಕು ಆಶ್ವಾಸಗಳಿವೆ. ಜೈನರ ಎರಡನೆಯ ತೀರ್ಥಂಕರನಾದ ಅಜಿತಸ್ವಾಮಿ ಹಾಗೂ ಎರಡನೆಯ ಚಕ್ರವರ್ತಿಯಾದ ಸಗರನ ಚರಿತೆಯ ಕಥಾವಸ್ತು ಹೊಂದಿದೆ. 'ಸಾಹಸ ಭೀಮ ವಿಜಯಂ ಅಥವಾ ಗದಾಯುದ್ಧ'ವು ರನ್ನನ ಲೌಕಿಕ ಕಾವ್ಯ. ಮೂಲ ವ್ಯಾಸ ಭಾರತದ ಗದಾಪರ್ವದ ಕಥೆಯೇ ಇಲ್ಲಿ ಕೃತಿರೂಪ ತಾಳಿದೆ. ಇದು ಪಂಪನ 'ವಿಕ್ರಮಾರ್ಜುನವಿಜಯ'ದ 13ನೇ ಆಶ್ವಾಸ, ಭಾಸನ 'ಊರುಭಂಗ', ಭಟ್ಟನಾರಯಣನ 'ವೇಣಿಸಂಹಾರ'ಗಳ ಪ್ರೇರಣೆಗೆ ಒಳಗಾದರೂ, ಸ್ವೋಪಜ್ಞತೆ ಮೆರೆದಿದೆ. ಚಾಲುಕ್ಯ ಚಕ್ರವರ್ತಿ ಸತ್ಯಾಶ್ರಯನನ್ನು ಭೀಮನೊಂದಿಗೆ ಸಮೀಕರಿಸಿ ಕಾವ್ಯ ರಚಿಸಿದ್ದಾನೆ. ಭೀಮನನ್ನು ಕಾವ್ಯ ನಾಯಕನನ್ನಾಗಿ

ಮಾಡಿಕೊಂಡಿದ್ದಾನೆ. ತಾನು "ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ" ಎಂದು, ತನ್ನ ಕಾವ್ಯ ವಿಮರ್ಶೆ ಮಾಡುವವರಿಗೆ 'ರನ್ನನ ಕೃತಿ ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ' ಎಂದು ಸವಾಲು ಒಡ್ಡುತ್ತಾನೆ. ರನ್ನನ ಕಾವ್ಯದ ಕಲಾತ್ಮಕ ತಂತ್ರ 'ಸಿಂಹಾವಲೋಕನ ಕ್ರಮ'. ಜೊತೆಗೆ ಅದ್ಭುತ ನಾಟಕೀಯತೆ. ಕಾವ್ಯದಲ್ಲಿ ದುರ್ಯೋಧನನನ್ನು ಸುಯೋಧನನ್ನಾಗಿ ಗುರುತಿಸಿದ್ದಾನೆ.

ಗಂಗ ದೊರೆ ರಾಚಮಲ್ಲನ ಮಂತ್ರಿ ಹಾಗೂ ಸೇನಾಪತಿ ಚಾವುಂಡರಾಯ. ಈತನು ಶ್ರವಣಬೆಳಗೊಳದಲ್ಲಿ 57 ಅಡಿ ಎತ್ತರದ ಗೊಮ್ಮಟೇಶ್ವರನ ಮೂರ್ತಿ ಪ್ರತಿಷ್ಠಾಪಿಸಿದವನು. ಈತನ ಚಾವುಂಡರಾಯ ಪುರಾಣ, 24 ತೀರ್ಥಂಕರರ ಮತ್ತು 63 ಶಲಾಕಾಪುರುಷರ ಚರಿತ್ರೆಯಿರುವ ಗದ್ಯ ಕೃತಿ. ಚಾವುಂಡರಾಯ ಪುರಾಣಕ್ಕಿರುವ ಇನ್ನೊಂದು ಹೆಸರು 'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ'. ಚಾವುಂಡರಾಯ ಪುರಾಣದ ಸ್ವರೂಪವನ್ನು "ಗಂಭೀರ, ಧಾರಾಳ, ಚೊಕ್ಕಟ" ಎಂಬ ಮೂರು ಮಾತುಗಳಲ್ಲಿ ರಂ.ಶ್ರೀ. ಮುಗಳಿಯವರು ಹಿಡಿದಿಟ್ಟಿದ್ದಾರೆ.

ಒಂದನೇ ನಾಗವರ್ಮನ ಛಂದೋಂಬುಧಿ ಮತ್ತು ಕರ್ನಾಟಕ ಕಾದಂಬರಿ. 'ಛಂದೋಂಬುಧಿ' ಕನ್ನಡದ ಮೊದಲನೆಯ ಛಂದೋಗ್ರಂಥವಾಗಿದೆ, ಕರ್ನಾಟಕ ಕಾದಂಬರಿಯೂ ಬಾಣನ ಸಂಸ್ಕೃತ ಕಾದಂಬರಿಯ ಕನ್ನಡ ಅನುವಾದವಾಗಿದೆ. ಉನ್ನತ ಪ್ರೇಮದ ಸ್ವಪ್ನ ಚಿತ್ರಣ, ಪುಂಡರೀಕ – ಮಹಾಶ್ವೇತೆ, ಚಂದ್ರಾಪೀಡ–ಕಾದಂಬರಿಯರ ಪಾತ್ರ ಚಿತ್ರಣ, ಅಚ್ಛೋದ ಸರೋವರದ ವರ್ಣನೆ ಇರುವ ಕಾವ್ಯ ಇದಾಗಿದೆ.

ದುರ್ಗಸಿಂಹನ ಚಂಪೂಕಾವ್ಯ ಪಂಚತಂತ್ರ. ಇದು ವಸುಭಾಗಭಟ್ಟನ ಕೃತಿಯನ್ನು ಕನ್ನಡದಲ್ಲಿ "ಪೊಸತಾಗಿರೆ ವಿರಚಿಸುವೆಂ" ಮರುಸೃಷ್ಟಿಯಾಗಿದೆ. ಪ್ರಾಣಿ–ಪಕ್ಷಿಗಳನ್ನು ಕಥೆಗಳಲ್ಲಿ ಬಳಸುವುದರ ಮೂಲಕ ನೀತಿ ಬೋಧನೆ ಮಾಡಲಾಗಿದೆ.

'ಅಭಿನವ ಪಂಪ' ಎಂದು ಹೆಸರಾದ ಕವಿ ನಾಗಚಂದ್ರ. ಈತನ ಕಾವ್ಯ 'ರಾಮಚಂದ್ರ ಚರಿತ ಪುರಾಣ'. ಇದಕ್ಕೆ ಇನ್ನೊಂದು ಹೆಸರು 'ಪಂಪ ರಾಮಾಯಣ'. ಈ ಪುರಾಣಕ್ಕೆ ಪ್ರಾಕೃತದ ಕವಿ ವಿಮಲಸೂರಿಯ 'ಪಉಮಚರಿಯ' ಆಕರವಾಗಿದೆ. ಕವಿ ರಾವಣನ ಪಾತ್ರವನ್ನು ವಿಶಿಷ್ಟವಾಗಿ ಚಿತ್ರಿಸಿದ್ದಾನೆ. ಸ್ವಭಾವತಃ ಒಳ್ಳೆಯವನಾದ ರಾವಣ ವಿಧಿಯ ಕೈವಾಡದಿಂದ 'ಪದ್ಮಪತ್ರದ ಜಲಬಿಂದುವಿನಂತೆ ಚಲಿತ ಮಾದುದು ಚಿತ್ತಂ' ಅದು ಅವನ ಅವಸಾನಕ್ಕೆ ಕಾರಣವಾಯಿತು. ಇನ್ನೂ 'ಮಲ್ಲಿನಾಥ ಪುರಾಣ'ದಲ್ಲಿ 'ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ' ಎಂದು ಸಾರುತ್ತಾನೆ.

"ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ"ವನ್ನು ತುಳಿದ ನಯಸೇನ, "ಶುದ್ಧ ಕನ್ನಡದೊಳ್ ತಂದಿಕ್ಕವುದೇ ಸಕ್ಕದಂಗಳ ತಕ್ಕುದೆ, ಬೆರಸಲ್ಕೆ ಘೃತಮುಮಂ ತೈಲಮುಮಂ" ಎಂದು 'ಸಕ್ಕದವನ್ನು ಅನುಸರಿಸದೇ ಶುದ್ಧಕನ್ನಡದಲ್ಲಿ ಕಾವ್ಯ ಬರೆದಿರುವುದು ವಿಶೇಷವಾಗಿದೆ. ಈತನ 'ಧರ್ಮಾಮೃತ' ಗದ್ಯಪ್ರಧಾನ ಚಂಪೂಕೃತಿ. ಇದರಲ್ಲಿ "ಪರಮತ ವಿಡಂಬನೆಯ ಮೂಲಕ ಸ್ವಮತ ಸ್ಥಾಪನೆ" ಮಾಡಿದ. ಈ ತೆರನಾದ ಹೊಸ ಪರಂಪರೆಯೊಂದಕ್ಕೆ ಮೂಲ ಪುರುಷನಾಗಿ ಕೂಡ ನಿಲ್ಲುತ್ತಾನೆ.

ನೇಮಿಚಂದ್ರನ 'ಲೀಲಾವತಿಪ್ರಬಂಧ'. 'ಸ್ತ್ರೀ ರೂಪಮೆ ರೂಪಂ ಶೃಂಗಾರ ರಸಮೆ ರಸಂ' ಎಂದು ಶೃಂಗಾರ ರಸಕ್ಕೆ ಮೊದಲ ಪ್ರಾಶಸ್ತ್ಯವನ್ನು ನೀಡಿದ. ಕನ್ನಡದ ಅಪರೂಪದ ಶೃಂಗಾರ ಕಾವ್ಯವಾಗಿದೆ. ನೇಮಿನಾಥ ಪುರಾಣ ಈತನ ಇನ್ನೊಂದು ಕಾವ್ಯ. ಅಲ್ಲದೆ

ಜೋತಿಷ್ಯ ಗ್ರಂಥ, ಕಾಮಶಾಸ್ತ್ರ ಗ್ರಂಥ, ಗೋವೈದ್ಯ ಶಾಸ್ತ್ರ, ಗಣಿತಶಾಸ್ತ್ರ ಗ್ರಂಥಶತಕ, ಅಷ್ಟಕ, ಮುಂತಾದ ಶಾಸ್ತ್ರ ಕೃತಿಗಳು ಈ ಶತಮಾನದಲ್ಲಿ ಬೆಳಕು ಕಂಡಿರವುದನ್ನು ಕಾಣಬಹುದಾಗಿದೆ.

12ನೇ ಶತಮಾನ ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ತಂದ ಕಾಲಘಟ್ಟ, ಮಾರ್ಗದಿಂದ ದೇಸಿಯತೆಯನ್ನು ಮೈಗೂಡಿಸಿಕೊಂಡು ಸರಳವಾದ ಆಡುಮಾತಿನ, ಜನಪರವಾದ, ವಚನ ರೂಪಬೆಳಕು ಕಂಡಿತು. ಇಲ್ಲಿ ಸಾಹಿತ್ಯ ರಾಜಾಶ್ರಯದಿಂದ ಜನಸಾಮಾನ್ಯನ ಮಟ್ಟಕ್ಕೆ ಇಳಿಯಿತು. ಸಮಾಜದಲ್ಲಿ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ ಜಾತ್ಯತೀತವಾಗಿ ಸಮಾಜದ ಎಲ್ಲಾ ವರ್ಗದ ಜನರು ಸಾಹಿತ್ಯ ಕೃಷಿ ಮಾಡಲು ಕಾರಣವಾಯಿತು. ಸ್ತ್ರೀಯರು ಪುರುಷರಿಗೆ ಸಮಾನವಾಗಿ ಸಾಹಿತ್ಯ ರಚನೆ ಮಾಡಿರುವುದು ಈ ಶತಮಾನದ ಮತ್ತೊಂದು ವಿಶೇಷ. ಕನ್ನಡ ನಾಡಿನಲ್ಲಿ ನಡೆದ ಬಹುದೊಡ್ಡ ಸಾಂಸ್ಕೃತಿಕ ಚಳುವಳಿಯಾಗಿ 'ವಚನ ಚಳುವಳಿ' ರೂಪುತಾಳಿತು. ಸಮಾನತೆ–ಕಾಯಕ–ದಾಸೋಹದಂತಹ ಜೀವನ ಮೌಲ್ಯಗಳು ಜನಸಾಮಾನ್ಯರ ನಡೆ–ನುಡಿಯಲ್ಲಿ ಗಾಢವಾದ ಪ್ರಭಾವ ಬೀರಿದವು. ಗದ್ಯವೂ ಅಲ್ಲದ, ಪದ್ಯವೂ ಅಲ್ಲದ, ಅನುಭಾವ ಗದ್ಯ ಎಂದೇ ವಚನವೂ ಪ್ರಸಿದ್ಧಿ ಪಡೆಯಿತು. ವಚನಕಾರರು ವಚನ ಕೃಷಿ ಮಾಡಿದ ಬೇಸಾಯಗಾರರಾದರು. ಪ್ರಯುಕ್ತ ವಚನ ಸಾಹಿತ್ಯವು ಕರ್ನಾಟಕ ಅಷ್ಟೇ ಅಲ್ಲದೆ, ಇಡೀ ಜಾಗತೀಕ ಮಟ್ಟದಲ್ಲಿ ಮಹತ್ವದ ಸ್ಥಾನ ಪಡೆಯಿತು. ಬಸವಣ್ಣನವರ ನೇತೃತ್ವದಲ್ಲಿ ನೂರಾರು ಜನ ಶರಣರು ವಚನಗಳನ್ನು ರಚಿಸಿದರು. ಈ ವಚನಕಾರರ ಪ್ರಭಾವ ನಂತರದ ಕನ್ನಡ ಸಾಹಿತ್ಯದ ಮೇಲೆ ದಟ್ಟವಾಗಿ ಆಗಿರುವುದು ಕಂಡುಬರುತ್ತದೆ.

ವಚನಕಾರರ ಪ್ರಭಾವಕ್ಕೆ ಒಳಗಾದ ಹರಿಹರ ತನ್ನದೆಯಾದ ಹೊಸ ಮಾರ್ಗವನ್ನು ತುಳಿದ. ರಗಳೆ ಎಂಬ ರೂಪವನ್ನು ಪ್ರಧಾನ ಮಾಧ್ಯಮವನ್ನಾಗಿ ಬಳಿಸಿ, ನೂರಕ್ಕಿಂತಲೂ ಹೆಚ್ಚು ರಗಳೆಯನ್ನು ರಚಿಸಿ ರಗಳೆ ಕವಿ ಎಂದೇ ಖ್ಯಾತಿ ಪಡೆದನು. ರಗಳೆಯ ಕಥಾವಸ್ತು ಶಿವಶರಣರ ಚರಿತ್ರೆ. ಭಕ್ತಿಯೇ ಇವುಗಳ ಮೂಲದ್ರವ್ಯ. ಇದರ ಜೊತೆಗೆ 'ಗಿರಿಜಾಕಲ್ಯಾಣ' ಎಂಬ ಚಂಪೂ ಕಾವ್ಯವನ್ನು ರಚಿಸುವುದರ ಮೂಲಕ ರಗಳೆಯ ಕವಿ ಮಾತ್ರವಲ್ಲ ಎಂಬುದನ್ನು ಸಾಬೀತು ಪಡಿಸಿದನು.

ಹರಿಹರನ ಸೋದರಳಿಯನಾದ ರಾಘವಾಂಕನು ಷಟ್ಪದಿಯನ್ನು ಕಾವ್ಯ ಮಾಧ್ಯಮವನ್ನಾಗಿ ಮಾಡಿಕೊಂಡು ಷಟ್ಪದಿಯಲ್ಲಿಯೇ ಕಾವ್ಯವನ್ನು ರಚಿಸಿದನು. ಅದರಲ್ಲಿ ಹರಿಶ್ಚಂದ್ರ ಕಾವ್ಯ ಕನ್ನಡದ ಶ್ರೇಷ್ಠ ಕಾವ್ಯಗಳಲ್ಲಿ ಒಂದು. 'ಹರನೆಂಬುದೆ ಸತ್ಯ, ಸತ್ಯವೆಂಬುದೆ ಹರನು' ಎಂಬ ತತ್ವವನ್ನು ಪ್ರತಿಪಾದಿಸಿದನು. ಜನ ಬದುಕಲೆಂದು ಕಾವ್ಯವನ್ನು ಬರೆದೆ ಧೋರಣೆ ಈತನದು.

ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ಹೆಸರಿಸಲೇಬೇಕಾದ ಇನ್ನೊಬ್ಬ ಕವಿ ಸರ್ವಜ್ಞ. ತ್ರಿಪದಿಯನ್ನು ತನ್ನ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ, ಮಾಡಿಕೊಂಡು 'ಆಡುಮುಟ್ಟದ ಎಲೆ ಇಲ್ಲ; ಸರ್ವಜ್ಞ ಹೇಳದೇ ಇರುವ ವಿಷಯವಿಲ್ಲ' ಎಂಬಂತೆ ತೀವ್ರ ಮೊನಚಾದ ಭಾಷೆಯನ್ನು ಬಳಸಿದ ಈತನು ಪಾಮರರನ್ನು ನೇರವಾಗಿ ತಲುಪುತ್ತಾನೆ. ಜ್ಞಾನ, ಗುರು, ಲೋಕನೀತಿ, ಮಾತು, ಅನ್ನದ ಮಹತ್ವ, ಆರೋಗ್ಯ, ಹೆಣ್ಣು, ಸತ್ಯನಿಷ್ಠೆ, ಅರಿವು, ದಾಂಪತ್ಯ ಇತ್ಯಾದಿ ವಿಷಯಗಳನ್ನು ಮಾರ್ಮಿಕವಾಗಿ ತ್ರಿಪದಿಗಳಲ್ಲಿ ಚಿತ್ರಿಸಿದ್ದಾನೆ.

ನಡುಗನ್ನಡದ ಇನ್ನೊಬ್ಬ ಮಹಾಕವಿ ಕುಮಾರವ್ಯಾಸ. ಈತನು ಮಹಾಭಾರತದ

ಕಥಾವಸ್ತುವನ್ನು ಒಳಗೊಂಡ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಷಟ್ಪದಿಯ ಕಾವ್ಯವನ್ನು ಬರೆದಿದ್ದಾನೆ. ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತೆ ಎಂದು ಕಾವ್ಯದಲ್ಲಿ ಕೃಷ್ಣ ಪಾರಮ್ಯವನ್ನು ಮೆರೆದಿದ್ದಾನೆ. ತಾನು ಲಿಪಿಕಾರನಷ್ಟೆ ವೀರನಾರಾಯಣನೇ ಕವಿ ಎಂದು ತಿಳಿಸುತ್ತಾನೆ. ವಿಸ್ತಾರವಾದ ಮಹಾಕಾವ್ಯವನ್ನು ರಚಿಸಿದ ಈತ ರೂಪಕಗಳನ್ನು ಹೇರಳವಾಗಿ ಬಳಸುವುದರ ಮೂಲಕ ವಿಮರ್ಶಕರಿಂದ 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂದು ಕರೆಸಿಕೊಂಡಿದ್ದಾನೆ. ಈತನ ಕಾವ್ಯ ಪ್ರೌಢಿಮೆಯನ್ನು ಮನಗಂಡ ಕುವೆಂಪುರವರು 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿವುದು' ಎಂಬ ಮಾತು ಔಚಿತ್ಯ ಪೂರ್ಣವಾಗಿದೆ. ಇದೇ ಕಾಲ ಘಟ್ಟದಲ್ಲಿದ್ದ ಉಪಮೆಗಳಿಗೆ ಹೆಸರಾದ ಲಕ್ಷ್ಮೀಶ; ಅಲ್ಲಮಪ್ರಭುವನ್ನು ಕಾವ್ಯ ನಾಯಕನನ್ನಾಗಿ ಮಾಡಿಕೊಂಡ ಚಾಮರಸನು ತಮ್ಮದೆ ಆದ ವಿಶೇಷತೆಯನ್ನು ಮೆರೆದಿದ್ದಾರೆ.

ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯ ಒಂದು ನಾಣ್ಯದ ಎರಡು ಮುಖಗಳಂತೆ. ಹರಿದಾಸರು ಕೀರ್ತನೆಗಳನ್ನು ರಚಿಸಿದರು. ದೇವತ ಸ್ತುತಿ, ದೇವರ ನಾಮ ಸ್ಮರಣೆ, ಆತ್ಮ ವಿಮರ್ಶೆ, ಆತ್ಮ ನಿವೇದನೆ, ಲೋಕ ನೀತಿ, ಸಮಾಜ ವಿಮರ್ಶೆ, ಸಾಮಾಜಿಕ ವಿಡಂಬನೆ, ಮೌಢ್ಯ ನಿರಾಕರಣೆ ಮೊದಲಾದ ವಿಷಯಗಳನ್ನು ಪ್ರಸ್ತಾಪಿಸುತ್ತ ಉತ್ತಮ ಸಮಾಜವನ್ನು ನಿರ್ಮಾಣ ಮಾಡಬಯಸಿದರು. ವ್ಯಾಸರಾಯ, ಪುರಂದರದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ ಹೀಗೆ ಹಲವು ಕೀರ್ತನಕಾರರು ಕೀರ್ತನ ಸಾಹಿತ್ಯಕ್ಕೆ ತಮ್ಮದೆಯಾದ ಕಾಣಿಕೆಯನ್ನು ನೀಡಿದ್ದಾರೆ. ಕೀರ್ತನೆಯ ಮುಂದುವರಿಕೆಯಾಗಿ, ತತ್ವಪದಗಳು ಸಹ ಜನಸಾಮಾನ್ಯ ನಿಜಧ್ವನಿಗಳಾಗಿವೆ.

ಸಾಂಗತ್ಯದ ಪ್ರಮುಖ ಕವಿ ರತ್ನಾಕರವರ್ಣಿ. 'ಶೃಂಗಾರ ಕವಿ' ಎಂಬ ಅನ್ವರ್ಥಕ ಪಡೆದಿದ್ದಾನೆ. ಈತನ ಭರತೇಶ ವೈಭವವು ಹತ್ತುಸಾವಿರ ಪದ್ಯಗಳನ್ನು ಒಳಗೊಂಡ ಬೃಹತ್ ಕಾವ್ಯ. ಇದರಲ್ಲಿ ತ್ಯಾಗ–ಭೋಗಗಳ ಸಮನ್ವಯತೆಯನ್ನು ಸಾರಿದ್ದಾನೆ. ಸಂಚಿ ಹೊನ್ನಮ್ಮಳ ಹದಿಬದೆಯ ಧರ್ಮ ಎಂಬ ಸಾಂಗತ್ಯದ ಮತ್ತೊಂದು ಗಮನಾರ್ಹ ಕೃತಿ. ಸ್ತ್ರೀಪರವಾದ ನಿಲುವುಗಳನ್ನು ವ್ಯಕ್ತಪಡಿಸುವ ನೀತಿ ಪ್ರಧಾನ ಕಾವ್ಯ. ಸಮಕಾಲೀನ ಸಂದರ್ಭದಲ್ಲಿ ಮೈಸೂರು ಅರಸರ ಆಳ್ವಿಕೆಯಲ್ಲಿ ಕನ್ನಡ ಸಾಹಿತ್ಯದ ಹಲವು ಮಹತ್ವದ ಕೃತಿಗಳು ರಚನೆಯಾದವು. ನಡುಗನ್ನಡದ ಕೊನೆಯ ಮತ್ತು ಹೊಸಗನ್ನಡದ ಕೊಂಡಿಯಾದ ಕವಿ ಮುದ್ದಣನನ್ನು 'ಹೊಸಗನ್ನಡದ ಮುಂಗೋಳಿ' ಎಂದೇ ಕರೆಯಲಾಗುತ್ತದೆ. ಈತ ಹೊಸಗನ್ನಡದ ಓದುಗರ ಒಲವು–ನಿಲವುಗಳನ್ನು ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುತ್ತಾನೆ.

ಆಧುನಿಕ ಕನ್ನಡ ಸಾಹಿತ್ಯ 20ನೇ ಶತಮಾನದ ಸಾಹಿತ್ಯವೆಂದು ಹೆಸರಾಗಿದೆ. 19ನೇ ಶತಮಾನದ ಉತ್ತರಾರ್ಧದಲ್ಲಿ ಈ ಹೊಸ ಸಾಹಿತ್ಯದ ಬೀಜಗಳು ಮೊಳೆತು, ಬೆಳೆ ಹುಲುಸಾಗಿ ಕೈಗೆ ಬಂದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅಂದಿನ ವಸಾಹತುಶಾಹಿ ಸಂಸ್ಕೃತಿಯ ಫಲವಾಗಿ ಹೊಸ ಶಿಕ್ಷಣ ಪದ್ಧತಿ, ಆಡಳಿತ, ಮುದ್ರಣ, ವಿಜ್ಞಾನ–ತಂತ್ರಜ್ಞಾನದ ಫಲವಾಗಿ ಧಾರ್ಮಿಕ–ಸಾಮಾಜಿಕ–ಸಾಂಸ್ಕೃತಿಕ ಜೀವನದ ಮೇಲೆ ಗಾಢವಾದ ಪ್ರಭಾವ ಬೀರಿದವು.

ಶತಮಾನಕ್ಕಿಂತ ಹೆಚ್ಚು ಇತಿಹಾಸ ಹೊಂದಿರುವ ಆಧುನಿಕ ಕನ್ನಡ ಸಾಹಿತ್ಯವು

ಸಾಹಿತ್ಯಕವಾಗಿ ಹಲವು ವೈಶಿಷ್ಟ್ಯಗಳೊಂದಿಗೆ, ಹೆಚ್ಚು ಹೊಸತನವನ್ನು ಕಂಡುಕೊಳ್ಳತ್ತ, ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬ ಪ್ರಮುಖ ಧಾರೆಗಳಲ್ಲಿ ಹರಡಿಕೊಂಡಿದೆ. ಇದು ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕಥೆ, ಜೀವನ ಚರಿತ್ರೆ, ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ಸಮೃದ್ಧವಾಗಿ ಬೆಳೆದಿದೆ.

'ನವೋದಯ' ಹೊಸಗನ್ನಡದ ಮೊದಲ ಪ್ರಮುಖ ಘಟ್ಟ. ನವೋದಯ ಶಬ್ದ 'ಹೊಸಹುಟ್ಟು' ಎಂಬರ್ಥವನ್ನು ನೀಡುತ್ತದೆ. ಬಿ.ಎಂ. ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕವನ ಸಂಕಲನವು ಹೊಸಗನ್ನಡ ಸಾಹಿತ್ಯಕ್ಕೆ ಅಧಿಕೃತ ಚಾಲನೆಯನ್ನು ನೀಡಿತು. ನವೋದಯ ಸಾಹಿತ್ಯಕ್ಕೆ ಪಾಶ್ಚಾತ್ಯ ವಿಚಾರಧಾರೆಗಳು ಮತ್ತು ಪೌರಾತ್ಯ ವಿಚಾರಧಾರೆಗಳು ಪ್ರಭಾವ ಬೀರಿವೆ. ಪಾಶ್ಚಾತ್ಯ ಕವಿಗಳಾದ ವರ್ಡ್‌ವರ್ತ್, ಶೆಲ್ಲಿ, ಕೀಟ್ಸ್, ಬರ್ನ್ಸ್, ಟೆನಿಸನ್, ಆರ್ನಾಲ್ಡ್, ಷೇಕ್ಸ್‌ಪಿಯರ್ ಮೊದಲಾದ ಶ್ರೇಷ್ಠ ಕವಿಗಳ ಕಾವ್ಯಪ್ರೇರಣೆಯ ಜೊತೆಗೆ ರಾಷ್ಟ್ರೀಯತೆಯ ಪ್ರಜ್ಞೆ, ವೇದೋಪನಿಷತ್ತು, ಚರಿತ್ರೆ ಮತ್ತು ಪುರಾಣ ಪ್ರಜ್ಞೆ, ಸೈದ್ಧಾಂತಿಕ ಮತ್ತು ಆಧ್ಯಾತ್ಮಿಕ ಚಿಂತಕರ ಪ್ರಭಾವ, ನಾಡು ನುಡಿ ಪ್ರೀತಿ, ಪ್ರಕೃತಿಪ್ರೀತಿ, ವಿಭೂತಿ ಪುರುಷರಾದ ಬುದ್ಧ, ಬಸವಣ್ಣ, ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದ, ಮಹಾತ್ಮ ಗಾಂಧಿ ಮೊದಲಾದ ದಾರ್ಶನಿಕರ ಆಧ್ಯಾತ್ಮಿಕ, ಚಿಂತನೆ ದರ್ಶನ, ತಪಸ್ಸು, ಯೋಗ, ಅರಿವು, ಶಾಂತಿ, ಪೂರ್ಣದೃಷ್ಟಿ, ನಿರಾಪೇಕ್ಷೆ ಧರ್ಮ, ಸಮಷ್ಟಿ ಪ್ರಜ್ಞೆ, ಸದ್ಭಾವನೆ, ಸನ್ನಡತೆ, ಸಚ್ಚಾರಿತ್ರ್ಯ, ಸಹೋದರತ್ವ, ವಿಶ್ವಭ್ರಾತೃತ್ವ ಮುಂತಾದ ಮಾನವೀಯ ಮೌಲ್ಯಗಳನ್ನು ಕುವೆಂಪು, ಬೇಂದ್ರೆ, ಡಿ.ವಿ.ಜಿ, ಪು.ತಿ.ನ, ಶಿವರಾಮ ಕಾರಂತ ಮೊದಲಾದವರು ಅಭಿವ್ಯಕ್ತಪಡಿಸಿದರು. ಸರಳ ಜನಪರ ಭಾಷೆಯ ಮೂಲಕ ಭಾವನಾತ್ಮಕ, ಚಿಂತನಾತ್ಮಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ಭಾಷೆಯನ್ನು ದುಡಿಸಿಕೊಂಡರು.

'ಪ್ರಗತಿಶೀಲ' ಹೊಸಗನ್ನಡದ ಮತ್ತೊಂದು ಘಟ್ಟ. ಜೀವನ ಹಸನಾಗಿಸುವ ಬಾಳು ಸಹ್ಯವಾಗಿಸುವ ಒಲವನ್ನು ಹೊಂದಿದೆ. ಹಿಂದಿನ ನವೋದಯ ಸಾಹಿತ್ಯ ಹೂ, ಹಣ್ಣು, ಚಿಗರು, ತಾರೆ, ಚಂದ್ರ, ಪ್ರೀತಿ–ಪ್ರಣಯ ಮುಂತಾದ 'ರೋಮ್ಯಾಂಟಿಕ್' ಬದುಕಿನ ಮಧ್ಯಮವರ್ಗವನ್ನು ತಣಿಸಿದರೆ; ಇದು ಸಮಾಜವಾದ, ಸಮತಾವಾದ, ವಾಸ್ತವವಾದ, ಉದಾರವಾದ, ಮಾನವೀಯವಾದಗಳಂತಹ ಸೈದ್ಧಾಂತಿಕ ಚಳುವಳಿಯ ಬೆಳಕಿನಲ್ಲಿ ರೂಪಗೊಂಡಿತು. 'ಕಲೆಗಾಗಿ ಕಲೆಯಲ್ಲ; ಕಲೆ ಜೀವನಮುಖಿ' ಎಂಬುದನ್ನು ಪ್ರಮುಖ ಆಸ್ಥೆಯನ್ನಾಗಿ ಹೊಂದಿತು. ಅ.ನ.ಕೃ, ನಿರಂಜನ, ತರಾಸು, ಬಸವರಾಜ ಕಟ್ಟಿಮನಿ ಮೊದಲಾದವರು ಈ ಘಟ್ಟದಲ್ಲಿ ಸಾಹಿತ್ಯ ಕೃಷಿ ನಡೆಸಿದರು.

'ನವ್ಯ' ಸಾಹಿತ್ಯ ಘಟ್ಟವೂ ದೇಶೀ–ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಸ್ಥಿತ್ಯಂತರ ಸಂವೇದನೆಗಳಿಂದ ಮೂಡಿದ ಬಹುಮುಖ್ಯವಾದ ಸಾಹಿತ್ಯ ಧಾರೆಯಾಗಿದೆ. ಅಸ್ತಿತ್ವವಾದ, ಅಸಂಗತವಾದ, ಮನೋ ವೈಜ್ಞಾನಿಕವಾದ, ಮಾನವತಾವಾದ, ಶೂನ್ಯವಾದ, ಸಾಂಕೇತಿಕವಾದ, ಪ್ರತಿಮಾವಾದ, ಮಾರ್ಕ್ಸ್‌ವಾದ, ಲೋಹಿಯಾವಾದ ಮೊದಲಾದ ಸಂವೇದನೆಗಳನ್ನು ಸಾಹಿತ್ಯದ ಆಶಯವಾಗಿಟ್ಟುಕೊಂಡಿದೆ. ವಿ.ಕೃ. ಗೋಕಾಕ, ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ, ಗಂಗಾಧರ ಚಿತ್ತಾಲ, ಬಿ.ಸಿ. ರಾಮಚಂದ್ರಶರ್ಮ, ಸು.ರಂ. ಎಕ್ಕುಂಡಿ, ಚಂದ್ರಶೇಖರ ಕಂಬಾರ ಮೊದಲಾದವರು ಸಾಹಿತ್ಯ ರಚಿಸಿರುವುದನ್ನು ಕಾಣಬಹುದು.

'ದಲಿತ–ಬಂಡಾಯ' ಹೊಸಗನ್ನಡ ಸಾಹಿತ್ಯದ ಮತ್ತೊಂದು ಪ್ರಮುಖ ಘಟ್ಟ. ಸಾಹಿತ್ಯ ಸಮಾಜಮುಖಿಯಾಗಬೇಕು. ಶೋಷಿತರ, ಬಡವರ, ದಲಿತರ ಪರವಾದ ಸಂವೇದನೆಗಳನ್ನು ಒಳಗೊಂಡಿದೆ. ಮಾರ್ಕ್ಸ್‌ವಾದ, ಲೋಹಿಯವಾದ, ಅಂಬೇಡ್ಕರವಾದ, ದಲಿತ ಪ್ಯಾಂಥರ್‌ಗಳ ಚಿಂತನೆಗಳನ್ನು ಒಡಮೂಡಿಸಿಕೊಂಡು ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಮ.ನ. ಜವರಯ್ಯ, ಕುಂ.ವೀ, ಬರಗೂರು ರಾಮಚಂದ್ರಪ್ಪ, ಡಾ. ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ ಮೊದಲಾದವರು ಈ ಸಾಹಿತ್ಯ ಘಟ್ಟದ ರೂವಾರಿಗಳು.

ಒಟ್ಟಾರೆಯಾಗಿ, ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಕಥಾವಸ್ತು ಮತ್ತು ಆಶಯಗಳು ಆಯಾಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಮಕಾಲೀನ ಜೀವನದ ಪ್ರತಿನಿಧಿಕರಣವನ್ನು ಸೂಚಿಸುತ್ತದೆ. ಜೊತೆಗೆ ಭೂತದ ಬುನಾದಿಯ ಮೇಲೆ ವರ್ತಮಾನದಲ್ಲಿ ನಿಂತು, ಭವಿಷ್ಯದ ಬದುಕಿ ಜೀವನ ಮೌಲ್ಯಗಳನ್ನು ಕಟ್ಟಿಕೊಳ್ಳಲು ಕನ್ನಡ ಸಾಹಿತ್ಯ ಮಾರ್ಗದರ್ಶಿಯಾಗಿದೆ.

ಪರಾಮರ್ಶನ ಗ್ರಂಥಗಳು

1. ಮುಗಳಿ ರಂ.ಶ್ರೀ. 2012, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು
2. ರಾಮಚಂದ್ರಪ್ಪ ಬರಗೂರು ಪ್ರೊ. ಪ್ರ.ಸಂ. 2013 ಕರ್ನಾಟಕ ಸಂಗಾತಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
3. ಶಿವರುದ್ರಪ್ಪ ಜಿ.ಎಸ್. ಡಾ. ಪ್ರ.ಸಂ. 1974 ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ , ಸಂಪುಟ–1 ರಿಂದ 10 ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
4. ಶಿವರುದ್ರಪ್ಪ ಜಿ.ಎಸ್. ಡಾ. ಸಂ. 2010 ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂಪುಟ.1 ರಿಂದ 10 ಸಪ್ನಬುಕ್ ಹೌಸ, ಬೆಂಗಳೂರು

❖❖❖

ಬಾನಿನ ಬಯಲಲಿ ಓಕುಳಿಯಾಟವ
ಆಡಿದವರು ಯಾರವರು?
ಬಣ್ಣವನೆರಚದೆ ಚಂದಿರನಾಕೃತಿ
ಚಿತ್ರವ ಬರೆದಿಹರು.

ಕನ್ನಡ ರಂಗಭೂಮಿ – ಐತಿಹಾಸಿಕ ನೆಲೆಗಳು

ಡಾ. ಎಚ್.ಎಮ್. ಚನ್ನಪ್ಪಗೋಳ
ಮುಖ್ಯಸ್ಥರು ಕನ್ನಡ ವಿಭಾಗ,
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ – 590001

ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ನಾಟಕ ಕಲೆಯೂ ಒಂದು. ನಾಟಕ ಕಾವ್ಯದ ಒಂದು ಪ್ರಕಾರ. ಜಗತ್ತಿನ ಇತಿಹಾಸದಲ್ಲಿ ನಾಟಕವು ಮೊದಲು ಕಂಡುಬರುವುದು ಗ್ರೀಕ್ ರುದ್ರನಾಟಕಗಳ ಮೂಲಕ. ಈ ಕುರಿತಾಗಿ ಅರಿಸ್ಟಾಟಲ್‌ನು ಕಾವ್ಯ ಮೀಮಾಂಸೆಯ ಮೂಲಕ ನಾಟ್ಯ ಮೀಮಾಂಸೆಯನ್ನು ಹೇಳುವಾಗ ರುದ್ರನಾಟಕದ ಕುರಿತು ಹೇಳಿರುತ್ತಾನೆ. ಅವನ ಕಾಲಕ್ಕೆ ಗ್ರೀಕ್ ನಾಟಕ ತನ್ನ ಉತ್ಕರ್ಷವನ್ನು ಮುಟ್ಟಿ ಅವನತಿಯತ್ತ ತಿರುಗಿತ್ತು. ಗ್ರೀಕ್ ರುದ್ರ ನಾಟಕ ಕೆಲವು ವಿಷಯಗಳಲ್ಲಿ ಇಂದಿಗೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. 'ರುದ್ರ ನಾಟಕ ಗ್ರೀಕರ ಧಾರ್ಮಿಕ ಪ್ರಜ್ಞೆಯ ಏಕಮಾತ್ರವಾದ ಅಭಿವ್ಯಕ್ತಿಯ ಮಾಧ್ಯಮವಾಗಿತ್ತು. ನಾಟಕಕಾರನಿಗೆ ಗ್ರೀಕರು ಕೊಟ್ಟಿದ್ದ ಸಾಮಾಜಿಕ ಗೌರವ ಹಾಗೂ ಮನ್ನಣೆಗಳು ಬೇರೆ ಯಾವ ದೇಶಗಳಲ್ಲಿಯೂ ಕಾಣಸಿಗುವುದಿಲ್ಲ.' ಎಲ್ಲಕ್ಕಿಂತ ಹೆಚ್ಚಾಗಿ ಗ್ರಿಕ್ ಸಂಸ್ಕೃತಿಯ ಎಲ್ಲ ಅಂಶಗಳನ್ನೂ, ಗ್ರೀಕರ ತಿಳುವಳಿಕೆಯ ರೀತಿಗಳನ್ನೂ, ಜೀವನಾದರ್ಶಗಳನ್ನೂ ರುದ್ರನಾಟಕ ಅತ್ಯಂತ ಕಲಾತ್ಮಕವಾಗಿ ಬಿಂಬಿಸುತ್ತದೆ.

ಪ್ರಾಚೀನ ಗ್ರೀಕರು ನಡೆಸುತ್ತಿದ್ದ ಆಚರಣೆಗಳಲ್ಲಿ ಗ್ರೀಕ್ ನಾಟಕದ ಮೂಲವಸ್ತುವನ್ನು ಗುರುತಿಸಬಹುದು. ಅಥೇನ್ಸನಲ್ಲಿ 'ಡಯಾನಿಸಸ್' ದೇವತೆಗೆ ಪ್ರತಿ ವರ್ಷ ಎರಡು ಉತ್ಸವಗಳು ನಡೆಯುತ್ತಿದ್ದವು. ಅವುಗಳಲ್ಲಿ ಒಂದಾದ ವಸಂತೋತ್ಸವದಲ್ಲಿ ದೇವತಾ ಮಹಿಮೆಗಳನ್ನು ಕೊಂಡಾಡುವ 'ಡಿತಿರ್ಯಾಂಬಸ್' ಮೇಳಗೀತವನ್ನು ಹಾಡುತ್ತಿದ್ದರು. ನೃತ್ಯಾಭಿನಯಗಳಿಂದ ಕೂಡಿದ ಈ ಜನಪದ ಮೇಳ ಗೀತಗಳು ಕ್ರಿ. ಶ. ಪೂ. 6ನೆಯ ಶತಮಾನದಲ್ಲಿ ಸಂವಾದ ರೂಪಕ್ಕೆ ತಿರುಗಿ ಕ್ರಮೇಣ ಅದರಿಂದ ರುದ್ರ ನಾಟಕವು ಹುಟ್ಟಿಕೊಂಡಿರಬಹುದಾಗಿದೆ.

ಕ್ರಿ.ಶ. 1450ರಲ್ಲಿ ಇಂಗ್ಲಿಷ್ ನಾಟಕಗಳ ಹುಟ್ಟಿಗೆ ಕಾರಣವಾದ ಕ್ರೈಸ್ತಮತೀಯ ಆಚರಣೆಗಳು ಮತ್ತು ಚರ್ಚಿನ ಪ್ರಭಾವ ಇಂಗ್ಲೀಷ ರಂಗಭೂಮಿಯ ಮೇಲೆ, ಫ್ರೆಂಚ್ ರಂಗಭೂಮಿಯ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಂಡಿತ್ತು. ಫ್ರೆಂಚ್ ರಂಗಭೂಮಿಯ ಉದಯಕ್ಕೆ ಕ್ರೈಸ್ತ ಧರ್ಮವು ಪ್ರೇರಣೆ ಕೊಟ್ಟಿದ್ದರೆ ಜರ್ಮನಿಯಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಭಿನ್ನವಾದ ಜಾನಪದ ಮೂಲದಿಂದ ನಾಟಕವು ಹುಟ್ಟಿತೆಂದು ಹೇಳುತ್ತಾರೆ.

ಪ್ರಾಚೀನ ಭಾರತದಲ್ಲಿ (ಕರ್ನಾಟಕವೂ ಸೇರಿದಂತೆ) ನೃತ್ಯ ಹಾಗೂ ನಾಟಕಗಳು ಒಂದನ್ನೊಂದು ಅವಲಂಬಿಸಿದ್ದವು. "ಕಾವ್ಯೇಷು ನಾಟಕಂ ರಮ್ಯಂ" ಕಾವ್ಯಗಳಲ್ಲಿಯೇ ನಾಟಕವು ರಮ್ಯವಾದುದು. ಎಂಬ ಮಾತಿನಂತೆ ಪ್ರಾಚೀನ ಕಾಲದಲ್ಲಿ ಕಾವ್ಯವೆಂದರೆ ಪದ್ಯ, ಗದ್ಯ ಮತ್ತು ನಾಟಕ ಮೂರಕ್ಕೂ ಬಳಸುತ್ತಿದ್ದ ಪದವಾಗಿದ್ದಿತು. ಈ ಮೂರರಲ್ಲೂ

ನಾಟಕ ರಮ್ಯವಾದುದು. ಎಂಬ ಮಾತಿನಿಂದ ನಾಟಕಗಳು ಅಂದಿನಿಂದಲೂ ಬಳಕೆಯಲ್ಲಿದ್ದವು, ಅಲ್ಲದೇ ನಾಟಕಕ್ಕೆ ಪ್ರಥಮ ಸ್ಥಾನ ಇತ್ತು ಎನ್ನಬಹುದು. ಋಗ್ವೇದದ ಸಂವಾದ ಸೂಕ್ತಗಳೇ ಭಾರತದಲ್ಲಿ ಸಂಸ್ಕೃತ ನಾಟಕಗಳ ಬೀಜಾಂಕುರಕ್ಕೆ ಕಾರಣವೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಕ್ರಿ.ಶ.ಪೂ.2ನೆಯ ಶತಮಾನದಲ್ಲಿ ಅಭಿನಯ, ನೃತ್ಯ, ಗೀತ, ವಾದ್ಯಗಳೊಡನೆ ನಾಟ್ಯ ಪರಿಣಮಿಸಿದೆ. ಅಂತೆಯೇ ಭಾಸ, ಕಾಳಿದಾಸರಿಂದ ಮೊದಲುಗೊಂಡು ಸಂಸ್ಕೃತ ನಾಟಕಕಾರರ ಕೃತಿಗಳು ಸಾವಿರಾರು ವರ್ಷಗಳು ಗತಿಸಿದರೂ ಇಂದಿಗೂ ನಿತ್ಯ ನೂತನವಾಗಿ ಉಳಿದುಕೊಂಡು ಬಂದಿವೆ.

ಈ 'ನಾಟಕ' ಎಂಬ ಪದ ಗೋವಿಂದ ವೈದ್ಯ ಮತ್ತು ರತ್ನಾಕರವರ್ಣಿಗಳ ಕಾವ್ಯಗಳಲ್ಲಿ ಅಲ್ಲಲ್ಲಿ ನೋಡಸಿಗುತ್ತವೆ. 17ನೆಯ ಶತಮಾನದ ಆದಿಭಾಗದಲ್ಲಿದ್ದ ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿ ಬರುವ–

ಶಬ್ದಾಗಮಾ ಯುಕಾಗಮಾ ಪರಮಾ

ಗಮಾ ವಿಷಯಾಣಾಂ ತಥಾ

ಕಾವ್ಯನಾಟಕಾಲಂಕಾರ ಕಲಾಶಾಸ್ತ್ರ–ಎಂಬ ಈ ಪದ್ಯವನ್ನು ನೋಡಿದಾಗ ಕನ್ನಡ ನುಡಿಯಲ್ಲಿಯೇ ನಾಟಕ ಎಂಬ ಶಬ್ದ ಬಳಕೆಯಾದದ್ದು ತಿಳಿದುಬರುತ್ತದೆ. ಕುಮಾರವ್ಯಾಸನಲ್ಲಿಯೂ ನಾಟಕ ಪದ ಅಲ್ಲಲ್ಲಿ ಬಳಕೆಯಾಗಿದೆ. ಕ್ರಿ.ಶ.1045ರಲ್ಲಿ ನಿಲ್ಲಿಸಿದ ಧಾರವಾಡದ ಹತ್ತಿರವಿರುವ ಮುಗುದ(ಮುಗುಂದ) ಎಂಬ ಹಳ್ಳಿಯಲ್ಲಿ ನಿಲ್ಲಿಸಿರುವ ದೊಡ್ಡ ಶಿಲಾಫಲಕದಲ್ಲಿ "ಶ್ರೀ ಮನ್ಮಹಾಸಾಮನ್ತಂ ಮಾರ್ತಾನ್ಡಯ್ಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ ಶಿಲಾಸ್ತಂಭಮಂ ಆ ಚಂದ್ರರ್ಕ ತಾರಾಂಭರಂ ನಿಲಿಸಿದಂ" ಎಂದು ಸಾರುವ ಸಾಲುಗಳಿವೆ. ಈ ಶಿಲಾಫಲಕ ಅಂದಿನ ಕನ್ನಡ ನಾಟಕ ಶಾಲೆಗಳ ಬಗ್ಗೆ ಸಾಕ್ಷಿ ಹೇಳುತ್ತದೆ.

ಆದರೆ ಬರಬರುತ್ತ ಅವೆರಡೂ ವಿಭಿನ್ನ ಕಲಾ ಪ್ರಭೇದಗಳಾಗಿ ಬೇರ್ಪಡೆಯಾದವು. ನಾಟಕವು ಹತ್ತು ಬಗೆಯ ರೂಪಕಗಳಲ್ಲಿ ಒಂದು ಪ್ರಮುಖವಾದ ಪ್ರಭೇದ, ಅಷ್ಟೆ; ರೂಪಕವು ದೃಶ್ಯಕಾವ್ಯಕ್ಕಿದ್ದ ಮತ್ತೊಂದು ಹೆಸರು; ನಟರು ರೂಪಕಗಳನ್ನು ಧರಿಸುವುದರಿಂದ ಇದಕ್ಕೆ ರೂಪಕವೆಂದು ಹೆಸರಾಯಿತೆಂದು 'ಸಾಹಿತ್ಯದರ್ಪಣ'ವು ಹೇಳುತ್ತದೆ. ಸಿಂಹಭೂಪಾಲನ 'ರಸಾರ್ಣವ ಸುಧಾಕರ'ವು ಈ ಹೆಸರು ಬರಲು ಕಾರಣವನ್ನು ಈ ರೀತಿ ವಿವರಿಸುತ್ತದೆ; ಪಾತ್ರಗಳಿಗೂ ನಟರಿಗೂ ಪ್ರದರ್ಶನದ ಸಂದರ್ಭದಲ್ಲಿ ಅಭೇದವು ಏರ್ಪಡುವುದರಿಂದ ರೂಪಕವೆಂಬ ಅಲಂಕಾರದ ರಸ ಸಾದೃಶ್ಯದ ಮೇಲೆ ಈ ಹೆಸರು ಬಂದಿದೆ. ನೇಮಿಚಂದ್ರನ 'ಲೀಲಾವತಿ ಪ್ರಬಂಧ'ದಲ್ಲಿ ಭಾರತೀಯ ಅಲಂಕಾರಿಕರನ್ನನುಸರಿಸಿ ಅಭಿನಯವನ್ನು ವಾಚಿಕ, ಆಹಾರ್ಯ, ಆಂಗಿಕ, ಸಾತ್ವಿಕಗಳೆಂದು ನಾಲ್ಕು ರೀತಿಯಾಗಿ ವಿಂಗಡಿಸಿ ಹೇಳಿದ್ದಾನೆ. ನಾಟಕದಲ್ಲಿ ಪಾತ್ರ ವಹಿಸುವುದನ್ನೇ ವೃತ್ತಿಯಾಗುಳ್ಳ ರಂಗೋಪಜೀವಿಗಳ ಉಲ್ಲೇಖ 'ಬ್ರಹ್ಮಪುರಾಣ'ದಲ್ಲಿ ಬರುತ್ತದೆ. ನಟರನ್ನು ವಚನಗಳು ನಟ್ಟುವ, ನಟ್ಟುವಿಗ ಎಂದೂ ಕರೆಯುತ್ತವೆ.

ಕನ್ನಡ ನಾಟಕ ರಂಗಭೂಮಿಯ ಇತಿಹಾಸ ಪ್ರಾರಂಭವಾಗುವುದು ಮೈಸೂರಿನ ಅರಸ ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಸಿಂಘಿರಾರ್ಯ ಎಂಬ ಕವಿಯಿಂದ ರಚಿತಗೊಂಡ 'ಮಿತ್ರವಿಂದಾ ಗೋವಿಂದಾ' ಎಂಬ ನಾಟಕದೊಂದಿಗೆ. ಇದು ಶ್ರೀ ಹರ್ಷನ ರತ್ನಾವಳಿ ಎಂಬ ಸಂಸ್ಕೃತ ನಾಟಕದ ಅನುವಾದವಾಗಿದೆ. ಆದರೆ ಈಗಾಗಲೇ

ನೋಡಿದಂತೆ ಪ್ರಾಚೀನ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ 'ನಾಟಕ' ಎಂಬ ವಿಚಾರ ಮೇಲಿಂದ ಮೇಲೆ ಉಲ್ಲೇಖವಾಗುತ್ತದೆ. ಶ್ರೀವಿಜಯನ ಕವಿರಾಜಮಾರ್ಗದಲ್ಲಿಯೂ ಮೊದಲ ಆಶ್ವಾಸದ ಆರನೆಯ ಪದ್ಯದಲ್ಲಿಯೂ ನಾಟಕದ ಉಲ್ಲೇಖವಿದೆ. ಹಾಗಾಗಿ ಈ ಹಿಂದೆ ನಾಟಕಗಳಿರಲ್ಲಿಕ್ಕೇ ಸಾಕು, ಆದರೆ ಅವು ದೊರೆತಿರದ ಕಾರಣ 'ಮಿತ್ರವಿಂದಾ ಗೋವಿಂದಾ' ನಾಟಕಕ್ಕೆ ಅಷ್ಟು ಗರಿಮೆ ಎನ್ನಬಹುದು.

ಮೈಸೂರಿನ ಕಂಠೀರವ ನರಸರಾಜರ (1638–1659) ಅರಮನೆಯಲ್ಲಿ ಮನೋಹರವಾದ ನಾಟಕಶಾಲೆ ಇದ್ದಿತೆಂದು ಆ ರಾಜರ ಇತಿಹಾಸ ರಚಿಸಿದ ಗೋವಿಂದ ವೈದ್ಯ ಹೇಳಿದ್ದಾನೆ. ಲಿಂಗಣ್ಣ ಕವಿಯು 'ಕೆಳದಿ ನೃಪವಿಜಯ'ದಲ್ಲಿ ಕೆಳದಿಯ ವೆಂಕಟಪ್ಪ ನಾಯಕರ ಬಗ್ಗೆ ಬರೆಯುತ್ತಾ "ಇಕ್ಕೇರಿಯ ಮನೆಯೊಳ್ ಚಿತ್ರತರ ರಚನಾ ಕೌಶಲ್ಯದಿಂ ನಾಟಕ ಶಾಲೆಯಂ ನಿರ್ಮಾಣಗೈದನ್" ಎಂದಿದ್ದಾನೆ. ಹಾಗೆಯೇ 'ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ರಾಜದಾನಿಯಲ್ಲಿ ಪಟ್ಟಣದಲ್ಲಿ ನಾಟಕಶಾಲೆಗಳಿದ್ದವು. ಇಕ್ಕೇರಿ, ತಂಜಾವೂರು ಮೊದಲಾದ ಪ್ರಾದೇಶಿಕ ಕೇಂದ್ರಗಳಲ್ಲಿಯೂ ನವರತ್ನಖಚಿತವಾದ ಅಲಂಕಾರಿಕ ನಾಟಕಶಾಲೆಗಳಿದ್ದವು ಎಂದು ಬಿ.ಎ. ಸಾಲತೊರೆ ಅವರ ಸಂಶೋಧನೆಯಿಂದ ತಿಳಿದು ಬಂದಿದೆ.'

ಜನಪದ ರಂಗಭೂಮಿ

ಶ್ರೀಮಂತರಿಗೆ ರಾಜ ಮಹಾರಾಜರಿಗೆ ನಾಟಕ ಶಾಲೆಗಳಿದ್ದರೆ, ಜನಸಾಮಾನ್ಯನಿಗೆ ಮನರಂಜನೆಗಾಗಿ ಜಾನಪದ ರಂಗಭೂಮಿಗಳಿದ್ದವು. ಜಾನಪದ ರಂಗಭೂಮಿಯೆಂದರೆ ಅದೊಂದು ಜನಸಾಮಾನ್ಯರ ಮನರಂಜನೆ, ಮನೋವಿಕಾಸಕ್ಕಾಗಿ ಮೈತಳೆದ ಗ್ರಾಮೀಣ ರಂಗಭೂಮಿ ಎಂದು ಹೇಳಬಹುದಾಗಿದೆ. ಇಲ್ಲಿ ಯಕ್ಷಗಾನ, ಸಣ್ಣಾಟ, ದೊಡ್ಡಾಟ ಇತ್ಯಾದಿಗಳು ಬರುತ್ತವೆ.

ಇಂದಿಗೂ ಪ್ರಚಲಿತದಲ್ಲಿರುವ ದೊಡ್ಡಾಟ, ಸಣ್ಣಾಟ, ಬಯಲಾಟ, ಯಕ್ಷಗಾನ, ಯಲ್ಲಮ್ಮನ ಕುಣಿತ, ಗೊರವರ ಕುಣಿತ, ಪೂಜಾ ಕುಣಿತ, ಪುರವಂತರ ಕುಣಿತ, ರಾಧಾನಾಟ, ಸಂಗ್ಯಾಬಾಳ್ಯಾನಾಟ, ತೊದಲುಬೊಂಬೆಯಾಟ, ಈ ಎಲ್ಲಾ ಜನಪದ ಆಟಗಳು ಜನಪದ ರಂಗಭೂಮಿ ಬೆಳೆದು ಬರಲು ಪ್ರೇರಣೆಯಾಗಿವೆ. ಹೀಗೆ ಜಾನಪದ ರಂಗಭೂಮಿಯೆಂದರೆ; ಜನಸಾಮಾನ್ಯ ಜನರ ಮನರಂಜನೆಗಾಗಿ ಮೈತಳೆದದ್ದಾಗಿದೆ. ಇಲ್ಲಿ ಹಾಡು ಕುಣಿತಗಳೇ ಮುಖ್ಯವಾಗಿರುತ್ತವೆ. ಈ ಹಾಡು ಕುಣಿತಗಳೋ ದೇವಾರಾಧನೆಯಿಂದ ಪ್ರಾರಂಭವಾಗಿ ದೇವರನ್ನೂ, ಭೂತಗಳನ್ನು ನಿಸರ್ಗವನ್ನೂ ಆರಾಧಿಸುವ ಮೂಲಕ ಅವುಗಳಿಂದ ರಕ್ಷಣೆ ಪಡೆಯುವ ವಿಷಯ ವಸ್ತುವನ್ನೊಳಗೊಂಡ ರೂಪಕಗಳಿರುತ್ತಿದ್ದವು.

ಭಾರತದಲ್ಲಿ ಆಧುನಿಕ ರಂಗಭೂಮಿಯ ಉಗಮ ಮತ್ತು ಬೆಳವಣಿಗೆ: ಜಗತ್ತಿನ ಇತರೆ ದೇಶಗಳಿಗೆ ಹೋಲಿಸಿದರೆ ಅಂಥ ಪ್ರಾಚೀನ ಇತಿಹಾಸ ಇದ್ದಂತೆ ತೋರಬರುವುದಿಲ್ಲ. ಆದರೆ ನಮ್ಮ ಸಾಹಿತ್ಯ ಸಂಸ್ಕೃತಿಗೆ ಸಾವಿರಾರು ವರ್ಷಗಳ ಪರಂಪರೆ ಇತಿಹಾಸ ಇರುವುದು ಸುಳ್ಳಲ್ಲ. ಏಕೆಂದರೆ ಒಂದನೆಯ ಶತಮಾನದ ಭರತಮುನಿಯ 'ನಾಟ್ಯಶಾಸ್ತ್ರ'ದಲ್ಲಿ ಕೆಲವು ಅಂಶಗಳನ್ನು ಗುರುತಿಸಬಹುದು. ಆದರೂ ಆಧುನಿಕ ರಂಗಭೂಮಿಗೆ ಕನ್ನಡ ರಂಗಪಂಪರೆಯೊಂದಿಗೆ ಪಾಶ್ಚಿಮಾತ್ಯ ರಂಗಪರಂಪರೆಯೂ

ಪ್ರೇರಣೆಯಾಗಿದ್ದನ್ನು ಗುರುತಿಸಬಹುದಾಗಿದೆ. "1775–76ರಲ್ಲಿ ಕಲ್ಕತ್ತೆಯಲ್ಲಿ ಆಂಗ್ಲ ನಾಟಕದ ಪ್ರಭಾವದಿಂದಾಗಿ ಕಲ್ಕತ್ತೆಯ ಶ್ರೀಮಂತ ಜಮೀನ್ದಾರರು ವಂತಿಗೆ ಕೂಡಿಸಿ ರಂಗಮಂದಿರವನ್ನು ಪುನಾರಚಿಸಿದ ಮೇಲೆ ನಮ್ಮ ದೇಶದ ವೃತ್ತಿ ನಾಟಕಮಂದಿರ ಹುಟ್ಟಿತೆನ್ನಲಾಗಿದೆ."

ಇಂಗ್ಲೆಂಡಿನಿಂದ ಬಂದು ಕಲ್ಕತ್ತೆಯಲ್ಲಿ ನೆಲೆಸಿದ ವ್ಯಾಪಾರಿ ಸಂಸ್ಥೆಯ ಕಲಾವಿದರು ಕೂಡಿ ಆಡುತ್ತಿದ್ದ ನಾಟಕ ಪ್ರದರ್ಶನಗಳನ್ನು ನೋಡಿದ ಶ್ರೀಮಂತ ಜಮೀನ್ದಾರರು ಬಂಗಾಲಿ ನಾಟಕಗಳನ್ನು ಆಡಲು ಸ್ಥಾಪಿಸಲು ಪ್ರಯತ್ನಿಸಿದ ಫಲವಾಗಿ 1835ರಲ್ಲಿ ಎರಡು ಲಕ್ಷ ರೂಪಾಯಿಯ ವೆಚ್ಚದಲ್ಲಿ ರಂಗಮಂದಿರ ನಿರ್ಮಾಣವಾಯಿತು.ಅದರಲ್ಲಿ 'ವಿದ್ಯಾಸುಂದರ' ಎಂಬ ನಾಟಕದ ಪ್ರಥಮ ಪ್ರಯೋಗ ನಡೆಯಿತು. ಇದೇ ಹಿನ್ನೆಲೆಯಲ್ಲಿ 1872ರಲ್ಲಿ 'ರಾಷ್ಟ್ರೀಯ ನಾಟಕರಂಗ'ವು ಹುಟ್ಟಿಕೊಂಡಿತು. ಹಾಗೆಯೇ ಮುಂದೆ ಮುಂಬಯಿಯಲ್ಲಿ ಅನೇಕ ರಂಗಮಂದಿರಗಳೂ ಹುಟ್ಟಿಕೊಂಡು ಅಲ್ಲಿ ಅನೇಕ ಮರಾಠಿ ನಾಟಕಗಳನ್ನು ಆಡಲಿಕ್ಕೆ ಪ್ರಾರಂಭವಾಯಿತು.

'ಮುಂಬಯಿಯಲ್ಲಿ ಮರಾಠಿ ರಂಗಭೂಮಿ ಪ್ರಭಲವಾಗಿದ್ದರೂ ಅಲ್ಲಿನ ಕನ್ನಡ ನಿರ್ದೇಶಕರು ಪ್ರತ್ಯೇಕವಾದ ಅಸ್ತಿತ್ವವಿರುವಂತೆ ನೋಡಿಕೊಂಡಿದ್ದಾರೆ. ಆರ್.ಡಿ ಕಾಮತ್, ಕೆ.ಜಿ.ರಾವ್, ಆರೀಪತಿ ಬಲ್ಲಾಳ, ಕಿಶೋರಿ ಬಲ್ಲಾಳ, ಮೈಸೂರು ಸಸೋಸಿಯೇಷನ್ನಿನ ಮಂಜುನಾಥದ್ವಯರು ಮೊದಲಾದ ನಿರ್ದೇಶಕರು ಕನ್ನಡ ರಂಗಭೂಮಿಗಾಗಿ ದುಡಿದಿದ್ದಾರೆ.' ದೆಹಲಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆಯಿದ್ದರೂ ಅಲ್ಲಿ ಕನ್ನಡಿಗರಿಗೆ ಪ್ರಾಶಸ್ಯ ಕಡಿಮೆ. ಅಲ್ಲಿ ಹೆಚ್ಚಾಗಿ ಹಿಂದಿ ನಾಟಕಗಳು ನಡೆಯುತ್ತಿರುತ್ತವೆ. ರಾಷ್ಟ್ರೀಯ ನಾಟಕ ಶಾಲೆಯಾದರೂ ಹಿಂದಿ ಹೊರತು ಬೇರೆ ಭಾಷೆಗಳ ನಾಟಕಕ್ಕೆ ಅಲ್ಲಿ ಪ್ರಾಶಸ್ತ್ಯ ಕಡಿಮೆ; ಬಿ.ವಿ. ಕಾರಂತರು ಇದ್ದಾಗ ಕನ್ನಡಕ್ಕೆ ಸ್ವಲ್ಪು ಪ್ರಾಶಸ್ತ್ಯ ಕೊಟ್ಟಿದ್ದರು.

ಇನ್ನು ಕಲಾವಿದರು ಎಂದರೆ ದೇವರ ಸಮಾನ ಎಂದು ನೋಡುವುದು ಭಾರತದ ವೈಶಿಷ್ಟ್ಯವಾಗಿದೆ. ಇದನ್ನು ನಾವು ಭಾರತದಲ್ಲಿರುವ ಪ್ರೋಸೆನಿಯಂ ಥೇಟರಿನಲ್ಲಿ ಕಾಣಬಹುದು. ನಮ್ಮಲ್ಲಿ ರಂಗಭೂಮಿ ಎತ್ತರದಲ್ಲಿರುತ್ತದೆ. ಪ್ರೇಕ್ಷಕ ಸ್ವಲ್ಪು ಕೆಳಗಡೆ ಇರುತ್ತಾನೆ. ಆದರೆ ಗ್ರೀಕ್ ರಂಗಭೂಮಿಯಲ್ಲಿ ಪ್ರೇಕ್ಷಕರು ಎತ್ತರದಲ್ಲಿರುತ್ತಾರೆ, ನಾಟಕ ಆಡುವ ಕಲಾವಿದರು ಪ್ರೇಕ್ಷಕರಿಗಿಂತ ಕೆಳಗಡೆ ಇರುತ್ತಾರೆ. ಇದರಿಂದ ಭಾರತದ ಮತ್ತು ಗ್ರೀಕ್‌ರ ರಂಗಭೂಮಿಯ, ಕಲಾವಿದರ ಮತ್ತು ಕಲಾರಸಿಕರ ಆದ್ಯತೆಗಳು ಗೌರವಾದರಗಳು ತಿಳಿಯುತ್ತದೆ.

ಕನಾಟಕದಲ್ಲಿ ಆಧುನಿಕ ರಂಗಭೂಮಿಯ ಉಗಮ ಮತ್ತು ಬೆಳವಣಿಗೆ: ಕನ್ನಡ ರಂಗಭೂಮಿಯ ಉಗಮಕ್ಕೆ ಸಂಬಂಧಿಸಿದಂತೆ ಶ್ರೀರಂಗರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ಬ್ರಿಟೀಷರು ಕಲ್ಕತ್ತೆಯನ್ನು ರಾಜದಾನಿಯನ್ನಾಗಿ ಮಾಡಿಕೊಂಡಿದ್ದರಿಂದ ಅಲ್ಲಿ ಇಂಗ್ಲೀಷ ಪ್ರಭಾವ ಇದ್ದಿದ್ದು ನಿಜವಾದರೂ ಕರ್ನಾಟಕದಲ್ಲಿ ಯಾವ ಇಂಗ್ಲೀಷ್ ಪ್ರಭಾವವೂ ಇರಲಿಲ್ಲ. ಬಂಗಾಲಿ ರಂಗಭೂಮಿಯ ಪ್ರಭಾವವೂ ಬೀರಲ್ಲಿಲ್ಲ. "ಇಂಗ್ಲೀಷ ಕಲಿತ ಭಾರತೀಯರಿಗಲ್ಲದೆ; ಮಿಕ್ಕ ಭಾರತೀಯರಿಗೂ ಕೂಡ ಇದು ಆಕರ್ಷಕವಾಗುವಂತೆ ಉರ್ದುವಿನಲ್ಲಿ ನಾಟಕಗಳನ್ನು ರಚಿಸಿ ಅದನ್ನು ಲಾಭದಾಯಕ ವ್ಯವಸಾಯವನ್ನಾಗಿ ಮಾಡಿಕೊಳ್ಳಲು ಒಂದು ನಾಟಕ ಮಂಡಳಿ ಅಸ್ಥಿತ್ವದಲ್ಲಿ ಬಂದಿತ್ತು. ಅದೇ ಹೆಸರಾಂತ ಪಾರ್ಶಿ ಕಂಪನಿ." ಇವರು ಶೆಕ್ಸಪೀಯರನ ನಾಟಕಗಳನ್ನು

ಮಾಡುವಾಗಲೂ ನಮ್ಮ ಪ್ರೇಕ್ಷಕರ ಆಸಕ್ತಿಗೆ ತಕ್ಕಂತೆ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳುತ್ತಿದ್ದರು. ಭಾಷೆಯನ್ನರಿಯದ ಪ್ರೇಕ್ಷಕರನ್ನು ಸೆಳೆಯಲು ಬಣ್ಣ, ವೇಷ, ಬೆಳಕು, ಸೀನರಿಗಳ ಮೂಲಕವೇ ಕೋಲಾಹಲವನ್ನು ಎಬ್ಬಿಸುತ್ತಿದ್ದರು. ಇದನ್ನು ನೋಡಿದಾಗ ಈ ಪಾರ್ಶಿ ಕಂಪನಿಯೇ ನಮ್ಮ ಆಧುನಿಕ ಕನ್ನಡ ರಂಗಭೂಮಿಯ ಹುಟ್ಟಿಗೆ ಕಾರಣವಾಯಿತು ಎನ್ನಬಹುದು.

ಪಾರ್ಶಿ ಕಂಪನಿಯ ನಾಟಕಗಳನ್ನು ನೋಡಲು ಜನ ಮಗಿಬೀಳುತ್ತಿದ್ದರು. ಅದನ್ನು ಗಮನಿಸಿದ ಜಯಚಾಮರಾಜೇಂದ್ರ ಅರಸರು ಇಂತಹ ಪ್ರಯೋಗಗಳನ್ನು ನಮ್ಮಲ್ಲಿಯೇ ನಡೆಸಬಹುದಲ್ಲವೇ ಎಂದು ವಿಚಾರಿಸಿ "ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ" ಪ್ರಾರಂಭಿಸಿದರು. ಅಲ್ಲಿ ಆಸ್ಥಾನ ಕವಿಗಳಾಗಿದ್ದ ಬಸವಪ್ಪಶಾಸ್ತ್ರಿಗಳು ಅನೇಕ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ; ಕಲಾವಿದರಿಗೆ ಆಡಲು ಅನುಕೂಲ ಮಾಡಿ ಕೊಟ್ಟರು ಅಲ್ಲಿಂದ ಕನ್ನಡ ಶಿಷ್ಟ ರಂಗಭೂಮಿ ಪರಂಪರೆ ಪ್ರರಂಭವಾಯಿತು. ಅಲ್ಲಿಂದ ಮುಂದೆ ಕನ್ನಡದ ಅನೇಕ ಕಂಪನಿಗಳು ಹುಟ್ಟಿಕೊಂಡು; ಕನ್ನಡದ್ದೇ ನಾಟಕಗಳನ್ನು ಬರೆಸಿ ಆಡಲಾರಂಭಿಸಿದರು. ಆರಂಭದಲ್ಲಿ ಅವು ಹೆಚ್ಚಾಗಿ ಪೌರಾಣಿಕ ಮತ್ತು ಐತಿಹಾಸಿಕ ವಿಷಯಗಳನ್ನೊಳಗೊಂಡ ಕಥಾವಸ್ತುವಿನ ನಾಟಕಗಳೇ ಆಗಿದ್ದು ವಿಶೇಷ.

ಇದೇ ಸಂದರ್ಭದಲ್ಲಿ ಸಕ್ಕರಿ ಬಾಳಾಚಾರ್ಯರು 'ವೀರ ನಾರಾಯಣ ಪ್ರಸಾದಿತ ನಾಟಕ ಮಂಡಳಿ' ಸ್ಥಾಪಿಸಿದರು. ವರದಾಚಾರ್ಯರು 'ರತ್ನಾವಳಿ ನಾಟಕ ಸಭಾ' ಅಲ್ಲದೇ, ಮುಂದೆ ಗುಬ್ಬಿ ಕಂಪನಿ ಎಂದೇ ಪ್ರಖ್ಯಾತವಾದ 'ಶ್ರೀ ಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ'ಯು 1884ರಲ್ಲಿ ಶ್ರೀ ಚಂದಣ್ಣನವರಿಂದ ಸ್ಥಾಪನೆಗೊಂಡು; ಅನೇಕ ಪ್ರಯೋಗಗಳನ್ನು ಮಾಡಿ 1917ರಲ್ಲಿ ಗುಬ್ಬಿ ವೀರಣ್ಣನವರ ಕೈಗೆ ಬರುತ್ತದೆ. ಹಾಗೆಯೇ ಉತ್ತರ ಕರ್ನಾಟಕದಲ್ಲೂ ಅನೇಕ ನಾಟಕ ಕಂಪನಿಗಳು ಹುಟ್ಟಿಕೊಂಡಿವೆ. ಅಲ್ಲದೇ ಇನ್ನೂ ಅನೇಕ ಕಂಪನಿಗಳು ನಾಟಕಗಳನ್ನು ಆಡುತ್ತಿರುವುದನ್ನು ಕಾಣುತ್ತೇವೆ. ಹೀಗೆ ಮಧ್ಯಮ ವರ್ಗದ ಜನರಿಗೂ ನಾಟಕ ನೋಡುವ ಅವಕಾಶ ಈ ಸಂದರ್ಭದಲ್ಲಾಗುತ್ತದೆ. ಇದಲ್ಲದೇ ಅನೇಕ ಮರಾಠಿ ಕಂಪನಿಗಳೂ ಉತ್ತರ ಕರ್ನಾಟಕದಾದ್ಯಂತ ತಮ್ಮ ನಾಟಕಗಳನ್ನಾಡಿ ಜನರನ್ನು ಆಕರ್ಷಿಸಲಾರಂಭಿಸುತ್ತವೆ. ಇದರಿಂದ ಪ್ರಭಾವಿತರಾದ ಕನ್ನಡದ ಯುವಕರೂ ಮರಾಠಿ ನಾಟಕಗಳನ್ನು ಮತ್ತು ಕನ್ನಡ ನಾಟಕಗಳನ್ನು ಕಲಿತು ಆಡಲಾರಂಭಿಸುತ್ತಾರೆ. ಸಕ್ಕರೆ ಬಾಳಾಚಾರ್ಯರು ಇದರ ನೇತೃತ್ವವನ್ನು ವಹಿಸಿಕೊಳ್ಳುತ್ತಾರೆ.

ಕನ್ನಡ ರಂಗಸಜ್ಜಿಕೆ (ರಂಗಭೂಮಿ) ಸಾಗಿಬಂದ ದಾರಿ: ಕನ್ನಡ ರಂಗಭೂಮಿ ಆರಂಭಿಕ ಹಂತದಲ್ಲಿ ಯಾವ ರೀತಿ ಇದ್ದಿತು; ಅದು ಮುಂದೆ ಹೇಗೆ ಪರಿವರ್ತನೆ ಹೊಂದುತ್ತಾ ಬಂದಿತು, ಎಂಬುದನ್ನು ಈ ಮೊದಲು ಗುಬ್ಬಿ ಕಂಪನಿಯ ಮಾಲಿಕರಾದ ಗುಬ್ಬಿ ವೀರಣ್ಣನವರು, ಏಣಗಿ ಬಾಳಪ್ಪನವರು, ಇವತ್ತಿನ ರಂಗ ಕಲಾವಿದೆಯಾದ ಬಿ. ಜಯಶ್ರೀಯವರು ತಮ್ಮ ಆತ್ಮಕಥೆಗಳಲ್ಲಿ ನಿರೂಪಿಸಿದ್ದನ್ನು ಅವಲೋಕಿಸಿದರೆ ಕನ್ನಡದ ರಂಗಭೂಮಿಯಲ್ಲಾದ ಬದಲಾವಣೆಯ ಇತಿಹಾಸವೇ ನಮ್ಮ ಕಣ್ಮುಂದೆ ಬರುತ್ತದೆ. ಅದನ್ನು ಸಂಗ್ರಹ ರೂಪದಲ್ಲಿ ಹೀಗೆ ನೋಡಬಹುದಾಗಿದೆ.

ಅಂದಿನ ಕಾಲದ ನಾಟಕ ಕಂಪನಿಗಳ (ರಂಗಭೂಮಿಯ) ಸಲಕರಣೆಗಳೆಂದರೆ

ಒಂದು ಡೇರಾ, ಐದಾರು ಪರದೆಗಳು ಮಾತ್ರ. ಎಷ್ಟೇ ದೊಡ್ಡ ಕಂಪನಿ ಇದೆಯೆಂದರೂ ಮೂವತ್ತು ಜನರಿಗಿಂತ ಹೆಚ್ಚು ಜನರಿರುತ್ತಿರಲಿಲ್ಲ. ಅವರ ವೇತನವನ್ನು ನೋಡುವುದಾದರೆ "ರಾಜಾಪಾರ್ಟಿಗೆ 15 ರೂಪಾಯಿ ಉಳಿದವರಿಗೆ ಚೌತಿ ಪಂಚಮಿ ಈ ರೀತಿ" ಅಂದಿನ ಕಂಪನಿಯ ಸಲಕರಣೆಗಳೆಲ್ಲವೂ ಹೆಚ್ಚೆಂದರೆ ಒಂಬತ್ತು ಹತ್ತು ಎತ್ತಿನ ಗಾಡಿಯಲ್ಲಿ ತುಂಬುವಷ್ಟು ಇರುತ್ತಿದ್ದವು. ಇಂದಿನ ದಿನ ರಾತ್ರಿ ಒಂದು ಸ್ಥಳವನ್ನು ಬಿಟ್ಟರೆ ಮರುದಿನ ರಾತ್ರಿಯೇ ಇನ್ನೊಂದು ಕಡೆ ನಾಟಕವಾಡುತ್ತಿದ್ದರು. ಸಂಸ್ಥೆಯ ನಟರೆಲ್ಲರೂ ಹಾರೆಗಳನ್ನು ಹಿಡಿದು ಕುರ್ಚಿ ಗುಂಡಿ ತೋಡಿ ಡೇರಾ ಹಾಕಬೇಕಾಗುತ್ತಿತ್ತು. ಇವರು ಕುರ್ಚಿಗಾಗಿ ಗುಂಡಿಗಳನ್ನೇನೋ ತೋಡುತ್ತಿದ್ದರು. ಆದರೆ ಇವರ ಕಡೆಗೆ ಕುರ್ಚಿಗಳೇ ಇರುತ್ತಿರಲಿಲ್ಲ. ಇವರು ನಾಟಕ ನೋಡಲು ಅಮಲ್ದಾರರನ್ನು ಆಮಂತ್ರಿಸುತ್ತಿದ್ದರು, ಅವರೇನಾದರೂ ಬರಲು ಒಪ್ಪಿದರೆ, ಮಾಲೀಕರು 'ಹಾಗೆಯೇ ಅಮ್ಮಾವರನ್ನೂ ಕರೆದುಕೊಂಡು ಬನ್ನಿ, ಕುತ್ಕೊಳ್ಳೋದಕ್ಕೆ ಕುರ್ಚಿಗಳನ್ನೂ ತನ್ನಿ' ಎಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದರು.

ಮುಂದೆ ಸ್ವಂತ ಕುರ್ಚಿಗಳನ್ನು ಒದಗಿಸುವುರೊಂದಿಗೆ ಕಂಪನಿಯವರಲ್ಲಿ ಬದಲಾವಣೆಗಳಾದವು. ಕುರ್ಚಿ ಬಳಕೆಗೆ ಬರುವ ಮೊದಲಿನ ಹಂತದಲ್ಲಿ ಬೆಂಚುಗಳು ಬಳಕೆಗೆ ಬಂದವು. ಅವರ ಹಿಂದೆ ಇರುವವರು ಚಾಪೆಯ ಮೇಲೆ ಕೂರುತ್ತಿದ್ದರು, ಅವರು ಎಂಟಾಣೆಯ ಟಿಕೇಟಿನವರು. ಕೊನೆಯ ಹಂತದಲ್ಲಿ ಜನ ನೆಲದ ಮೇಲೆ ಕೂರುತ್ತಿದ್ದರು. ಅವರು ನಾಲ್ಕಾಣೆ ಟಿಕೇಟಿನ ಪ್ರೇಕ್ಷಕರು. "ಟಿಕೇಟಿನ ದರದಲ್ಲೂ ವ್ಯತ್ಯಾಸ ಇರುತ್ತಿತ್ತು. ಚಾಪೆ ಮತ್ತು ನೆಲದ ಮೇಲೆ ಕೂರುವ ಪ್ರೇಕ್ಷಕರು ನಾಕಾಣೆ (ಇಂದಿನ ಇಪ್ಪತ್ತೈದು ಪೈಸೆ), ಎಂಟಾಣೆ (ಐವತ್ತು ಪೈಸೆ) ಕ್ಲಾಸಿನವರು, ನಾಕಾಣೆ ಪ್ರೇಕ್ಷಕರು ಕಟ್ಟಕಡೆಗೆ ಕೂರುತ್ತಿದ್ದವರು. ಮೈಕ್ ಇಲ್ಲದೆ ಇದ್ದ ಕಾಲದಲ್ಲಿ ನಾವು ಹಾಡುವಾಗ ಇವರನ್ನು ಗಮನದಲ್ಲಿ ಇಟ್ಟುಕೊಂಡು ಹಾಡಬೇಕಿತ್ತು. ಹಾಗಾಗಿ ನಮ್ಮೆಲ್ಲರ ಧ್ವನಿ 'ಓಪನ್' ಅಂದರೆ ತೆರೆದ ಧ್ವನಿ ಆಗಿತ್ತು" ಎನ್ನುತ್ತಾರೆ ಬಿ. ಜಯಶ್ರೀಯವರು.

"ಆಗಿನ ರಂಗ ಸಲಕರಣೆಗಳಾದರೋ ಇನ್ನೂ ವಿಚಿತ್ರ. ಸೀಮೆ ಎಣ್ಣೆ ಟನ್ನುಗಳ ಮೇಲೆ ಹಲಗೆ ಜೋಡಿಸಿ, ಆಸ್ಪತ್ರೆ ಕೆಂಪು ಬುರ್ನೀಸನ್ನು ಹಾಸಿದರೆ ಅದೇ ಸಿಂಹಾಸನ. ಎಲ್ಲಾ ಪಾತ್ರಗಳಿಗೂ ಒಂದೇ ಬಗೆಯ ಉಡುಪು. ಮಾತಿನಿಂದ ಅವನೇನು ರಾಜನೋ ದಾಸನೋ ಎಂಬುದನ್ನು ತಿಳಿಯಬೇಕಾಗಿತ್ತು" ಎಂಬುದು ಗುಬ್ಬಿ ವೀರಣ್ಣನವರ ಮಾತು. ಆರಂಭಿಕ ದಿನಗಳಲ್ಲಿ ಪೋಸ್ಟರ್ ಅಥವಾ ಹ್ಯಾಂಡ್‌ಬಿಲ್ ಹೊರಡಿಸುವ ಪದ್ಧತಿ ಇರಲಿಲ್ಲ. ತಮಟೆ (ಡಂಗುರ) ಹೊಡೆಯಿಸಿ ಸಾರಿ ಹೇಳುತ್ತಿದ್ದರು. ಆಮೇಲೆ ಬೆಂಗಳೂರಿನಿಂದ ನಾಟಕದ ಹೆಸರಿರುವ ಕಡೆ ಸ್ಥಳ ಬಿಟ್ಟು ನೋಟಿಸುಗಳನ್ನು ಮುದ್ರಿಸಿ ತರಿಸಿ ಆಯಾ ಊರಿನಲ್ಲಿ ಆಯಾ ನಾಟಕದ ಹೆಸರನ್ನು ಕೈಯಿಂದ ಬರೆದು ಹಂಚಲಾರಂಭಿಸಿದರು. ಅದೂ ಒಂದು ಕ್ಯಾಂಪಿಗೆ ಹತ್ತು ಹನ್ನೆರಡಕ್ಕಿಂತ ಹೆಚ್ಚು ಹಂಚುತ್ತಿರಲಿಲ್ಲ. ಕಂಪನಿ ಮಾಲೀಕರು ಅವುಗಳನ್ನು ಪೆಟ್ಟಿಗೆಯಲ್ಲಿಟ್ಟು ಜೋಪಾನದಿಂದ ಕಾಪಾಡುತ್ತಿದ್ದರು.

ಇನ್ನು ಗ್ರೀನ್–ರೂಮ್ ಬಗ್ಗೆ ಹೇಳಬೇಕೆಂದರೆ, ಅಲ್ಲೊಂದು "ಜಾಕಾಯಿ ಪೆಟ್ಟಿ, ಲ್ಯಾಂಪು, ರಾಜಾ ಪಾರ್ಟಿನವರಿಗೆ ಒಂದಾಣೆ ಕನ್ನಡಿ, ಉಳಿದವರಿಗೆ ನಾಲ್ಕಾಣೆ ಕನ್ನಡಿ. ಅರಿದಳ, ಇಂಗಳೀಕ, ಅಭ್ರಕ ಇವೇ ಆಗಿನವರು ಉಪಯೋಗಿಸುತ್ತಿದ್ದ ಬಣ್ಣಗಳು."

ಮೊದಮೊದಲು ಸೀಮೆ ಎಣ್ಣೆಯ ಲ್ಯಾಂಪುಗಳನ್ನಿಟ್ಟುಕೊಂಡು ನಾಟಕದ ರಂಗಭೂಮಿಗೆ ಬೆಳಕನ್ನು ಮಾಡಿಕೊಂಡು ಆಡುತ್ತಿದ್ದರು. ಆಮೇಲೆ ದೊಡ್ಡದೊಡ್ಡ ಲ್ಯಾಂಪುಗಳು ಬಂದವು. ಆಮೇಲೆ ಗ್ಯಾಸ್ ಲೈಟುಗಳು ಪ್ರಚಾರಕ್ಕೆ ಬಂದವು, ತದನಂತರದಲ್ಲಿ ಇಲೆಕ್ಟ್ರಿಕ್ ಲೈಟುಗಳಿಗೆ ಬಣ್ಣ ಬಣ್ಣದ ಪ್ಲಾಸ್ಟಿಕ್ ಕಾಗದಗಳನ್ನು ಬಳಸುತ್ತಿದ್ದರು. ಇಂದು ಅನೇಕ ರೀತಿಯ ಜಗಮಗಿಸುವ ಲೈಟ್‌ಗಳನ್ನು ಬೇರೆಬೇರೆ ರೀತಿಯ ಬೆಳಕಿನ ಪರಿಕರಗಳನ್ನು ಬಳಸುವುದನ್ನು ಕಾಣುತ್ತೇವೆ. ಹವ್ಯಾಸಿ ಮತ್ತು ತಿರುಗಾಟದಂತಹ ಕಂಪನಿಗಳಂತೂ ಅದರಲ್ಲೂ ಸಾಕಷ್ಟು ತಂತ್ರಜ್ಞಾನ ಬಳಸುತ್ತಿರುವುದನ್ನು ಕಾಣುತ್ತೇವೆ.

ಅಂದಿನ ನಾಟಕಗಳೆಂದರೆ, ಚೋರ ಕಥೆ, ಪ್ರಭಾವತೀ ದರ್ಬಾರ್, ಧರ್ಮಪಾಲ ಚರಿತ್ರೆ, ಪಾಂಡವ ವಿಜಯ ಇತ್ಯಾದಿಗಳು. ಒಂದೊಂದು ನಾಟಕದಲ್ಲೂ 80–100 ಹಾಡುಗಳೂ 20–30 ಕಂದಪದ್ಯಗಳೂ ಇರುತ್ತಿದ್ದವು. ಪ್ರತಿ ನಾಟಕದಲ್ಲೂ ರಾಜ, ಮಂತ್ರಿ, ಸೇನಾಪತಿ ಈ ತ್ರಿಮೂರ್ತಿ ಪಾತ್ರಗಳ ಪ್ರವೇಶ ಮೊದಲು ಆಗಲೇಬೇಕಿತ್ತು. ಅವರ ಮಾತುಕಥೆ ಯೋಗಕ್ಷೇಮವೆಲ್ಲ ಹಾಡುಗಳ ಮೂಲಕವೇ ನಡೆಯುತ್ತಿತ್ತು. ಹಾಡು ಮುಗಿದ ಮೇಲೆ 'ಈ ರೀತಿಯಿದೆ' ಎಂದು ಹೇಳುವುದು ಅಂದಿನ ನಟನಿಗೆ ಬಹುದೊಡ್ಡ ಭೂಷಣ. ಅಂದಿನ ದಿನಗಳಲ್ಲಿ ಹೆಣ್ಣಿನ ಪಾತ್ರವನ್ನು ಗಂಡುಮಕ್ಕಳೇ ಮಾಡುತ್ತಿದ್ದರು. ಈ ಪಾತ್ರವನ್ನು ಹೆಣ್ಣುಮಕ್ಕಳೇ ಮಾಡುತ್ತಿದ್ದಾರೆನೋ ಎನ್ನುವಂತೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. "ಸ್ತ್ರೀ ಸಹಜವಾದ ಹಾವಭಾವಗಳನ್ನು ಅವರು ವ್ಯಕ್ತಪಡಿಸಿದರೂ ಯಾವುದೋ ಕೊರತೆ ಕಾಣುತ್ತಿತ್ತು... ರಂಗಭೂಮಿಗೆ ಮಹಿಳೆಯರ ಪ್ರವೇಶವಾದ ಮೇಲೆ ಕಂಪನಿಗಳ ಗಲ್ಲಾ ಪೆಟ್ಟಿಗೆ ತುಂಬಿತು. ಒಂದು ಕಂಪನಿ ಕಟ್ಟಿಕೊಂಡು ಪರದಾಡುತ್ತಿದ್ದ ಮಾಲೀಕರು ಮೂರು ಮೂರು ಕಂಪನಿಗಳ ಒಡೆಯರಾದರು. ಈ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಮಹಿಳೆಯರು ರಂಗಭೂಮಿಗೆ ಕಾಲಿಟ್ಟ ಮೇಲೆ ವೃತ್ತಿರಂಗಭೂಮಿ ಬಣ್ಣವೇ ಬದಲಾಯಿತು." ಎಂದು ಏಣಗಿ ಬಾಳಪ್ಪನವರು ಹೇಳಿರುವ ಮಾತುಗಳು ಮಾರ್ಮಿಕವಾಗಿವೆ.

ಇನ್ನು ಅಂದಿನ ಸಂಗೀತ ಪರಿಕರಗಳ ಬಗ್ಗೆ ಹೇಳುವುದಾದರೆ, ಪಿಟೀಲು, ಪುಂಗಿ, ಮುಖವೀಣೆ. "ಆ ಮೇಲೆ ಜಾಕಾಯಿ ಪೆಟ್ಟಿಗೆಯಲ್ಲಿ ಮಾಡಿದ ಸೋಟಾ ಎಂಬ ಒಂದು ತರಹದ ತಂಬೂರಿ ಪ್ರಚಾರಕ್ಕೆ ಬಂತು." ಆಗ ಎಲ್ಲ ನಟರಿಗೂ ಒಂದೇ ಶ್ರುತಿ. ಆಮೇಲೆ ಗುಣ ಧರ್ಮಾನುಸಾರ ಶ್ರುತಿಗಳನ್ನು ಬದಲಾಯಿಸಲಾರಂಭಿಸಿದರು. ನಂತರ ಹಾರ್ಮೋನಿಯಂ ತಬಲಾಗಳು ಪ್ರಚಾರಕ್ಕೆ ಬಂದವು. ಈಗಂತೂ ಕ್ಯಾಸಿಯೋ, ಕ್ಲೆರಿನೆಟ್, ಬ್ಯಾಂಗೋ ಇತ್ಯಾದಿ ಆಧುನಿಕ ಮಾದರಿಯ ಎಲ್ಲ ವಾದ್ಯ ಪರಿಕರಗಳೂ ಬಳಕೆಯಾಗುತ್ತಿವೆ. ಹೀಗೆ ನಾಟ್ಯ ರಂಗಭೂಮಿಯ ಸಂಗೀತ ಪರಿಕರಗಳು ರಂಗಭೂಮಿಯ ಇತಿಹಾಸದಲ್ಲಿ ಕ್ರಮೇಣ ಬದಲಾಗುತ್ತಾ ಅನೇಕ ವಾದ್ಯಗಳನ್ನು ಬಳಸಿಕೊಳ್ಳುತ್ತಾ ಇಂದು ಸಾಕಷ್ಟು ಆಧುನಿಕ ವಾದ್ಯಪರಿಕರಗಳು ಬಳಕೆಗೆ ಬಂದಿವೆ. ಆದರೂ ಹವ್ಯಾಸಿ ರಂಗಭೂಮಿಯವರು ಮಾತ್ರ ಮಿತವ್ಯಯದ ವಾದ್ಯಗಳಲ್ಲೇ ನಾಟಕಕ್ಕೆ ಮೆರಗು ನೀಡುತ್ತಾರೆ.

1932ರಲ್ಲಿ ವಾಕ್ ಚಿತ್ರಗಳು ಪ್ರಚಾರಕ್ಕೆ ಬಂದ ಮೇಲೆ ನಾಟಕ ಸಂಸ್ಥೆಗಳ ಪರಿಸ್ಥಿತಿ ಸ್ವಲ್ಪ ಕಷ್ಟವಾಯಿತು. ಪ್ರೇಕ್ಷಕರ ಮನಸ್ಸು ಟಾಕೀಸುಗಳ ಕಡೆಗೆ ತಿರುಗಿತು. ಒಂದೊಂದು ವಾಕ್–ಚಿತ್ರಕ್ಕೆ 50–60 ಸಾವಿರ ರೂಪಾಯಿ ಕರ್ಚು ಮಾಡುತ್ತಿರುವಾಗ

ರಂಗಭೂಮಿಯವರು ಹಿಂದಿನಂತೆಯೇ ನಾಟಕವಾಡುವುದು ಸಾಧ್ಯವಿರಲಿಲ್ಲ. ಹಾಗಾಗಿ ರಂಗಭೂಮಿಯ ಮಾಲೀಕರೂ ಅಧಿಕ ಹಣ ಕರ್ಚುಮಾಡಿ ಹೊಸಹೊಸ ರೀತಿಯ ರಂಗ ಪರಿಕರಗಳನ್ನು ಸಿದ್ಧಪಡಿಸಿ ಹೊಸಹೊಸ ರೀತಿಯ ನಾಟಕಗಳನ್ನೂ ಆಡಲಾರಂಭಿಸಿದರು. ಆದರೆ ಅಂದಿನ ಪಡದೆಗಳೆಂದರೆ ಒಂದು ರಸ್ತೆಯ ಸೀನು, ಒಂದು ಜಂಗಲ್ ಸೀನು, ಮತ್ತೊಂದು ಮನೆಯ ಸೀನು ಬಿಟ್ಟರೆ ಬೇರೆ ಪರದೆಗಳಿರುವುದು ಕಡಿಮೆ. ಇಂದು ರಂಗಭೂಮಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅನೇಕ ಆಧುನಿಕ ಮಾದರಿಯ ರಂಗಸಜ್ಜಿಕೆಗಳನ್ನು ಬಳಸುತ್ತಾರೆ. ಜನರಿಗೆ ಆಕರ್ಷಣೆಯಾಗುವಂತೆ ಅನೇಕ ರೀತಿಯ ರಂಗಪರಿಕರಗಳೊಂದಿಗೆ ಲೈಟ್ ಮತ್ತು ಮ್ಯುಜಿಕ್ ಬಳಕೆಯಲ್ಲೂ ಆಧುನಿಕತೆಯನ್ನು ಕಾಣುತ್ತೇವೆ.

ಇನ್ನು ಹವ್ಯಾಸಿ ರಂಗ ಕಲಾವಿದರ ರಂಗ ಸಜ್ಜಿಕೆಗಳಲ್ಲಿ ಬಹಳಷ್ಟು ಬದಲಾಣೆಗಳನ್ನು ಕಾಣುತ್ತೇವೆ. ಅವರು ಹೆಚ್ಚಾಗಿ ಸಾಂಕೇತಿಕ ರೀತಿಯ ಅತ್ಯಂತ ಕಡಿಮೆ ರಂಗ ಪರಿಕರಗಳನ್ನು ಬಳಸಿ ಹೆಚ್ಚಿನ ಅರ್ಥವನ್ನು ಹೇಳಬಯಸುತ್ತಾರೆ.

ಆದರೆ ವೃತ್ತಿ ರಂಗಭೂಮಿಗಳ ವೈಭವ ಬಹಳ ವರ್ಷಗಳವರೆಗೆ ಉಳಿಯಲಿಲ್ಲ. ಕಾರಣ ಇವು ಸಂಗೀತಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟವು. "ಸಂಗೀತವೇ ನಾಟಕದ ಅಳತೆಗೋಲಾಯಿತು. ಅಭಿನಯದ ಅತಿರೇಕವೂ ಸೇರಿ ಇಡೀ ನಾಟಕವೇ ತುಂಬ ಬೇಸರವೆನಿಸತೊಡಗಿತು. ಅಲ್ಲದೇ ಮನರಂಜನೆಯ ಹೆಸರಿನಲ್ಲಿ ಮುಗ್ಧ ಪ್ರೇಕ್ಷಕರಿಂದ ಹಣ ಸುಲಿಯುವುದೇ ದಂಧೆಯಾಯಿತು." ಇದೇ ಸುಮಾರಿಗೆ ಬಂದ 'ಸಿನಿಮಾ'ಗಳಿಂದ ಅನೇಕ ರಂಗಭೂಮಿಗಳು ಸಿನಿಮಾ ಥೇಟರಗಳಾಗಿ ಬದಲಾವಣೆ ಹೊಂದಿದವು.

ಅವನತಿಯತ್ತ ಸಾಗಿದ ವೃತ್ತಿರಂಗಭೂಮಿ ತಮ್ಮ ನಾಟಕಗಳಲ್ಲಿ ಅತಿಯಾದ ನೃತ್ಯ, ಸಂಗೀತದ ಬಳಕೆಯ ಜೊತೆಗೆ ಅತಿಯಾದ ಮತ್ತು ಕೆಟ್ಟ ರೀತಿಯ ಹಾಸ್ಯ ಪ್ರಸಂಗಗಳಿಂದ, ಎರಡೆರಡು ಅರ್ಥಗಳ ಮಾತುಗಳಿಂದ ಸುಶಿಕ್ಷಿತ ಸಮುದಾಯದಿಂದ ಕುಟುಂಬದ ಸದಸ್ಯರೆಲ್ಲ ಕುಳಿತು ನೋಡುವುದರಿಂದ ದೂರಾಗತೊಡಗಿತು. ಆದರೆ ರಂಗಭೂಮಿ ಅನಿವಾರ್ಯತೆಯನ್ನು ಅರಿತ ಶಿಕ್ಷಿತ ಪ್ರೇಕ್ಷಕ ವರ್ಗ ತನ್ನದೇ ಆದ ಹೊಸ ಚಿಂತನೆಗೆ ತೊಡಗಿ ಹವ್ಯಾಸಿ ರಂಗಭೂಮಿಯತ್ತ ಒಲಿಯಲಾರಂಭಿಸಿತು.

ಸಾಹಿತ್ಯಕ ನಾಟಕಗಳು ಮನರಂಜನೆಗಿಂತ ಪ್ರೇಕ್ಷಕರ ಬುದ್ಧಿಮತ್ತೆಯನ್ನು ಎಚ್ಚರಗೊಳಿಸುವ, ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚಲ್ಲುವ, ರಾಷ್ಟ್ರೀಯ ವಿಚಾರಧಾರೆಗಳನ್ನು ಪ್ರಸ್ತುತ ಪಡಿಸುವ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ಆಧುನಿಕ ರೀತಿಯಲ್ಲಿ ಹೊಸ ದೃಷ್ಟಿಕೋನದಿಂದ ಪ್ರಸ್ತುತ ಪಡಿಸುವ ವಿಚಾರಗಳನ್ನು ಕೇಂದ್ರವಾಗಿಟ್ಟುಕೊಂಡು ನಾಟಕಗಳು ರಚಿತಗೊಂಡವು.

ಜನರ ವಿವೇಕವನ್ನು ಜಾಗೃತಗೊಳಿಸುವ ಬೇರೆ ರೀತಿಯಲ್ಲಿ ಮನರಂಜನೆಯನ್ನು ಒದಿಗಿಸುವುದು ಹವ್ಯಾಸಿ ರಂಗಭೂಮಿಯ ದೋರಣೆಯಾಯಿತು. ನಾಟಕ ಜೀವನದ ಸಮಸ್ಯೆಗಳನ್ನು ನೈಜವಾಗಿ ಪ್ರದರ್ಶಿಸುವ ಕಲೆಯಾಗಿ ಮಾರ್ಪಟ್ಟಿತು. ಸಮಾಜದಲ್ಲಿ ಪರಿಣಾಮಕಾರಿಯಾದ ಸಾಹಿತ್ಯಕ, ಸಾಮಾಜಿಕ ಮಾಧ್ಯಮವಾಯಿತು. ಹಾಗಾಗಿಯೇ ಇಂದಿನ ಆಧುನಿಕ ರಂಗಭೂಮಿಯ ಬೆಳವಣಿಗೆಯ ಇತಿಹಾದಲ್ಲಿ ಇಂತಹ ನಾಟಕ, ನಾಟಕಕಾರ, ನಟ, ನಿರ್ದೇಶಕರುಗಳಿಗೆ ಬಹಳ ಪ್ರಾಮುಖ್ಯತೆ ಒದಗಿ ಬಂದಿದೆ.

ಪರಾಮರ್ಶನ ಗ್ರಂಥಗಳು

1. ವಿ.ಪಿ. ನಾರಾಯಣ: ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ – ವೀರಶೈವ ಅಧ್ಯಯನ ಸಂಸ್ಥೆ, ಡಂಬಳ–ಗದಗ, 1983
2. ಕೆ. ವೆಂಕಟರಾಮಪ್ಪ ಮತ್ತು ದೇ. ಜವರೇಗೌಡ(ಸಂ): ನೇಮಿಚಂದ್ರನ ಲೀಲಾವತಿ ಪ್ರಬಂಧ – ಶಾರದಾ ಮಂದಿರ, ರಾಮಯ್ಯ ರಸ್ತೆ, ಮೈಸೂರು, 1966
3. ದೇವಿಕಾ ನಗರಕರ: ವೃತ್ತಿರಂಗಭೂಮಿಗೆ ಉತ್ತರ ಕರ್ನಾಟಕದ ಮಹಿಳೆಯರ ಕೊಡುಗೆ – ಅಜೀತ ಪ್ರಕಾಶನ, ವಿಜಯಪುರ, 2014
4. ನಿರೂಪಣೆ ಪ್ರೀತಿ ನಾಗರಾಜ್: ಬಿ. ಜಯಶ್ರೀ ಆತ್ಮಕತೆ ಕಣ್ಣಾ ಮುಚ್ಚೇ ಕಾಡೇ ಗೂಡೇ... – ಮನೋಹರ ಗ್ರಂಥಮಾಲಾ, ಧಾರವಾಡ, 2016
5. ಡಿ.ಜಿ. ಹಾಜವಗೋಳ: ಶ್ರೀರಂಗರ ನಾಟಕಗಳು – ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಮಾರ್ಚ, 1996
6. ಆದ್ಯರಂಗಾಚಾರ್ಯ (ಶ್ರೀರಂಗ) : ಕನ್ನಡ ರಂಗಭೂಮಿಯ ಪುರೋಭಿವೃದ್ಧಿ –ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968
7. ಡಾ. ಎಚ್. ಕೆ. ರಂಗನಾಥ: ಕರ್ನಾಟಕ ರಂಗಭೂಮಿ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000
8. ಅ. ನ. ಕೃಷ್ಣರಾಯ: ಕರ್ನಾಟಕ ಕಲಾವಿದರು (ನಾಟಕರತ್ನ ಗುಬ್ಬಿ ವೀರಣ್ಣನವರು)
9. ಕೀರ್ತಿನಾಥ ಕುರ್ತಕೋಟಿ: ಅಸಂಗತ ನಾಟಕಗಳು – ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, 1977
10. ಡಿ. ಫ್ಹಿ. ಪೋತದಾರ : ಕೈಲಾಸಂ ನಾಟಕಗಳು – ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಮಾರ್ಚ, 1986
11. ಗಣೇಶ ಅಮೀನಗಡ : ಬಣ್ಣದ ಬದುಕಿನ ಚಿನ್ನದ ದಿನಗಳು (ಏಣಗಿ ಬಾಳಪ್ಪನವರ ರಂಗಾನುಭವ ಕಥನ) ಪ್ರಸಾದನ ಪ್ರಕಾಶನ ಚಿಕ್ಕಮಗಳೂರು, 2007

❖❖❖

ಅಮ್ಮಗೆ ಬಾನನು ತೋರುತ ಕಂದನು
ಕೇಳುತಲಹನೇನು?
ನೀಲಿಯ ಮಾಡಿಗೆ ಬಣ್ಣದ ತೋರಣ
ಕಟ್ಟಿದವನು ಎಲ್ಲಿಹನು?

ಕರ್ನಾಟಕ ಕಾದಂಬರಿಯಲ್ಲಿ ಮನುಷ್ಯಜನ್ಮ ಮತ್ತು ಪ್ರಾಣಿಜನ್ಮಗಳ ನಡುವಿನ ತುಲನಾತ್ಮಕ ವಿವೇಚನೆ

ರವಿಶಂಕರ ಜಿ.ಕೆ.
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ)
ಉಜಿರೆ, ದಕ್ಷಿಣ ಕನ್ನಡ–574240

ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಕಂಡುಬರುವ ನೀತಿಕಥೆ ಅಥವಾ ದೃಷ್ಟಾಂತಕಥೆಗಳು ನೀತಿ ಪ್ರತಿಪಾದನೆಗೆ ಪ್ರಾಣಿಗಳನ್ನು ಪಾತ್ರಗಳಾಗಿ ಬಳಸಿಕೊಳ್ಳುತ್ತವೆ. ಮನುಷ್ಯರ ನಡೆನುಡಿಗಳನ್ನು ಪ್ರಾಣಿಗಳು ಕೂಡ ಅನುಕರಿಸುತ್ತದೆ ಎಂಬ ಚಿತ್ರಣದ ಮೂಲಕ ಜೀವನದ ಮೌಲ್ಯಗಳನ್ನು, ಬದುಕಿನ ನೀತಿಯನ್ನು ಬೋಧಿಸುವ ಕೆಲಸವನ್ನು ಅವು ಮಾಡುತ್ತವೆ. ಮನುಷ್ಯಜಗತ್ತಿಗೆ ಪರ್ಯಾಯವಾಗಿ ಪ್ರಾಣಿಜಗತ್ತನ್ನು ಪರಿಭಾವಿಸಿಕೊಂಡಿರುವ ಮಾದರಿ ಅವುಗಳದ್ದಾದರೆ, ಮನುಷ್ಯಜಗತ್ತಿಗೆ ಪೂರಕವಾಗಿ ಪ್ರಾಣಿಜಗತ್ತನ್ನು ಕಂಡುಕೊಂಡಿರುವ ಉದಾಹರಣೆಗಳು ಕೂಡ ಸಾಹಿತ್ಯದಲ್ಲಿ ಸಾಕಷ್ಟು ಕಾಣ ಸಿಗುತ್ತದೆ. ಧಾರ್ಮಿಕ ನಂಬಿಕೆಗಳಿಗೆ ಅನುಸಾರವಾಗಿ ಪುನರ್ಜನ್ಮಗಳ ವಾಹಕಗಳಾಗಿ ಪ್ರಾಣಿಜನ್ಮಗಳನ್ನು ಪರಿಭಾವಿಸಿಕೊಂಡಿರುವ ನೆಲೆಯನ್ನು ಸಾಹಿತ್ಯದಲ್ಲಿ ಗುರುತಿಸಬಹುದು.

ಮನುಷ್ಯ ಜನ್ಮವು ಶ್ರೇಷ್ಠವಾದ ಜನ್ಮವಾಗಿದ್ದು, ಕೆಟ್ಟ ಕೆಲಸಗಳನ್ನು ಮಾಡಿದರೆ ಪ್ರಾಣಿಜನ್ಮ ಪ್ರಾಪ್ತವಾಗುತ್ತದೆ ಎಂಬುದು ಭಾರತೀಯ ನಂಬಿಕೆಗಳಲ್ಲಿ ರೂಢಿಗತವಾಗಿದೆ. ಹಿಂದೂಧರ್ಮದ ಕರ್ಮಸಿದ್ಧಾಂತವು ಮನುಷ್ಯ ಮಾಡುವ ಒಳ್ಳೆಯ ಕಾರ್ಯಗಳಿಗೆ ಒಳ್ಳೆಯ ಫಲಗಳನ್ನು ಮತ್ತು ಕೆಟ್ಟ ಕಾರ್ಯಗಳಿಗೆ ಕೆಟ್ಟ ಫಲಗಳನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ. ಮನುಷ್ಯನ ಆತ್ಮ ಕರ್ಮಗಳಿಗೆ ಅನುಸಾರವಾಗಿ ಒಂದೊಂದೇ ಜನ್ಮಗಳಲ್ಲಿ ಹುಟ್ಟಿ ಕರ್ಮಕ್ಷಯವಾದ ಮೇಲೆ ಪುನಃ ಉತ್ತಮ ಜನ್ಮದಲ್ಲಿ ಜನಿಸುವುದಕ್ಕೆ ಇಲ್ಲವೇ ಭಗವಂತನನ್ನು ಸೇರುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಅದು ನಂಬಿಕೊಂಡಿದೆ. 'ಅಹಿಂಸೆಯೇ ಪರಮ ಧರ್ಮ' ಎಂದು ನಂಬಿಕೊಂಡಿರುವ ಜೈನಧರ್ಮವು ಕೂಡ ಶುಭಾಶುಭಕರ್ಮಗಳ ಸಮ್ಮಿಶ್ರಣದಿಂದ ಮನುಷ್ಯ ಜನ್ಮ ಲಭಿಸುತ್ತದೆ, ಕೆಟ್ಟ ಕರ್ಮ ಮಾಡಿದ್ದಲ್ಲಿ ಪಶು–ಪಕ್ಷಿ ಮೊದಲಾಗಿ ತಿರ್ಯಗ್ಜಾತಿಯಲ್ಲಿ ಹುಟ್ಟಬೇಕಾಗುತ್ತದೆ ಅಥವಾ ನರಕದಲ್ಲಿ ಜನಿಸಿ ಅಪಾರ ದುಃಖ ನೋವುಗಳನ್ನು ಅನುಭವಿಸುವ ಸ್ಥಿತಿ ನಿರ್ಮಾಣವಾಗುತ್ತದೆ ಎಂಬುದನ್ನು ನಂಬುತ್ತದೆ.

ಮನುಷ್ಯ ಮಾಡಿರುವ ಪಾಪಕರ್ಮಕ್ಕೆ ಶಿಕ್ಷೆಯ ರೂಪದಲ್ಲಿ ಪ್ರಾಣಿಯಾಗಿ ಜನಿಸುವಂತೆ ಶಾಪ ದೊರೆಯುವ ಉಲ್ಲೇಖಗಳು ಭಾರತೀಯ ಸಾಹಿತ್ಯದಲ್ಲಿ ಅನೇಕ ಕಡೆ ಕಾಣಿಸಿಕೊಂಡಿದೆ. ಪ್ರಾಣಿಯಾಗಿ ಹುಟ್ಟುವುದೇ ಮಾಡಿರುವ ಪಾಪಗಳಿಗೆ ಶಿಕ್ಷೆ ಎಂಬ ನಿಲುವು ಅಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ ಅಂಥ ಸಂದರ್ಭಗಳಲ್ಲಿ ಪ್ರಾಣಿಗಳ ಬದುಕಿನಲ್ಲಿರುವ ಅನಾನುಕೂಲತೆಗಳನ್ನು ಚಿತ್ರಿಸುವುದಕ್ಕೆ ಕೃತಿಗಳು ಹೆಚ್ಚಿನ

ಗಮನವನ್ನು ಹರಿಸುತ್ತವೆ. 'ಮನುಷ್ಯಜನ್ಮ ಎಲ್ಲಕ್ಕಿಂತ ಶ್ರೇಷ್ಠವಾದದ್ದು' ಎಂಬ ನೆಲೆಯಲ್ಲಿ ನಿಂತು ಪ್ರಾಣಿಜನ್ಮದ ತೊಳಲಾಟಗಳನ್ನು ವಿವೇಚಿಸುತ್ತವೆ.

ಮನುಷ್ಯ ಜಗತ್ತಿಗೆ ಪರ್ಯಾಯವಾಗಿ ಪ್ರಾಣಿಜಗತ್ತನ್ನು ಕಾಣುವ ನೀತಿಕಥೆಗಳಲ್ಲಿ ಮನುಷ್ಯ ಪ್ರಾಣಿಯಾಗಿ, ಪ್ರಾಣಿ ಮನುಷ್ಯನಾಗಿ ಪರಸ್ಪರ ರೂಪಾಂತರಕ್ಕೊಳಗಾಗುವ ಮೂಲಕ ಮನುಷ್ಯಜನ್ಮ ಮತ್ತು ಪ್ರಾಣಿಜನ್ಮಗಳ ಅನುಕೂಲತೆಗಳು ಮತ್ತು ಅನಾನುಕೂಲತೆಗಳು ಮೌಲ್ಯಮಾಪನಕ್ಕೆ ಒಳಗಾಗುತ್ತದೆ. ಅಂತಹ ಕಥೆಗಳ ಕೊನೆಗೆ ಪ್ರಾಣಿ ಮತ್ತು ಮನುಷ್ಯ ಎರಡರಲ್ಲಿ ದೇಹ–ರೂಪ–ಗುಣಗಳಲ್ಲಿನ ಅನನ್ಯತೆ ಪ್ರತಿಪಾದಿತವಾಗುತ್ತದೆ. ನೀತಿಕಥೆಗಳಲ್ಲಿ ಆಯಾ ಪ್ರಾಣಿಗಳಿಗೆ ಅದರದ್ದೇ ಆದ ಅಸ್ತಿತ್ವದ ಜೊತೆಗೆ ಶ್ರೇಷ್ಠತೆ ಇರುತ್ತದೆ. ಆದರೆ ಶಾಪಗ್ರಸ್ತವಾಗಿ ಪ್ರಾಣಿಜನ್ಮ ಪ್ರಾಪ್ತವಾಗುವ ಸಂದರ್ಭದಲ್ಲಿ ಪ್ರಾಣಿಜನ್ಮದಲ್ಲಿ ಅನುಭವಿಸುವ ಕಷ್ಟನಷ್ಟಗಳ ಚಿತ್ರಣದ ಕಡೆಗೆ ಹೆಚ್ಚಿನ ಗಮನವಿರುತ್ತದೆ.

ನಾಗವರ್ಮನ ಕರ್ಣಾಟಕ ಕಾದಂಬರಿಯಲ್ಲಿ ಶಾಪಗ್ರಸ್ತವಾಗಿ ತಿರ್ಯಕ್ ಜನ್ಮದಲ್ಲಿ ಅಂದರೆ ಗಿಳಿಯಾಗಿ ಹುಟ್ಟಿ ವೈಶಂಪಾಯನನು ಅನುಭವಿಸುವ ಸಂಕಷ್ಟಗಳ ಸುದೀರ್ಘ ಚಿತ್ರಣವಿದೆ. ಪಂಜರದಲ್ಲಿರುವ ಗಿಳಿಯನ್ನು ಹಿಡಿದುಕೊಂಡು ಬರುವ ಮೂಲಕ ಆರಂಭವಾಗುವ ಕಾವ್ಯ ಗಿಳಿಯ ಮಾತುಗಳಿಂದಲೇ ನಿರೂಪಿತವಾಗುತ್ತದೆ. ವೈಶಂಪಾಯನನು ಮಹಾಶ್ವೇತೆಯನ್ನು ಕಾಮಿಸಿದ ಕಾರಣಕ್ಕಾಗಿ ಆತನಿಗೆ ಗಿಳಿ ಜನ್ಮ ಪ್ರಾಪ್ತವಾಗಿರುತ್ತದೆ. ಹಾಗಾಗಿ ವೈಶಂಪಾಯನ ಗಿಳಿಯು ತನ್ನ ಪೂರ್ವಜನ್ಮದ ವ್ಯವಹಾರಗಳನ್ನು ಮತ್ತು ಗಿಳಿಯ ಜನ್ಮದಲ್ಲಿ ಹುಟ್ಟಿರುವ ಕಾರಣಕ್ಕೆ ಪಟ್ಟಿರುವ ಸಂಕಷ್ಟಗಳ ಸರಮಾಲೆಯನ್ನು, ತೊಳಲಾಟಗಳನ್ನು ನಿರೂಪಿಸಿಕೊಡುತ್ತದೆ.

ಕಾದಂಬರಿಯ ಆರಂಭದಲ್ಲಿ ಮುದುಕ ಬೇಡನೊಬ್ಬ ಸುಂದರಿಯಾದ ಶಬರಿಯೊಬ್ಬಳ ಜೊತೆಗೆ, ಚಿನ್ನದ ಪಂಜರದಲ್ಲಿ ವೈಶಂಪಾಯನ ಗಿಳಿಯನ್ನು ಹಿಡಿದುಕೊಂಡು ಶೂದ್ರಕ ಮಹಾರಾಜನ ಆಸ್ಥಾನಕ್ಕೆ ಬರುತ್ತಾನೆ. ಆ ಗಿಳಿಯ ಹಸುರು ಬಣ್ಣದಿಂದಾಗಿ ಪಂಜರವೇ ಪಚ್ಚೆಯಿಂದ ಮಾಡಿದಂತೆ ಗೋಚರಿಸುತ್ತಿತ್ತು ಎಂದು ನಾಗವರ್ಮ ವರ್ಣಿಸುತ್ತಾನೆ. ಅಸಾಮಾನ್ಯವಾದ ತೇಜಸ್ಸಿನಿಂದ ಕೂಡಿರುವ ಗಿಳಿ ಅರ್ಥಶಾಸ್ತ್ರ, ಸಮಸ್ತ ಪುರಾಣ, ಇತಿಹಾಸಗಳನ್ನು, ಷಡಂಗಸಹಿತವಾದ ನಾಲ್ಕು ವೇದಗಳನ್ನು ಓದಿಕೊಂಡಿತ್ತು. ಕಾವ್ಯ ಕಲೆಯಲ್ಲಿ ಪ್ರೌಢಿಮೆಯನ್ನು ಗಳಿಸಿ, ವೀಣೆ ಮೊದಲಾದ ವಾದ್ಯಗಳಲ್ಲಿ ನೈಪುಣ್ಯತೆಯನ್ನು ಗಳಿಸಿಕೊಂಡಿತ್ತು. ಅದ್ಭುತವಾದ ಕಥೆಗಳನ್ನು ಹೇಳುವಂಥ ಪರಿಣತಿ ಸಾಧಿಸಿರುವ ಗಿಳಿಯು ಆನೆ ಕುದುರೆ ಮುಂತಾದವುಗಳ ಲಕ್ಷಣಗಳನ್ನು, ಹಾಸ್ಯಭರಿತ ಮಾತುಗಳನ್ನಾಡಿ ಜನರನ್ನು ನಗಿಸಬಲ್ಲ ಸಾಮರ್ಥ್ಯವನ್ನು ಹೊಂದಿತ್ತು. ಮಾತ್ರವಲ್ಲದೆ ಗಿಳಿಯು ಸ್ಪಷ್ಟವಾದ ಉಚ್ಚರಣೆಯೊಂದಿಗೆ ವ್ಯಾಕರಣಶುದ್ಧವಾಗಿ ಮಹಾರಾಜನಿಗೆ ಜಯಕಾರವನ್ನು ಕೂಗುತ್ತದೆ. ಗಿಳಿಯ ಮಾತುಗಳನ್ನು ಕೇಳಿದ ಆಸ್ಥಾನದಲ್ಲಿದ್ದವರೆಲ್ಲರೂ ತಿರ್ಯಗ್ಜಾತಿಯ ಈ ಪ್ರಾಣಿಗೆ ಇಂತಹ ಚತುರತನ ಹೇಗೆ ಬಂತು ಎಂದು ಕುತೂಹಲಿಗರಾಗುತ್ತಾರೆ.

ಶೂದ್ರಕ ಮಹಾರಾಜನು ಗಿಳಿಯ ಸ್ಪಷ್ಟವಾದ ಉಚ್ಚಾರಣೆಯನ್ನು ಕಂಡು ಆಶ್ಚರ್ಯಗೊಂಡು ಮನುಷ್ಯರ ಹಾಗೆಯೇ ಗಿಳಿಗಳಿಗೆ ಬುದ್ಧಿಪೂರ್ವಕವಾದ ಓದುವಿಕೆಯು ಹೇಗೆ ಸಾಧ್ಯವಾಯಿತು ಎಂಬುದಾಗಿ ತನ್ನ ಮಂತ್ರಿಯಾದ ಕುಮಾರಪಾಲಿತನಲ್ಲಿ ಕೇಳುತ್ತಾನೆ. ಅದಕ್ಕೆ ಮಂತ್ರಿಯು ಗಿಳಿ, ಮೈನಾ ಮುಂತಾದ ಹಕ್ಕಿಗಳು ತಾವು

ಕೇಳಿದ್ದನ್ನು ಪುನರುಚ್ಚರಿಸುವುದು ಆಶ್ಚರ್ಯವಲ್ಲ ಎನ್ನುತ್ತಾ, ಪೂರ್ವಜನ್ಮದ ಸಂಸ್ಕಾರದಿಂದ ಅಥವಾ ಮಾನವರು ಪ್ರಯತ್ನಪೂರ್ವಕವಾಗಿ ಕಲಿಸುವುದರಿಂದ ಹೀಗೆ ಸಂಸ್ಕಾರತಿಶಯವು ಉಂಟಾಗಬಹುದು ಎಂಬುದಾಗಿ ಸಮರ್ಥನೆಯನ್ನು ನೀಡುತ್ತಾನೆ. ಮಾತ್ರವಲ್ಲದೆ ಗಿಳಿಗಳು ಮೊದಲು ಸ್ಪಷ್ಟವಾಗಿಯೇ ಮಾತನಾಡುತ್ತಿದ್ದವು. ಅಗ್ನಿಯ ಶಾಪದಿಂದಾಗಿ ಗಿಳಿಗಳ ಜಾತಿಯ ನುಡಿ ಅಸ್ಪಷ್ಟವಾಯಿತು. ಹಾಗೆಯೇ ಆನೆಗಳಿಗೂ ಅಗ್ನಿಯ ಶಾಪದಿಂದ ನಾಲಿಗೆ ಮಡಿಸಿಕೊಂಡುಬಿಟ್ಟಿದ್ದರಿಂದ ಅವುಗಳಿಗೆ ಮಾತನಾಡಲು ಆಗುವುದಿಲ್ಲ ಎಂಬ ಉತ್ತರ ನೀಡುತ್ತಾನೆ. (ಕರ್ಣಾಟಕ ಕಾದಂಬರಿ.1–58)

ಶಾಪಗ್ರಸ್ತವಾಗಿ ಪ್ರಾಣಿಜನ್ಮವನ್ನು ಪಡೆಯುವ ಸಂದರ್ಭದಲ್ಲಿ ಆ ಪ್ರಾಣಿಗಳಿಗೆ ವಿಶೇಷವಾದ ರೂಪಲಾವಣ್ಯ ಅಥವಾ ಗುಣಶಕ್ತಿ ಇರುವಂತೆ ಚಿತ್ರಣಗೊಳ್ಳುವುದು ಸಾಮಾನ್ಯ ಮಾದರಿಯಾಗಿ ಕಾಣಿಸುತ್ತದೆ. ಪ್ರಾಣಿಗಳಿಗೆ ಅತೀತವಾಗಿರುವ ಲಕ್ಷಣಗಳನ್ನು ಹೊಂದಿರುವ ಕಾರಣದಿಂದಲೇ ಅವು ಉಳಿದ ಪ್ರಾಣಿಗಳಿಗಿಂತ ಭಿನ್ನವಾಗಿ ಮನುಷ್ಯರಿಗೆ ಹತ್ತಿರವಾಗಿರುವಂತೆ ನಿರೂಪಿಸಲಾಗಿರುತ್ತದೆ.

ವಿಂಧ್ಯಪರ್ವತದ ಕಾಡಿನಲ್ಲಿ ಜೀರ್ಣವಾಗಿರುವ ಬೂರಗದ ಮರದಲ್ಲಿ ವಾಸಿಸುತ್ತಿದ್ದ ಮುದಿಗಿಳಿಯ ಮರಿಯಾಗಿ ವೈಶಂಪಾಯನ ಜನಿಸುತ್ತದೆ. ವೈಶಂಪಾಯನನ ತಾಯಿ ಹೆರಿಗೆಯ ಕಾಲದಲ್ಲಿ ತೀರಿಕೊಂಡದ್ದರಿಂದ ತಂದೆಯ ಆರೈಕೆಯಲ್ಲಿ ಬೆಳೆಯುತ್ತದೆ. ವೈಶಂಪಾಯನನಿಗೆ ರೆಕ್ಕೆ ಬಲಿಯುವ ಮೊದಲೆ ಬೇಟೆಗಾರನೊಬ್ಬ ಅದರ ತಂದೆಯನ್ನು ಕೊಲ್ಲುತ್ತಾನೆ. ತರಗೆಲೆಗಳ ನಡುವೆ ಅಡಗಿಕೊಂಡು ಬದುಕಿ ಉಳಿದ ವೈಶಂಪಾಯನ ಜಾಬಾಲಿ ಮುನಿಗಳ ಮಗನಾದ ಹಾರೀತನ ಕೈಗೆ ಸಿಕ್ಕಿ ಆಶ್ರಮವನ್ನು ಸೇರುತ್ತಾನೆ. ಜಾಬಾಲಿ ಮಹರ್ಷಿಗಳ ಮೂಲಕವಾಗಿ ಗಿಳಿಗೆ ತನ್ನ ಪೂರ್ವಜನ್ಮದ ವಿಚಾರಗಳು ಅರಿವಿಗೆ ಬರುತ್ತದೆ. ಉಜ್ಜೈನಿಯ ರಾಜಕುಮಾರ ಚಂದ್ರಾಪೀಡನ ಮಿತ್ರನಾಗಿದ್ದ ವೈಶಂಪಾಯನನು ಮಹಾಶ್ವೇತೆಯನ್ನು ಕಂಡು ಮೋಹಿಸುತ್ತಾನೆ. ಆದರೆ ಪುಂಡರೀಕನಿಗೆ ಮನಸ್ಸನ್ನು ಕೊಟ್ಟಿರುವ ಮಹಾಶ್ವೇತೆ ವೈಶಂಪಾಯನನಿಗೆ ಗಿಳಿಯಾಗಿ ಹುಟ್ಟು ಎಂಬುದಾಗಿ ಶಾಪವನ್ನು ಕೊಡುತ್ತಾಳೆ. ವೈಶಂಪಾಯನನು ಮನುಷ್ಯ ಜನ್ಮದಲ್ಲಿ ನೀತಿಯನ್ನು ಬಿಟ್ಟು ಅಜ್ಞಾನದಿಂದ ಪಾಪ ಮಾಡಿದ್ದರಿಂದ ಮತ್ತು ತಂದೆಯ ಶಾಪದ ಕಾರಣದಿಂದ ತಿರ್ಯಗ್ಜಾತಿಯಲ್ಲಿ ಹುಟ್ಟಬೇಕಾಯಿತು ಎಂಬುದನ್ನು ಜಾಬಾಲಿ ಮಹರ್ಷಿಗಳು ಹೇಳುತ್ತಾರೆ.

ಮಹಾಶ್ವೇತೆಯ ಪ್ರೇಮಭಿಕ್ಷೆಯನ್ನು ಕೇಳುತ್ತಿರುವ ವೈಶಂಪಾಯನನಲ್ಲಿ ವಿಪರೀತವಾಗಿ ಸಿಟ್ಟುಗೊಂಡ ಮಹಾಶ್ವೇತೆಯು ಪದೇ ಪದೇ ಈ ರೀತಿ ಕೇಳುತ್ತಿರುವ ನಿನ್ನ ತಲೆಯೇಕೆ ಸಿಡಿದುಹೋಗುವುದಿಲ್ಲ?, ನಿನ್ನ ಉಸಿರೇಕೆ ನಿಂತು ಹೋಗುವುದಿಲ್ಲ? ನಿನ್ನ ನಾಲಿಗೆಯೇಕೆ ನೂರಾರು ಚೂರುಗಳಾಗಿ ಬಿದ್ದು ಹೋಗುವುದಿಲ್ಲ? ಎಂಬುದಾಗಿ ಪ್ರಶ್ನಿಸುತ್ತಾ,

ಖಲ ನಿನ್ನೀ ತನು ಪಂಚಭೂತಮಯಮಲ್ತಂತಾಗೆ ನಿನ್ನಂ ರಸಾ
ತಲಮಂ ಪೊರ್ದಿಸದಾಯ್ತದೇಕಿಳೆ ಮರುತ್ತೇಕೊಯ್ಯದಾಯ್ತೊರ್ಮೊದಲ್
ಜಲಮೇಕಾಳಿಸದಾದುದೋ ದಹಿಸಲಿಲ್ಲೇತರ್ಕೆ ತಾನಗ್ನಿ ಪೇ
ಟಿಲೆ ಪಾಪಾತ್ಮನೆ ತನ್ನವೋಲೆಸಗಲಿಲ್ಲೇಕಾಗಸಂ ಶೂನ್ಯನಂ (ಕರ್ಣಾಟಕ ಕಾದಂಬರಿ.9–42)

ಈ ತೆಱದಿಂದಂ ಗಳಹುವ
ಪಾತಕಿ ನೀಂ ನೀತಿಮಾರ್ಗವಱಿಯದ ತಿರ್ಯ

ಗ್ಞಾತಿಯೊಳೆ ಜನ್ಮವೆತ್ತದ
ದೇತರ್ಕೆ ಮನುಷ್ಯ ಜಾತಿಯೊಳ್ ಜನಿಯಿಸಿದೈ (ಕರ್ಣಾಟಕ ಕಾದಂಬರಿ.9–43)

"ದುಷ್ಟನಾಗಿರುವ ನಿನ್ನ ದೇಹವು ಪಂಚಭೂತಗಳಿಂದಾಗಿರುವುದಲ್ಲವೆಂದು ಕಾಣಿಸುತ್ತದೆ. ಹಾಗೆ ಹುಟ್ಟಿದ್ದಾಗಿದ್ದರೆ ಭೂಮಿಯು ನಿನ್ನನ್ನು ಪಾತಾಳಕ್ಕೆ ತಳ್ಳುತ್ತಿತ್ತು. ವಾಯ ನಿನ್ನನ್ನು ಹರಿಸಿಕೊಂಡು ಹೋಗುತ್ತಿತ್ತು. ನೀರು ನಿನ್ನನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಅಗ್ನಿ ನಿನ್ನನ್ನು ಸುಟ್ಟು ಹಾಕುತ್ತಿತ್ತು. ಪಾಪಿಷ್ಠನಾಗಿರುವ ನಿನ್ನನ್ನು ಆಕಾಶವು ತನ್ನಂತೆ ಬರಿದಾಗಿಸುತ್ತಿತ್ತು. ನೀತಿಮಾರ್ಗವನ್ನು ತಿಳಿದುಕೊಳ್ಳದಿರುವ ನೀನು ತಿರ್ಯಗ್ಜಾತಿಯಲ್ಲಿ ಜನ್ಮವೆತ್ತದೆ ಮನುಷ್ಯ ಜಾತಿಯಲ್ಲಿ ಯಾಕಾಗಿ ಜನ್ಮವೆತ್ತಿದೆ?" ಎಂಬುದಾಗಿ ಬೈಯುತ್ತಾ, "ನಿನ್ನ ನುಡಿಗನುರೂಪಮಪ್ಪ ಜಾತಿಯೊಳ್ ಪುಟ್ಟದೊಡೆಮ್ಮನ್ನರನೆಂದುಂ ಕಾಮಿಸೆ" ಎಂದು ಗಿಳಿಯಾಗುವಂತೆ ಶಾಪ ನೀಡುತ್ತಾಳೆ. ವೈಶಂಪಾಯನ ಮಹಾಶ್ವೇತೆಯನ್ನು ಬಲವಂತದಿಂದ ಪ್ರೀತಿಸಲು ಹೋಗಿ ಗಿಳಿಯಾಗಿರುವ ವಿಚಾರವನ್ನು ತಿಳಿದಾಗ ಮಗನ ಮೇಲೆ ಅಪಾರ ಪ್ರೀತಿಯಿದ್ದ ಶುಕನಾಸನು ಪಾಪ–ಪುಣ್ಯಗಳ ಪ್ರಜ್ಞೆಯಿಂದ ಆಡುವ ಮಾತುಗಳು ಗಮನಾರ್ಹ. ಮಗ ಮಾಡಿರುವ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿ ಗಿಳಿಯಾಗಿ ಹುಟ್ಟಬೇಕಾಗಿದೆ ಎಂಬುದನ್ನು ಆತ ಒತ್ತಿ ಹೇಳುತ್ತಾನೆ.

ಶುಕನಾಸನು ಚಂದ್ರಪೀಡನ ತಂದೆ ತಾರಾಪೀಡನ ಬಳಿ "ತನ್ನ ಹುಟ್ಟಿಗೆ ಕಾರಣವಾಗುವವರಿಗೆ ನಾಶವನ್ನುಂಟುಮಾಡುವ ಬೆಂಕಿ, ಚೇಳು, ಹುಳು, ರೋಗಗಳಂತೆ ಆ ಪಾಪಿಷ್ಟನು ನನ್ನ ಪಾಪಶೇಷದಿಂದಲೇ ಜನಿಸಿರಬೇಕು" ಎನ್ನುತ್ತಾ,

ಗಿಳಿಯಂತೋದಿಯೆ ಪೋದಂ
ಗಿಳಿಯುಂ ಮೊದಲಾಗಿ ನಡಪಿದರನಱೆದು ಮರು
ಳ್ಗೊಳಿಸುವುದಱೆಚ್ಚೈಸುವ
ಫಳಮಿಂತಂತನಿತುಮಾದುದಿಲ್ಲಾ ಖಳನೋಳ್ (ಕರ್ಣಾಟಕ ಕಾದಂಬರಿ.8–142)

ಅವನು ತನ್ನ ವಿದ್ಯಾಭ್ಯಾಸದ ಸಮಯದಲ್ಲಿ ಗಿಳಿಯಂತೆ ಓದಿದ್ದಾನೆ. ಆದರೆ ಗಿಳಿಯೂ ಕೂಡ ತನ್ನನ್ನು ಪೋಷಿಸಿದವರನ್ನು ತಿಳಿದುಕೊಂಡು, ಅವರಲ್ಲಿ ಪ್ರೀತಿಯನ್ನು ತೋರಿಸುತ್ತದೆ. ಪೋಷಿಸಿದವರು ಬಯಸುವುದು ಇದನ್ನೇ. ಅಷ್ಟೂ ಕೂಡ ಇವನಿಗೆ ತಿಳಿಯಲಿಲ್ಲವಲ್ಲ ಎಂಬುದಾಗಿ ಕೊರಗುತ್ತಾನೆ.

ಪರಹಿತಮಿದಾತ್ಮಹಿತಮೆಂ
ಬೆರಡುಮನುಟಿದಟಲನೆಮಗೆ ಮಾಡಿದವಂ ನಿ
ತ್ತರಿಸಂ ತಿರ್ಯಗ್ಜಾತಿಯೊ
ಳೆರಡಿಲ್ಲದೆಯಿಂ ವಿಜಾತಿ ಪುಟ್ಟದೆ ಮಾಣಂ (ಕರ್ಣಾಟಕ ಕಾದಂಬರಿ.8–143)

'ಇದು ಇತರರಿಗೆ ಹಿತವಾಗುತ್ತದೆ. ತನಗೂ ಹಿತವಾಗುತ್ತದೆ' ಎಂಬುದನ್ನು ತಿಳಿದುಕೊಳ್ಳದೆ ನಮಗೆ ಅಳಲನ್ನುಂಟುಮಾಡಿದ ಇವನು ಗುರಿಮುಟ್ಟುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವನು ಮನುಷ್ಯ ಜಾತಿಯನ್ನು ಬಿಟ್ಟು ತಿರ್ಯಗ್ಜಾತಿಯಲ್ಲಿ ಹುಟ್ಟದೇ ಇರಲಾರ ಎಂಬುದಾಗಿ ಸಮರ್ಥಿಸುತ್ತಾನೆ.

ಜಾಬಾಲಿ ಮಹರ್ಷಿಗಳಿಂದ ತನ್ನ ಪೂರ್ವಜನ್ಮದ ನೆನೆಪುಗಳು ಮರಳಿಬಂದದ್ದರಿಂದ ವೈಶಂಪಾಯನ ಗಿಳಿಯು ಮರಳಿ ಮಹಾಶ್ವೇತೆಯನ್ನು ನೋಡಬೇಕೆಂದು ಹಂಬಲಿಸುತ್ತದೆ. ಯಾವ ಕೆಲಸವನ್ನು ಮಾಡಲಾಗದ ಈ

ತಿರ್ಯಗ್ಜಾತಿಯಲ್ಲಿ ಹುಟ್ಟಿದ್ದೇನೆ, ಮನುಷ್ಯ ದೇಹದಲ್ಲಿ ತಾನು ದೀರ್ಘಾಯುಷ್ಯವನ್ನು ಪಡೆಯುವ ದಾರಿ ಯಾವುದೆಂದು ವೈಶಂಪಾಯನವು ಚಿಂತಿಸುತ್ತದೆ.

ಪಡೆಯಲ್ಬಾರದು ಮನ್ನನಂತಭವದೊಳ್ ಮಾನುಷ್ಯಮಂ ಮತ್ತೆಯುಂ
ಪಡೆಯಲ್ಬರ್ಕುಮೆ ವಿಪ್ರಜಾತಿಯನದಂ ಪೆತ್ತುಂ ಮುನೀಂದ್ರತ್ವಮಂ
ಪಡೆಯಲ್ಬರ್ಕುಮೆ ಮತ್ತಮಾರ್ಗೆ ಪಡೆಯಲ್ ದೇವತ್ವಮಂ ನೊಡದಂ
ಪಡೆದಾನಿಂತಿರೆ ಶಾಪದಿಂದಕಟ ತಿರ್ಯಗ್ಜಾತಿಯೊಳ್ ಬಿಟ್ಟಿನೇ

(ಕರ್ಣಾಟಕ ಕಾದಂಬರಿ.10–15)

ಜನ್ಮಗಳಲ್ಲಿಯೇ ಮನುಷ್ಯಜನ್ಮವನ್ನು ಪಡೆಯುವುದು ಬಹಳ ಕಷ್ಟ. ಅದರಲ್ಲೂ ಬ್ರಾಹ್ಮಣಜಾತಿಯಲ್ಲಿ ಹುಟ್ಟುವುದು ಇನ್ನೂ ಕಷ್ಟ. ಬ್ರಾಹ್ಮಣಜಾತಿಯಲ್ಲಿ ಹುಟ್ಟಿದರೂ ಮುನಿಯಾಗುವುದು ಸಾಧ್ಯವಿಲ್ಲ. ಅದರಲ್ಲೂ ದೇವತ್ವವನ್ನು ಪಡೆಯುವುದು ಇನ್ನೂ ಕಷ್ಟ ಸಾಧ್ಯ. ಹೀಗಿರಲು ನಾನು ದೇವತ್ವವನ್ನು ಪಡೆದಿದ್ದರೂ, ಶಾಪದಿಂದಾಗಿ ಹೀಗೆ ತಿರ್ಯಗ್ಜಾತಿಯಲ್ಲಿ ಹುಟ್ಟಿಬಿಟ್ಟೆನಲ್ಲಾ ಎಂಬುದಾಗಿ ವೈಶಂಪಾಯನ ಗಿಳಿಯು ಕೊರಗುತ್ತದೆ. ಹಾಗಾಗಿ ಈ ಜನ್ಮವನ್ನು ಹೇಗಾದರೂ ಮಾಡಿ ಕೊನೆಗಾಣಿಸಿಬಿಡಬೇಕೆಂದು ಯೋಚಿಸುತ್ತದೆ.

ಅನಂತರದಲ್ಲಿ ಪ್ರಾಣಮಿತ್ರನಾದ ಕಪಿಂಜಲನ ಭೇಟಿಯಾಗುವ ಸಂದರ್ಭದಲ್ಲಿ ಗಿಳಿಯಾಗಿ ಜನಿಸಿದ್ದರಿಂದ ವೈಶಂಪಾಯನನ ತೊಳಲಾಟ ಹೀಗಿದೆ.

ದೊರೆಕೊಂಡತ್ತು ಭವದ್ವಯಾಂತರದೊಳೀಗಳ್ ಕಾಣ್ಕೆಕಂಡೇನೊ ಚೆ
ಚ್ಚರಮೆಟ್ಟಿಪ್ಪುವ ಕುಳ್ಳಿರಲ್ ಕುಡುವ ನಿನ್ನೀ ಸೇದೆವಟ್ಟಂಗಮಂ
ಕರದಿಂದೊತ್ತುವ ಶಕ್ತಿಯಂ ತಳೆವುದರ್ಕಾಂ ನೋಂತೆನಿಲ್ಲಣ್ಣ ನೀಂ
ಬರೆಯುಂ ಪಾಪಿಯೆನೇವೆನೆಂದು ಪಿರಿದುಂ ಶೋಕಾಂಧನಾಗಿರ್ಪಿನಂ

(ಕರ್ಣಾಟಕ ಕಾದಂಬರಿ.10–20)

"ಎರಡು ಜನ್ಮಗಳನ್ನು ಕಳೆದ ನಂತರ ನಿನ್ನ ಭೇಟಿಯಾಗುತ್ತಿದ್ದರೂ ಎದ್ದು ನಿನ್ನನ್ನು ತಬ್ಬಿಕೊಳ್ಳುವುದಕ್ಕೆ, ಕುಳಿತುಕೊಳ್ಳುವುದಕ್ಕೆ, ಆಸನವನ್ನು ಕೊಡುವುದಕ್ಕೆ, ಆಯಾಸಗೊಂಡಿರುವ ನಿನ್ನನ್ನು ಸಂತೈಸುವುದಕ್ಕೆ ನನ್ನಿಂದ ಸಾಧ್ಯವಾಗುತ್ತಿಲ್ಲ. ನೀನು ನನ್ನ ಬಳಿಯಿದ್ದರೂ ಪಾಪಿಯಾಗಿರುವ ನನ್ನಿಂದ ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ" ಎಂಬುದಾಗಿ ಗಿಳಿಯು ಕೊರಗುತ್ತದೆ. ವೈಶಂಪಾಯನ ಗಿಳಿಗೆ ಆಕಾಶದಲ್ಲಿ ಹಾರುವ ಶಕ್ತಿ ಬಂದ ಮೇಲೆ ಚಂದ್ರಾಪೀಡನನ್ನು ನೋಡುವುದಕ್ಕೆಂದು ಹೊರಟು ಬೇಡನೊಬ್ಬನಿಗೆ ಸೆರೆ ಸಿಕ್ಕುತ್ತದೆ. ಬಂಧನದಲ್ಲಿರುವಾಗ ಗಿಳಿ ಮತ್ತೆ ತಾನು ಕಾಮಾತುರನಾಗಿ ಮಾಡಿರುವ ತಪ್ಪುಗಳನ್ನು ನೆನೆಸಿಕೊಂಡು ಕೊರಗುತ್ತದೆ.

ಸುರಲೋಕಭ್ರಷ್ಟನೆಂ ಮರ್ತ್ಯರೊಳುದಯಿಪ ತಿರ್ಯಕ್ತ್ವದೊಳ್ ನಿಲ್ವ ಚಂಡಾ
ಲರ ಕೆಯ್ಯೊಳ್ ಬೀಳ್ವ ತೋಲ್ಪಂಜರದ ಪಡಿಕೆಯೊಳ್ ನಿಲ್ವ ದುರ್ವಾರದುಃಖೋ
ತ್ಕರಮೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ ದಲಿಂ ಮೀಱಿದಂತಾ
ಗಿರಿಸಲ್ವೇಟಕ್ಕಿಂದವಂ ನಿಗ್ರಹಿಪ ನಿಯಮದಿಂ ಮೌನದಿಂದಿರ್ದೆನಾಗಳ್

(ಕರ್ಣಾಟಕ ಕಾದಂಬರಿ.10–46)

"ದೇವಲೋಕದಿಂದ ಕೆಳಗಿಳಿದು ಮನುಷ್ಯಜಾತಿಯಲ್ಲಿ ಹುಟ್ಟಿದೆ. ಅನಂತರ ಹಕ್ಕಿಯಾಗಿ ಹುಟ್ಟಿದೆ. ಚಂಡಾಲರ ಕೈಗೆ ಸಿಕ್ಕಿಬಿದ್ದು ಪಂಜರದ ಬಂಧನಕ್ಕೆ ಒಳಗಾದೆ.

ಹೀಗೆ ಸಹಿಸಲು ಸಾಧ್ಯವಿಲ್ಲದ ದುಃಖಸಮೂಹವೆಲ್ಲ ಬಂದಿರುವುದನ್ನು ವಿಚಾರ ಮಾಡಿ ನೋಡಿದರೆ ಇಂದ್ರಿಯಗಳ ನಿಗ್ರಹಿಸದ ನನ್ನದೇ ತಪ್ಪು. ಇನ್ನಾದರೂ ನಾನು ಹತೋಟಿ ಮೀರದಂತೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು"

ಚಂಡಾಲರ ಸೇರೆಯಲ್ಲಿರುವ ವೈಶಂಪಾಯನ ಗಿಳಿಯು ಆಹಾರವನ್ನು ತೆಗೆದುಕೊಳ್ಳದೆ ಪ್ರತಿಭಟನೆಯನ್ನು ಸೂಚಿಸುತ್ತದೆ. ಚಂಡಾಳ ಕನ್ನಿಕೆಯು ಆಹಾರ ತೆಗೆದುಕೊಳ್ಳದಿರುವುದೇಕೆ ಎಂಬುದಾಗಿ ಪ್ರಶ್ನಿಸಿದಾಗ ತಾನು ಹಿಂದಿನ ಜನ್ಮಗಳ ನೆನಪುಳ್ಳವನು, ಏನನ್ನು ತಿನ್ನಬೇಕು, ತಿನ್ನಬಾರದು ಎಂಬ ಸಂಸ್ಕಾರವುಳ್ಳವನು ಎಂಬುದಾಗಿ ಉತ್ತರಿಸುತ್ತದೆ. ಅದಕ್ಕೆ ಆಕೆ "ಭಕ್ಷಾ ಭಕ್ಷ್ಯ ರಹಿತಮಪ್ಪ ತಿರ್ಯಗ್ಜಾತಿಯೊಳ್ ಪುಟ್ಟಿದ ನಿನಗೆಯುಮಭಕ್ಷ್ಯಮೊಂದ ಮಿಲ್ಲಂ ಮೊದಲೊಳುತ್ಕೃಷ್ಟಜಾತಿಯೊಳ್ ಪುಟ್ಟಿ ತಿರ್ಯಗ್ಜಾತಿಗೆ ಬೀಳ್ದಿಂದೇ ನಿನ್ನ ವಿವೇಕಮಜಿದಂತುಟೆವಲಮಿನ್ನಿನಗೆ ಜಾತಿಗೆ ತಕ್ಕಂತಾಹಾರ ಮನಾಚರಿಸೆ ದೋಷಮಿಲ್ಲ ಮಲ್ಲ....."(ಕರ್ಣಾಟಕ ಕಾದಂಬರಿ.10,ವ.ಪು.495) ಭಕ್ಷ್ಯಾಭಕ್ಷ್ಯ ನಿಯಮಗಳೇನೂ ಇಲ್ಲದ ತಿರ್ಯಗ್ಜಾತಿಯಲ್ಲಿ ಹುಟ್ಟಿದ ನಿನಗೆ ತಿನ್ನಲು ನಿಷೇಧ ಎಂಬುದು ಯಾವುದೂ ಇಲ್ಲ. ಉತ್ಕೃಷ್ಟವಾದ ಜಾತಿಯಲ್ಲಿ ಹುಟ್ಟಿ ತಿರ್ಯಗ್ಜಾತಿಗೆ ಬಿದ್ದಲ್ಲಿಯೇ ನಿನ್ನ ವಿವೇಕ ಏನೆಂಬುದು ಅರ್ಥವಾಗುತ್ತದೆ. ನೀನು ನಿನ್ನ ಜಾತಿಗೆ ತಕ್ಕುದಾದ ಆಹಾರವನ್ನು ಸೇವಿಸಿದರೆ ಯಾವ ದೋಷವೂ ಬರುವುದಿಲ್ಲ. ಚಂಡಾಳ ಕನ್ನಿಕೆಯ ಈ ಮಾತುಗಳಲ್ಲಿಯೂ ಕೂಡ ಪ್ರಾಣಿಜನ್ಮದ ಕುರಿತಾಗಿ ನೇತ್ಯಾತ್ಮಕ ದೃಷ್ಟಿ ವ್ಯಕ್ತವಾಗಿದೆ.

ಪ್ರಾಣಿಜನ್ಮ ಪ್ರಾಪ್ತವಾಗಿರುವುದಕ್ಕೆ ಪದೇ ಪದೇ ತೀವ್ರವಾಗಿ ಕೊರಗುತ್ತಿರುವ ಉದಾಹರಣೆಯಾಗಿ ಕರ್ಣಾಟಕ ಕಾದಂಬರಿಯ ವೈಶಂಪಯನ ಗಿಳಿಯ ಪಾತ್ರ ಕಾಣಿಸುತ್ತದೆ. ಪ್ರಾಣಿಜನ್ಮ ಪ್ರಾಪ್ತವಾಗಿರುವುದಕ್ಕೆ ಪದೇ ಪದೇ ಕೊರಗುತ್ತಿರುವ ಚಿತ್ರಣ ಇಷ್ಟು ಗಾಢವಾಗಿ ಬೇರೆ ಕೃತಿಗಳಲ್ಲಿ ಕಾಣಿಸುವುದಿಲ್ಲ. ವಡ್ಡಾರಾಧನೆಯ ಕಥೆಗಳ ಅನೇಕ ಕಡೆಗಳಲ್ಲಿ ಪಾಪಕ್ಕನುಗುಣವಾಗಿ ಪ್ರಾಣಿಜನ್ಮ ಪ್ರಾಪ್ತವಾಗುತ್ತದೆಯಾದರೂ ಇಷ್ಟು ಗಾಢವಾದ ಪಾಪಪ್ರಜ್ಞೆ ಕಾಣಿಸುವುದಿಲ್ಲ. ನಾಗವರ್ಮ ತನ್ನ ಕಾವ್ಯವನ್ನು ಗಿಳಿಯ ಸ್ವನಿರೂಪಣೆಯ ಮಾದರಿಯಲ್ಲಿ ನಿರೂಪಿಸಿರುವ ಕಾರಣ ಮಾಡಿರುವ ತಪ್ಪಿಗೆ ತೀವ್ರ ಪಶ್ಚಾತ್ತಾಪ ಪಡುತ್ತಿರುವಂತೆ ಚಿತ್ರಿಸುವುದಕ್ಕೆ ಸಾಧ್ಯವಾಗಿದೆ.

ಪರಾಮರ್ಶನ ಕೃತಿಗಳು

1. ನಾರಾಯಣ ಶಾಸ್ತ್ರಿ ಹ.ವೆ. ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2017
2. ವರದರಾಜ ಹುಯಿಲಗೋಳ, ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ, ಸಾಹಿತ್ಯ ಭಂಡಾರ, ಹುಬ್ಬಳ್ಳಿ, 1976
3. ವೆಂಕಣ್ಣಯ್ಯ ಟಿ.ಎಸ್., ಕರ್ನಾಟಕ ಕಾದಂಬರಿ ಸಂಗ್ರಹ, ಪ್ರಸಾರಾಂಗ, ಮೈಸೂರು, 1975
4. ಸಂಧ್ಯಾರೆಡ್ಡಿ ಕೆ.ಆರ್. ಪ್ರಾಣಿ ಕಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
5. ಸೀತಾರಾಮಯ್ಯ ವಿ. ಕರ್ನಾಟಕ ಕಾದಂಬರಿ, ಮೈಸೂರು ವಿವಿ. 1957

❖❖❖

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 11, Issue 1, July - September 2022
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com